05 September 2026 Saturday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಸತ್ಯವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಬೇಕಿಲ್ಲ ,ಆದರೆ ಸುಳ್ಳನ್ನು ಸರಿಯಾಗಿ ಹೇಳಲು ಪದೆ ಪದೇ ನೆನಪಿಸಿ ಕೊಳ್ಳಬೇಕಾಗುತ್ತದೆ!

-ಸ್ನೇಹಾ ಆನಂದ್

info.varthaman@gmail.com



ಅನ್ನ ಸುವಿಧ ಯೋಜನೆ ಕಾರ್ಯನಿರ್ವಹಿಸುತ್ತಿಲ್ಲ: ಸಮಿತಿಗೆ ಸುಳ್ಳು ಮಾಹಿತಿ — ಪುಟ ಸಂ. 2



ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಜನ್ಮ ವರ್ಧಂತೋತ್ಸವ — ಪುಟ ಸಂ. 3



ಚಾಮರಾಜನಗರ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಪ್ರತಿಭಟನೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 262 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಕೆರೆ ಒತ್ತುವರಿಗೆ ಕ್ರಿಮಿನಲ್ ಕೇಸ್

## ಒತ್ತುವರಿ ಶೂರರಿಗೆ ಸಚಿವ ಈಶ್ವರ್ ಖಂಡ್ರೆ ಎಚ್ಚರಿಕೆ



**ಬೆಂಗಳೂರು:** ಗ್ರಾಮ ಪಂಚಾಯಿತಿ ವ್ಯಾಪ್ತಿಯಲಿರುವ ಯಾವುದೇ ಕೆರೆಯನ್ನು ಒತ್ತುವರಿ ಮಾಡಿ ದ್ದರೆ ನಿರ್ದಾಕ್ಷಿಣ್ಯವಾಗಿ ತೆರವು ಮಾಡಿಸಲಾಗುವುದು. ಅಲ್ಲದೆ, ಒತ್ತುವರಿದಾರರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ್ ಖಂಡ್ರೆ ಎಚ್ಚರಿಕೆ ನೀಡಿದರು.

ಬೆಂಗಳೂರಿನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಗ್ರಾ.ಪಂ. ವ್ಯಾಪ್ತಿಯಲ್ಲಿ 32,504 ಕೆರೆಗಳಿವೆ. 11,498 ಕೆರೆ ಒತ್ತುವರಿ ಆಗಿತ್ತು. ಈ ಪೈಕಿ 6,670 ಕೆರೆ ಒತ್ತು ವರಿ ತೆರವು ಮಾಡಲಾಗಿದೆ. ಇನ್ನೂ 4,828 ಕೆರೆಗಳ 11,671 ಎಕರೆ ಒತ್ತುವರಿ ತೆರವು ಮಾಡ ಬೇಕಿದೆ. ಕೂಡಲೇ ಕೆರೆ ಒತ್ತುವರಿ ತೆರವಿಗೆ ಸೂಚನೆ ನೀಡಲಾಗಿದೆ. ಇನ್ನು ಮುಂದೆ ಯಾರೇ ಕೆರೆ ಒತ್ತುವರಿ ಮಾಡಿದರೂ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದರು.

ಕರ್ನಾಟಕ ದೇಶದಲ್ಲೇ 2ನೇ ಅತಿ ಹೆಚ್ಚು ಬರಡು ಭೂಮಿ ಇರುವ ರಾಜ್ಯ.ಗ್ರಾಮೀಣ ಪ್ರದೇಶಕ್ಕೆ ಕುಡಿಯುವ

ಪುಟ 2ಕ್ಕೆ

### ವಾಟರ್ ಬಜೆಟಿಂಗ್: ಕರ್ನಾಟಕವೇ ಮೊದಲು

ಇಡೀ ದೇಶದಲ್ಲಿ ವಾಟರ್ ಬಜೆಟಿಂಗ್ ಮಾಡಿದ ಪ್ರಥಮ ರಾಜ್ಯ ಕರ್ನಾಟಕ. ಇದರಿಂದ ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಲಭ್ಯವಿರುವ ನೀರಿನ ಪ್ರಮಾಣ ಮತ್ತು ಆ ಪ್ರದೇಶದ ನೀರಿನ ಬೇಡಿಕೆ,

# ಕೆಆರ್‌ಎಸ್ ಮಟ್ಟ 3 ಅಡಿ ಕುಸಿತ

## ತಮಿಳುನಾಡು ದಾಹ ನೀಗಿಸಲು ನಿರಂತರ ನೀರು ಬಿಡುಗಡೆ



**ಮೈಸೂರು:** ಮೈಸೂರು ಭಾಗದ ಜೀವನಾಡಿ ಕೆಆರ್‌ಎಸ್ ಜಲಾಶಯದಿಂದ ತಮಿಳುನಾಡಿನ ನೀರಿನ ದಾಹ ತೀರಿಸಲು ನಿರಂತರ ನೀರು ಹರಿಸಲಾಗುತ್ತಿದೆ. ಇದರಿಂದ ಕಾವೇರಿ ಕೊಳ್ಳದ ಜಲಾಶಯಗಳು ವೇಗವಾಗಿ ಬರಿದಾಗುತ್ತಿವೆ.

ಮಳೆ ಸಂಪೂರ್ಣ ಕೈಕೊಟ್ಟಿರುವ ನಡುವೆಯೂ ಹೊರಹರಿವು ಏರಿಕೆಯಾಗುತ್ತಿರುವುದು ಈ ಭಾಗದ ರೈತರು ಹಾಗೂ ಸಾರ್ವಜನಿಕರಲ್ಲಿ ತೀವ್ರ ಆತಂಕ ಮೂಡಿಸಿದೆ. ಕಬಿನಿ ಜಲಾಶಯದಲ್ಲಿ ನೀರಿನ ಮಟ್ಟ ಗಣನೀಯವಾಗಿ ಕುಸಿದಿದೆ. ಹೀಗಾಗಿ ತಮಿಳುನಾಡಿಗೆ ಹರಿಸಬೇಕಾದ ಬಹುಪಾಲು ನೀರನ್ನು ಕೆಆರ್‌ಎಸ್ ಡ್ಯಾಂನಿಂದಲೇ ಬಿಡಲಾಗುತ್ತಿದೆ. ಪ್ರಸ್ತುತ ಕೆಆರ್‌ಎಸ್‌ನಿಂದ ನದಿಗೆ 9 ಸಾವಿರ ಕ್ಯೂಸೆಕ್‌ಗೂ ಅಧಿಕ ನೀರು ಬಿಡುಗಡೆ ಮಾಡಲಾಗುತ್ತಿದೆ.

ಈ ಪ್ರಮಾಣದ ನೀರು ಬಿಡುಗಡೆ ಮಾಡುತ್ತಿರುವುದರಿಂದ 3 ದಿನದಲ್ಲಿ 3 ಅಡಿ ಕುಸಿತ ಕಂಡಿದೆ. 111 ಅಡಿ ಇದ್ದ ನೀರಿನ ಮಟ್ಟ ಇದೀಗ 108 ಅಡಿಗೆ ಇಳಿಕೆಯಾಗಿದೆ. ಸದ್ಯ ಹೇಮಾವತಿ ಜಲಾಶಯದಿಂದ

ಪುಟ 2ಕ್ಕೆ

# ದಸರಾಗೆ ಅಭಿಮನ್ಯು 'ರೀಎಂಟ್ರಿ'

## ಅಭಿಮಾನಿಗಳ ಒತ್ತಾಸೆಗೆ ಮಣಿದು ಸರ್ಕಾರದ ನಿರ್ಧಾರ



**ಮೈಸೂರು:** ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಸುಮಾರು 25 ವರ್ಷಗಳಿಗೂ ಅಧಿಕ ಕಾಲ ಭಾಗವಹಿಸಿದ್ದ ಹಾಗೂ ಸತತ 6 ಬಾರಿ ಚಿನ್ನದ ಅಂಬಾರಿಯನ್ನು ಹೊತ್ತು ವಿಜೃಂಭಣೆಯಿಂದ ಹೆಜ್ಜೆ ಹಾಕಿದ್ದ ಆನೆ ಅಭಿಮನ್ಯು ಈ ಬಾರಿಯ ದಸರಾಗೆ ಬರುತ್ತಿದ್ದಾನೆ.

ಅಭಿಮನ್ಯು ಅಭಿಮಾನಿಗಳ ಒತ್ತಾಯ, ಒತ್ತಡಕ್ಕೆ ಸರ್ಕಾರ ಕೊನೆಗೂ ಮಣಿದಿದೆ. 2026ರ ಮೈಸೂರು ದಸರಾ ಮಹೋತ್ಸವದಲ್ಲಿ ಕ್ಯಾಪ್ಟನ್ ಅಭಿಮನ್ಯು 'ನಿಶಾನೆ ಆನೆ'ಯಾಗಿ ಭಾಗವಹಿಸುವುದು ಅಧಿಕೃತವಾಗಿ ಖಚಿತಪಟ್ಟಿದೆ. ಅಭಿಮನ್ಯುವಿಗೆ 60 ವರ್ಷ ಪೂರ್ಣಗೊಂಡ ಹಿನ್ನೆಲೆಯಲ್ಲಿ ಈ ಬಾರಿ ಚಿನ್ನದ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿ ನೀಡಿ, ಆಗಸ್ಟ್ 26ರ ಗಜಪಯಣದ ವೇಳೆ ಗೌರವಯುತ ಬೀಳ್ಕೊಡುಗೆ ನೀಡಲಾಗಿತ್ತು. ಆದರೆ, ದಸರಾ ಆನೆಗಳ ಪಟ್ಟಿಯಲ್ಲಿ ಅಭಿಮನ್ಯು ಹೆಸರು ಇಲ್ಲದಿರುವುದಕ್ಕೆ ಅಭಿಮಾನಿಗಳಿಂದ ತೀವ್ರ ಬೇಸರ ವ್ಯಕ್ತವಾಗಿತ್ತು. ಸಾರ್ವಜನಿಕ ವಲಯದಲ್ಲಿ ದೊಡ್ಡ ಮಟ್ಟದ ಒತ್ತಾಯ ಕೇಳಿಬಂದಿತ್ತು.

ಹೀಗಾಗಿ ಜನರ ಒತ್ತಾಯಕ್ಕೆ ಮಣಿದ ಸರ್ಕಾರ, ಅಂತಿಮವಾಗಿ ಅಭಿಮನ್ಯುವನ್ನು ಜಂಬೂಸವಾರಿಯಲ್ಲಿ ನಿಶಾನೆ ಆನೆಯನ್ನಾಗಿ ಕಳುಹಿಸಲು ಹಸಿರು ನಿಶಾನೆ ನೀಡಿದೆ. ಅರಣ್ಯ ಸಚಿವ ರಾಮ ಲಿಂಗಾರೆಡ್ಡಿ ಅವರು ಈ ಕುರಿತು ಪ್ರಕಟಣೆ ಹೊರಡಿಸಿದ್ದಾರೆ. ಅಭಿಮನ್ಯುವಿನ ಸುದೀರ್ಘ ಸೇವೆ ಯನ್ನು ಸ್ಮರಿಸುವ ನಿಟ್ಟಿನಲ್ಲಿ ಈ ವಿಶೇಷ ಗೌರವ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

### ಯುವ ದಸರಾಗೆ ಪ್ರಭುದೇವಗೆ ಆಹ್ವಾನ



**ಮೈಸೂರು:** ಈ ಬಾರಿಯ ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮ ಯುವ ದಸರಾ ಉದ್ಘಾಟನೆಗೆ ಮೂಲತಹ ಕನ್ನಡಿಗ ರಾದ ಖ್ಯಾತ ನಟ, ನೃತ್ಯಪಟು ಪ್ರಭುದೇವ ಅವ ರಿಗೆ ಆಹ್ವಾನ ನೀಡಲಾಗಿದೆ.

ಮೈಸೂರು ಜಿಲ್ಲಾಡಳಿತ ನಟ ಪ್ರಭುದೇವ ಅವರಿಗೆ ಅಧಿಕೃತ ಆಹ್ವಾನ ಕೊಟ್ಟಿದೆ. ಪೇಟಾ ತೊಡಸಿ, ಶಾಲು, ಹೂವಿನ ಹಾರ ಹಾಕಿ ನಟನಿಗೆ ಗೌರವ ಪೂರ್ವಕವಾಗಿ ಆಹ್ವಾನ ನೀಡಲಾಗಿದೆ.

ದಸರಾದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವಾಗಿ ಯುವ ದಸರಾ ಒಂದು ಪ್ರಮುಖ ಆಕರ್ಷಣೆ. ಈ ಸಮಾರಂಭದಲ್ಲಿ ಸಿನಿತಾರೆಯರು, ಖ್ಯಾತ ಗಾಯಕರು ಪಾಲ್ಗೊಂಡು ಯುವಜನತೆಗೆ ಮನರಂಜನೆಯ ರಸದೌತಣ ಉಣಬಡಿಸುತ್ತಾರೆ. ವಿವಿಧ ಕಲಾತಂಡಗಳು ಇಲ್ಲಿ ನೃತ್ಯ ಪ್ರದರ್ಶನ ಮಾಡುತ್ತವೆ. ಖ್ಯಾತ ಗಾಯಕರು ತಮ್ಮ ಸುಮಧುರ ಗಾಯನದಿಂದ ಯುವಜನರನ್ನು ರಂಜಿಸುತ್ತಾರೆ.

### ಶ್ರೀಕಂಠ ಪಟ್ಟದ ಆನೆ, ಏಕಲವ್ಯನಿಗೆ ನಿಶಾನೆ ಪಟ್ಟ





**ಮೈಸೂರು:** ರಾಜಮಾತೆ ಪ್ರಮೋದಾದೇವಿ ಒಡೆಯರ್ ಅವರು ಅರಮನೆ ಧಾರ್ಮಿಕ ವಿಧಿವಿಧಾನಗಳಿಗಾಗಿ 'ಶ್ರೀಕಂಠ' ಆನೆಯನ್ನು ಪಟ್ಟದ ಆನೆಯನ್ನಾಗಿ ಹಾಗೂ 'ಏಕಲವ್ಯ' ಆನೆಯನ್ನು ನಿಶಾನೆ ಆನೆಯನ್ನಾಗಿ ಅಧಿಕೃತವಾಗಿ ಆಯ್ಕೆ ಮಾಡಿದ್ದಾರೆ.

ಶ್ರೀಕಂಠ ಆನೆಗೆ ಇದು ಸತತ ಎರಡನೇ ಬಾರಿ ಪಟ್ಟದ ಆನೆಯಾಗುವ ಗೌರವ ಸಿಕ್ಕಿದೆ. ನವರಾತ್ರಿಯ ಒಂಬತ್ತು ದಿನಗಳ ಕಾಲ ಅರಮನೆಯೊಳಗೆ ನಡೆಯುವ ಖಾಸಗಿ ದರ್ಬಾರ್, ಆಯುಧ ಪೂಜೆ ಮತ್ತು ಸಾಂಪ್ರದಾಯಿಕ ಧಾರ್ಮಿಕ ಆಚರಣೆಗಳಲ್ಲಿ ಇವೆರಡೂ ಆನೆಗಳು ಪ್ರಮುಖ ಪಾತ್ರ ವಹಿಸಲಿವೆ.

#### 'ಅಂಬಾರಿ ಆನೆ' ಯಾವುದು?

ಮೈಸೂರು ಅರಮನೆ ಆವರಣದಲ್ಲಿ ದಸರಾ ಗಜಪಡೆಗಳಿಗೆ ತಾಲೀಮು ಭರದಿಂದ ಸಾಗಿದೆ. ಆದರೆ, ಇನ್ನೂ ಅಂಬಾರಿ ಆನೆಯ ಆಯ್ಕೆ ನಡೆದಿಲ್ಲ. ದಸರಾ ಜಂಬೂಸವಾರಿಯಲ್ಲಿ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಹೊರಲಿರುವ 'ಅಂಬಾರಿ ಆನೆ'ಯನ್ನು

ಪುಟ 2ಕ್ಕೆ

### ಮೈಸೂರಿನಲ್ಲಿ ಮತ್ತೊಬ್ಬ 'ಚಿನ್ನತಂಬಿ' ವಂಚನೆ



**ಮೈಸೂರು:** ಚಿನ್ನದ ಹೆಸರಿನಲ್ಲಿ ಗ್ರಾಹಕರಿಗೆ ವಂಚನೆ ಮಾಡುತ್ತಿರುವ ಚಿನ್ನದ ವ್ಯಾಪಾರಿಗಳ ಸರಣಿ ಅಪರಾಧ ಪ್ರಕರಣಗಳು ಮೈಸೂರಿನಲ್ಲಿ ಮುಂದುವರಿದಿವೆ. ಚಿನ್ನತಂಬಿ, ಮೋಹನ್ ಲಾಲ್ ಬಳಿಕ ಈಗ ಯೋಗೇಶ್ ಎಂಬುವವನ ಚಿನ್ನದ ವಂಚನೆ ಬೆಳಕಿಗೆ ಬಂದಿದೆ.

ಧನಲಕ್ಷ್ಮಿ ಗೋಲ್ಡ್ ಕಂಪನಿ ಮಾಲೀಕ ಯೋಗೇಶ್ ನೂರಾರು ಗ್ರಾಹಕರಿಗೆ ಪಂಗ ನಾಮ ಹಾಕಿದ್ದಾನೆ. ನೂರಕ್ಕೂ ಹೆಚ್ಚು ಜನರಿಂದ ಚಿನ್ನ ಅಡವಿಟ್ಟುಕೊಂಡು ಮೋಸ ಮಾಡಿರುವ ಆರೋಪ ಯೋಗೇಶ್ ಮೇಲೆ ಬಂದಿದೆ. ಅಡವಿಟ್ಟ ಚಿನ್ನವನ್ನು ವಾಪಸ್ ಕೊಡದೇ ಸತಾಯಿಸುತ್ತಿದ್ದಾನೆ. ಕಳೆದ 1 ವರ್ಷದಿಂದ ಗ್ರಾಹಕರಿಗೆ ಯೋಗೇಶ್ ಮೋಸ ಮಾಡುತ್ತಲೇ ಬಂದಿದ್ದಾನೆ.

#### ಪೊಲೀಸರು ಶಾಮೀಲು?

ಚಿನ್ನದ ಮೋಸಗಾರನ ಬೆನ್ನಿಗೆ ಮೈಸೂರು ಪೊಲೀಸರು ನಿಂತಿದ್ದಾರೆಯೇ? ಎಂಬ ಅನುಮಾನ ಹುಟ್ಟುಹಾಕುತ್ತಿದೆ. ಇದಕ್ಕೆ ಪೂರಕವಾಗಿ ಧನಲಕ್ಷ್ಮಿ ಗೋಲ್ಡ್ ಕಂಪನಿ ಮಾಲೀಕ ಮಾತನಾಡಿರುವ ಆಡಿಯೋ ಕೂಡ ಲಭ್ಯವಾಗಿದೆ. ಹಣದ ವ್ಯವಹಾ ರದಲ್ಲಿ ಪೊಲೀಸ್ ಅಧಿಕಾರಿಗಳ ಹೆಸ ರನ್ನೂ ಯೋಗೇಶ್ ಆಡಿಯೋದಲ್ಲಿ ಪ್ರಸ್ತಾಪಿಸಿರುವುದು ಕಂಡುಬಂದಿದೆ.

ಎಸಿಪಿ, ಇನ್ಸ್ಪೆಕ್ಟರ್‌ಗಳಿಗೆ ಹಣ ನೀಡಿ ರುವುದಾಗಿ ಯೋಗೇಶ್ ಆಡಿಯೋದಲ್ಲಿ ಮಾತನಾಡಿದ್ದಾನೆ. ಲಂಚದ ಹಣ ಕೊಟ್ಟು ಕೇಸ್ ಅಡ್ಜಸ್ಟ್ ಮಾಡ್ತಿದ್ದೇನೆ ಎಂದು ಯೋಗೇಶ್ ಆಡಿಯೋದಲ್ಲಿ ಗ್ರಾಹಕರೊಬ್ಬರಿಗೆ ಹೇಳಿದ್ದಾನೆ. ಏಳು ತಿಂಗಳಾದರೂ ಹಣ ವಾಪಸ್ ನೀಡ ದಿರುವ ಬಗ್ಗೆ ಗ್ರಾಹಕನ ನಡುವೆ ಮಾತು ಕತೆ ವೇಳೆ ಈ ವಿಚಾರ ಯೋಗೇಶ್ ಹೇಳಿದ್ದಾನೆ. ಧನಲಕ್ಷ್ಮಿ ಗೋಲ್ಡ್ ಕಂಪನಿ ಮಾಲೀಕನ ವಿರುದ್ಧ ಲಕ್ಷ್ಮಿಪುರಂ ಪೊಲೀಸ್ ಠಾಣೆಗೆ ಗ್ರಾಹಕರು ದೂರು ನೀಡಿದ್ದರು. ಆದರೂ ಮಾಲೀಕನ ವಿರುದ್ಧ ಪೊಲೀಸರು ಕ್ರಮ ಕೈಗೊಂಡಿಲ್ಲ ಎಂದು ಗ್ರಾಹಕರು ಆರೋಪಿಸಿದ್ದಾರೆ.

# ಕೇಂದ್ರವೇ ಸಾಲ ಮನ್ನಾ ಮಾಡಲಿ

## ಒತ್ತಡ ಹೇರಲು ಸರ್ವಪಕ್ಷ ನಿಯೋಗ: ಸಿಎಂ ಡಿ.ಕೆ.ಶಿವಕುಮಾರ್



**ಬೆಂಗಳೂರು:** ರಾಜ್ಯದಲ್ಲಿ ಬರ ಪರಿಸ್ಥಿತಿ ಹಿನ್ನೆಲೆಯಲ್ಲಿ ರೈತರ ಕೃಷಿ ಸಾಲ ಮನ್ನಾ ಮಾಡಲು ಕೇಂದ್ರ ಸರ್ಕಾರ ನೆರವು ನೀಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆಗ್ರಹಿಸಿದರು.

ಬಾಗಲಕೋಟೆ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಬರ ಪರಿಶೀಲನೆಗೆ ಮುನ್ನ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ಸಾಲಮನ್ನಾ ವಿಚಾರವಾಗಿ ಕೇಂದ್ರದ ಮೇಲೆ ಒತ್ತಡ ಹೇರಲು ಬಿಜೆಪಿ ನಾಯಕರೂ

ಪುಟ 2ಕ್ಕೆ

### ಪಾರ್ಕ್ ಬಿಲ್ ವಾಪಸ್: ಸಿಎಂ ಡಿಕೆಶಿ ಸಮರ್ಥನೆ

ಉದ್ಯಾನವನ ಭೂಮಿಯ ಶೇ.5ರಷ್ಟನ್ನು ಸಾರ್ವಜನಿಕ ಮೂಲ ಸೌಕರ್ಯ ಯೋಜನೆಗಳಿಗೆ ಬಳಸಲು ಅವಕಾಶ ನೀಡುವ ವಿವಾದಿತ ಪಾರ್ಕ್ಸ್ ಬಿಲ್ ಹಿಂಪಡೆದ ಸರ್ಕಾರದ ನಿರ್ಧಾರವನ್ನು ಸಿಎಂ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡರು.

ಬಿಲ್ ಕುರಿತು ಚರ್ಚೆಗೆ ಅವಕಾಶ

ಪುಟ 2ಕ್ಕೆ

# ಮೋಡ ಬಿತ್ತನೆಗೆ ಚಾಲನೆ

## ನೀರಿನ ತೀವ್ರ ಸಮಸ್ಯೆ ಆತಂಕ: ಸಚಿವ ಚಲುವರಾಯಸ್ವಾಮಿ

**ಬೆಂಗಳೂರು:** ರಾಜ್ಯದಲ್ಲಿ ಮಳೆ ಕೊರತೆ ಹಾಗೂ ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಕೈಗೊಂಡಿರುವ ಮಹತ್ವಾಕಾಂಕ್ಷಿ ಮೋಡ ಬಿತ್ತನೆ ಯೋಜನೆಗೆ ಶುಕ್ರವಾರ ಚಾಲನೆ ನೀಡಲಾಯಿತು.

ಬೆಂಗಳೂರಿನ ಎಚ್‌ಎಎಲ್ ವಿಮಾನ

ಪುಟ 2ಕ್ಕೆ



# ಎಸ್‌ಐಆರ್: 7.31 ಲಕ್ಷ ಮತದಾರರಿಗೆ ನೋಟಿಸ್



**ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ ನೋಟಿಸ್ ವಿತರಣೆ ಮಾಡುತ್ತಿದೆ.

ಅನ್ ಮ್ಯಾಪಿಂಗ್ ಮತ್ತು ಗೊಂದಲಮಯ ಮಾಹಿತಿ ನೀಡಿರುವವರಿಗೆ ನೋಟಿಸ್ ನೀಡಲು ಚುನಾವಣಾ ಆಯೋಗ ಮುಂದಾಗಿದೆ. ಇದುವರೆಗೂ 7.31 ಲಕ್ಷ ಮತದಾರರಿಗೆ ನೋಟಿಸ್ ವಿತರಿಸಲಾಗಿದೆ. ಒಟ್ಟು 43,81,143 ಮತದಾರರಿಗೆ ನೋಟಿಸ್ ನೀಡಬೇಕಿದೆ. ನೋಟಿಸ್ ನೀಡಿದ 206 ಮಂದಿಯನ್ನ ಮಾತ್ರ ವಿಚಾರಣೆ ಮಾಡಲಾಗಿದೆ.

ಸೆಪ್ಟೆಂಬರ್ 24ರ ಒಳಗೆ ನೋಟಿಸ್ ಪಡೆದು ಚುನಾವಣಾ ಆಯೋಗಕ್ಕೆ ದಾಖಲೆ ಸಮೇತ ರಿಪ್ಲೈ ನೀಡಬೇಕಿದೆ. ಮತದಾರರ ಪಟ್ಟಿಗೆ ಹೊಸದಾಗಿ ಸೇರ್ಪಡೆ, ತಿದ್ದುಪಡಿ, ಬದಲಾವಣೆಗೆ ಸಾರ್ವಜನಿಕರಿಂದ ಅರ್ಜಿ ಸಲ್ಲಿಕೆಯಾಗಿತ್ತು. 9,45,968 ಮಂದಿ ಫಾರಂ 6, ಫಾರಂ 6ಎ, ಫಾರಂ 7, ಪಾರಂ 8 ಸಲ್ಲಿಕೆ ಮಾಡಬೇಕಿದೆ.

### ಕೆಪಿಎಸ್‌ಸಿ ಸೇರಿ 100 ಎಕರೆ ಭೂಮಿ ಖರೀದಿಸಿದ್ದ ಸಾಹುಕಾರ!

**ಕಲಬುರಗಿ:** ಕೆಪಿಎಸ್‌ಸಿ ನೇಮಕಾತಿ ಹಗರಣದ ಪ್ರಮುಖ ಆರೋಪಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರಿಗೆ ಸಂಬಂಧಿಸಿದ ಆಸ್ತಿ ಖರೀದಿ ವಿಚಾರ ಈಗ ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ.

ಕೆಪಿಎಸ್‌ಸಿಗೆ ಸೇರಿದ ಬಳಿಕ ಶಿವಶಂಕರಪ್ಪ 2019ರಿಂದ 2026ರ ಅವಧಿಯಲ್ಲಿ ಸುಮಾರು 100 ಎಕರೆ ಜಮೀನು ಖರಿದಿ ಮಾಡಿರುವುದು ಬಟಾಬಯಲಾಗಿದೆ. ಯಾದಗಿರಿ ಹಾಗೂ ರಾಯಚೂರು

#### ಕೋಟಿ ಕೋಟಿ ದೋಚಿ ಜಮೀನು ಖರೀದಿಸಿದ ಕನ್ನಾಳೆ

**ಬೀದರ್:** ಕೆಪಿಎಸ್‌ಸಿ ಪಶುವೈದ್ಯಕೀಯ ನೇಮಕಾತಿ ಹಗರಣ ಕೇಸಲ್ಲಿ ಕಿಂಗ್‌ಪಿನ್ ಬಸವರಾಜ್ ಕನ್ನಾಳೆ ಕರ್ಮಕಾಂಡ ಬಗೆದಷ್ಟೂ ಬಯಲಾಗುತ್ತಿದೆ. ಕೆಪಿಎಸ್‌ಸಿ ಹಗರಣದಲ್ಲಿ ಬಂದ ಕೋಟಿ ಕೋಟಿ ಹಣದಿಂದಲೇ ಕನ್ನಾಳೆ ಕೃಷಿ ಭೂಮಿ ಖರೀದಿ ಮಾಡಿರುವುದು ಈಗ

ಪುಟ 2ಕ್ಕೆ

# ಭೂವೀಕ್ಷಣಾ ಉಪಗ್ರಹ ಯಶಸ್ವಿ ಉಡಾವಣೆ

## ಇಸ್ರೋ ಸಂಸ್ಥೆಯ ಇತಿಹಾಸ ಪುಟಕ್ಕೆ ಮತ್ತೊಂದು ಹೆಮ್ಮೆಯ ಮೈಲಿಗಲ್ಲು



**ಶ್ರೀಹರಿಕೋಟಾ:** ಭೂಸ್ಥಿರ ಕಕ್ಷೆಯಿಂದ ಚಿತ್ರಗಳನ್ನು ಸೆರೆಹಿಡಿಯುವ ಭಾರತದ ಮಹತ್ವಾಕಾಂಕ್ಷೆಯ ಮೊದಲ ಭೂವೀಕ್ಷಣಾ ಉಪಗ್ರಹ ಶುಕ್ರವಾರ ಮುಂಜಾನೆ ಯಶಸ್ವಿಯಾಗಿ ನಭಕ್ಕೆ ಚಿಮ್ಮಿದೆ.

ಆಂಧ್ರಪ್ರದೇಶದ ಶ್ರೀಹರಿಕೋಟಾದ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭೂ ವೀಕ್ಷಣಾ ಉಪಗ್ರಹ ಹೊತ್ತ 51.7 ಮೀಟರ್ ಎತ್ತರದ ರಾಕೆಟ್ ಅನ್ನು ಶುಕ್ರವಾರ ನಸುಕಿನ 2.55ಕ್ಕೆ ಉಡಾವಣೆ ಮಾಡಲಾಗಿದೆ. ಇದಕ್ಕೆ ಜಿಎಸ್‌ಎಲ್‌ವಿ–ಎಫ್17/ಇಒಎಸ್05 ಮಿಷನ್ ಎಂದು ಹೆಸರಿಡಲಾಗಿದೆ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ನೀಡಿದ ಮಾಹಿತಿಯಂತೆ, ಈ ಇಒಎಸ್05 ಮಿಷನ್ ಅತ್ಯಾಧುನಿಕ ತಂತ್ರಜ್ಞಾನದ ಭೂ ವೀಕ್ಷಣಾ ಉಪಗ್ರಹವಾಗಿದೆ. ಜಿಯೋ ಸಿಂಕ್ರೋನಸ್ ಕಕ್ಷೆಯಿಂದ ಭೂಮಿಯ ಚಿತ್ರಣಗಳನ್ನು ಸೆರೆಹಿಡಿಯಲಿರುವ ಭಾರತದ ಪ್ರಥಮ ಉಪಗ್ರಹ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮಳೆಯ ನಡುವೆಯೂ ನಿಗದಿತ ಸಮಯಕ್ಕೆ ಯಶಸ್ವಿಯಾಗಿ ರಾಕೆಟ್ ಆಕಾಶಕ್ಕೆ ಚಿಮ್ಮಿತು. ಜಿಎಸ್‌ಎಲ್‌ವಿ ರಾಕೆಟ್ ಮೂಲಕ ನಡೆಸಲಾಗುತ್ತಿರುವ 19ನೇ ಉಡಾವಣೆ ಇದಾಗಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಇಸ್ರೊ ಅಧ್ಯಕ್ಷ ಡಾ.ವಿ.ನಾರಾಯಣನ್, ಜಿಎಸ್‌ಎಲ್‌ವಿಎಫ್ 17/ ಇಒಎಸ್05 ಮಿಷನ್ ಯಶಸ್ವಿಯಾಗಿ ಚಿಮ್ಮಿದೆ. ಉಪಗ್ರಹವು ನಿಖರವಾಗಿ

### ದೇಶಕ್ಕೆ ಪ್ರಯೋಜನವೇನು?

ಇಒಎಸ್–05 ಸಾಮಾನ್ಯ ಭೂ ವೀಕ್ಷಣಾ ಉಪಗ್ರಹಕ್ಕಿಂತ ವಿಭಿನ್ನವಾಗಿದೆ. ಇದು ಭೂಸ್ಥಿರ ಕಕ್ಷೆಯಿಂದ ದೊಡ್ಡ ಪ್ರದೇಶವನ್ನು ನಿರಂತರವಾಗಿ ಗಮನಿಸುವ ಸಾಮರ್ಥ್ಯ ಹೊಂದಿರಲಿದೆ. ಅಂದರೆ ಒಂದೇ ಪ್ರದೇಶದ ಹವಾಮಾನ ಅಥವಾ ಪರಿಸರ ಬದಲಾವಣೆಗಳನ್ನು ಕಡಿಮೆ ಸಮಯದ ಅಂತರದಲ್ಲಿ ಗಮನಿಸಲು ಸಾಧ್ಯವಾಗಲಿದೆ. ಇದನ್ನು ಮೊದಲು ಜಿಐಸ್ಯಾಟ್–1ಎ ಎಂದು ಕರೆಯಲಾಗುತ್ತಿತ್ತು. 2021ರಲ್ಲಿ ಇದೇ ಸರಣಿಯ ಜಿಐಸ್ಯಾಟ್–1 ಮಿಷನ್ ಕಕ್ಷೆ ಸೇರುವಲ್ಲಿ ವಿಫಲವಾಗಿತ್ತು. ಇದೀಗ ಸುಧಾರಿತ ರೂಪದಲ್ಲಿ ಇಒಎಸ್–05ಅನ್ನು ಉಡಾವಣೆ ಮಾಡಲಾಗಿದೆ.

**ದೇಶದ ಮೊಟ್ಟ ಮೊದಲ ಇಮೇಜಿಂಗ್ ಉಪಗ್ರಹ ಎಂಬ ಹೆಗ್ಗಳಿಕೆ**

# ಅನ್ನ ಸುವಿಧ ಯೋಜನೆ ಕಾರ್ಯನಿರ್ವಹಿಸುತ್ತಿಲ್ಲ: ಗ್ಯಾರಂಟಿ ಸಮಿತಿಗೆ ಸುಳ್ಳು ಮಾಹಿತಿ

ಮೈಸೂರು: ಅನ್ನ ಸುವಿದ ಯೋಜನೆ ಕಾರ್ಯನಿರ್ವಹಿಸುತ್ತಿಲ್ಲ. ಇದರ ಬದಲಿ ವ್ಯವಸ್ಥೆಗೆ ಹಿರಿಯ ಅಧಿಕಾರಿಗಳ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಶ್ರೀಧರ್ ನಗರದ ಪಂಚಗ್ಯಾರಂಟಿ ಸಮಿತಿ ಸಭೆಗೆ ತಪ್ಪು ಮಾಹಿತಿ ನೀಡಿದರು.

ಮಹಾನಗರಪಾಲಿಕೆಯ ನಗರ ಗ್ಯಾರಂಟಿ ಸಮಿತಿ ಅಧ್ಯಕ್ಷ ಕಚೇರಿಯಲ್ಲಿ ನಡೆದ ಪಂಚಗ್ಯಾರಂಟಿ ಸಮಿತಿ ಸಭೆಯಲ್ಲಿ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ ನರದಲ್ಲಿ ಎಷ್ಟು ಮಂದಿಗೆ ವಯೋವೃದ್ಧರಿಗೆ ಅನ್ನ ಸುವಿಧ ಯೋಜನೆಯಡಿ ಅಕ್ಕಿ ವಿತರಣೆ ಮಾಡುತ್ತಿದ್ದೀರಿ ಎಂಬ ಪ್ರಶ್ನೆಗೆ ಅಧಿಕಾರಿ ಮೇಲಿನಂತೆ ಉತ್ತರಿಸಿದರು. ಇದಕ್ಕೆ ಸುಮ್ಮನಾಗದ ಗ್ಯಾರಂಟಿ ಸಮಿತಿ ಅಧ್ಯಕ್ಷೆ ಪುಷ್ಪವಲ್ಲಿ ವಯೋವೃದ್ಧರ ಮನೆ ಬಾಗಿಲಿಗೆ ಪಡಿತರ ವಿತರಿಸುವ ಯೋಜನೆ ಮಾಹಿತಿಯನ್ನೇ ಇದುವರೆವಿಗೂ ಇಲಾಖೆಯಿಂದ ನಮ್ಮ ಗಮನಕ್ಕೆ ತಂದಿಲ್ಲ. ನಗರದಲ್ಲಿ ಇದರ ಜಾರಿ ಬಗ್ಗೆ ಮಾಹಿತಿ ಕೇಳಿದರೆ ಅದು ಕಾರ್ಯನಿರ್ವಹಿಸುತ್ತಿಲ್ಲ ಎನ್ನುತ್ತಿದ್ದೀರಿ. ಈ ಬಗ್ಗೆ ಸಚಿವರ ಗಮನಕ್ಕೆ ತರಬೇಕಿತ್ತಲವೇ ಎಂದು ಪ್ರಶ್ನಿಸಿದರು. ಇದಕ್ಕೆ ನೀವೇ ಪ್ರಶ್ನಿಸಿ ಎಂದು ಉಡಾಫೆ ಉತ್ತರ ನೀಡಿದರು.

ಇದಕ್ಕೆ ದನಿಗೂಡಿಸಿದ ಸಮಿತಿಯ ಸದಸ್ಯ ಮಹದೇವಪ್ಪ ಆಹಾರ ಇಲಾಖೆ ಅಧಿಕಾರಿಗಳು ದೂರವಾಣಿ ಕರೆ ಸ್ವೀಕರಿಸುವುದಿಲ್ಲ. ಜನರ ಬಳಿಯೂ ಉತ್ತಮ ರೀತಿಯಲ್ಲಿ ನಡವಳಿಕೆ ತೋರುತ್ತಿಲ್ಲ. ದರ್ಪದಿಂದ ವರ್ತಿಸುತ್ತಿದ್ದಾರೆ. ಅದರಲ್ಲೂ ನಗರದಲ್ಲಿ ಅತಿಹೆಚ್ಚು ಬಡವರಿರುವ ನರಸಿಂಹರಾಜ ಕ್ಷೇತ್ರದ ಜನರಿಗೆ ತೀವ್ರ ಸಂಕಷ್ಟ ಎದುರಿಸುತ್ತಿದ್ದು, ಅಧಿಕಾರಿಗಳ ಖಂಡನೀಯ. ಈ ಬಗ್ಗೆ ಕ್ರಮ ಜರುಗಿಸಬೇಕೆಂದು ಒತ್ತಾಯಿಸಿದರು. ಅಧ್ಯಕ್ಷೆ ಪುಷ್ಪವಲ್ಲಿ ಮಾತನಾಡಿ, ಜನರೊಂದಿಗೆ ಸೌಜನ್ಯದಿಂದ ಅಧಿಕಾರಿಗಳು ವರ್ತಿಸಬೇಕೆಂದು ಸೂಚಿಸಿದರು. ಇದಕ್ಕೆ ಪರಿಶೀಲಿಸುವುದಾಗಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಹಾಯಕ ನಿರ್ದೇಶಕ ಶ್ರೀಧರ್ ಹೇಳಿದರು.

ಸಭೆ ಬಳಿಕ ಮಾತನಾಡಿದ ಅಧ್ಯಕ್ಷೆ ಪುಷ್ಪವಲ್ಲಿ ಮಾತನಾಡಿ, ಬಿಪಿಎಲ್ ರದ್ದು ಸಂಬಂಧ ಅರ್ಹರನ್ನು ಗುರುತಿಸುವ ಕೆಲಸ ಆಗಬೇಕು. ಸಾಲಕ್ಕಾಗಿ ಕೆಲವರು ತೆರಿಗೆ, ಜಿಎಸ್ ಟಿ ಕಟ್ಟುತ್ತಿರುವ ಬಡವರು, ವಿಶೇಷಚೇತನರ ಕಾರ್ಡ್ ರದ್ದು ಮಾಡುವುದು ಸರಿಯಲ್ಲ. ಅಂತವರಿಗೆ ಅನುಕೂಲ ಮಾಡಿಕೊಡಬೇಕಿದೆ. ಪಡಿತರ ಅಕ್ಕಿಯಲ್ಲಿ ಸಿಗುತ್ತಿರುವ ಪ್ಲಾಸ್ಟಿಕ್ ಅಕ್ಕಿಯ ಬಗ್ಗೆ ಜನರು ಆತಂಕ ಪಡುವ ಅಗತ್ಯವಿಲ್ಲ. ಅದು ವಿಟಮಿನ್ ಅಕ್ಕಿ ಎಂದು ಇಲಾಖೆ ಸ್ಪಷ್ಟಪಡಿಸಿದೆ. ಗೃಹಲಕ್ಷ್ಮಿ ಪರಿಷ್ಕರಣೆ ವೇಳೆಯಲ್ಲೂ ಸಹ ಅರ್ಹರನ್ನು ಹುಡುಕಿ ಉಳಿಸುವ ಕೆಲಸ ಮಾಡಬೇಕು. ಅರ್ಹರಿಗೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಬೇಕು. ಗೃಹಲಕ್ಷ್ಮಿ ಪರಿಷ್ಕರಣೆ ವೇಳೆ ಪ್ರಾರಂಭದ ಅರ್ಜಿಯ ಪ್ರತಿ ಕೇಳುವುದರಿಂದ ವಿನಾಯಿತಿ ನೀಡುವಂತೆ ಸೂಚಿಸಲಾಗಿದೆ ಎಂದರು. ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕ ಮಂಜುನಾಥ್ ಅವರು, ಜಿಲ್ಲೆಯಲ್ಲಿ ಯುವನಿಧಿ ಪಡೆದಿರುವವರು ಮಾಹಿತಿ ನೀಡಿ, ಯುವಕರಿಗೆ ಇದರ ಬಗ್ಗೆ ಮತ್ತಷ್ಟು ಜಾಗೃತಿ ಮೂಡಿಸಲಾಗುವುದು ಎಂದು ಹೇಳಿದರು. ನಗರ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಗಿರೀಶ್, ಹಾಜರಿದ್ದರು.



> ಗ್ಯಾರಂಟಿ ಸಮಿತಿಯ ಸಭೆಗೆ ಅಧಿಕಾರಿ ಸ್ಪಂದಿಸುತ್ತಿಲ್ಲ. ಅಲ್ಲದೆ, ನಮಗೆ ಸುಳ್ಳು ಮಾಹಿತಿ ನೀಡುತ್ತಿರುವುದು ಕಾಣುತ್ತಿದೆ. ನಮ್ಮ ಸಭೆಯಲ್ಲಿ ಹೇಳಿದ ಸಲಹೆಗಳಿಗೆ ಮನ್ನಣೆ ಸಿಗುತ್ತಿಲ್ಲ. ಅದರಲ್ಲೂ ಆಹಾರ ಇಲಾಖೆಯಿಂದ ಸೂಕ್ತ ಉತ್ತರ ದೊರೆಯುತ್ತಿಲ್ಲ. ಇನ್ನೂ ಕೆಲವೆಡೆ ನಾವೇ ಅವ್ಯವಸ್ಥೆ ಕುರಿತು ತಪಾಸಣೆ ನಡೆಸಿ ಹೇಳುತ್ತಿದ್ದರೂ ಅದಕ್ಕೆ ಸ್ಪಂದನೆ ಸಿಗುತ್ತಿಲ್ಲ. ಇದೆಲ್ಲಾ ವಿಚಾರವನ್ನೂ ಸಹ ಜಿಲ್ಲಾ ಸಚಿವರ ಗಮನಕ್ಕೆ ತರುತ್ತೇನೆ.
> –ಪುಷ್ಪವಲ್ಲಿ

## ಮೊದಲ ಪುಟದಿಂದ

### ಮೋಡ ಬಿತ್ತನೆಗೆ ಚಾಲನೆ

ನಿಲ್ದಾಣದಲ್ಲಿ ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅವರು ಮೋಡ ಬಿತ್ತನೆ ಕಾರ್ಯಾಚರಣೆಗೆ ಚಾಲನೆ ನೀಡಿದರು. ಮೋಡ ಬಿತ್ತನೆಗಾಗಿ ವಿಶೇಷವಾಗಿ ಸಿದ್ಧಪಡಿಸಲಾಗಿರುವ ಲಘು ವಿಮಾನಕ್ಕೆ ರಾಷ್ಟ್ರಧ್ವಜ ಹಾಗೂ ನಾಡಧ್ವಜ ಪ್ರದರ್ಶಿಸುವ ಮೂಲಕ ಕಾರ್ಯಾಚರಣೆಗೆ ಚಾಲನೆ ನೀಡಲಾಯಿತು.

### ಭೂಮಿ ಖರೀದಿಸಿದ್ದ ಸಾಹುಕಾರ!

ಜಿಲ್ಲೆಗಳಲ್ಲಿ ಜಮೀನು ಖರೀದಿ ಮಾಡಿದ್ದಾರೆ. ಶಿವಶಂಕರಪ್ಪ ಸಾಹುಕಾರ್, ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರನ ಹೆಸರಿನಲ್ಲೂ ಜಮೀನು ಖರೀದಿ ಮಾಡಿದ್ದಾರೆ. ಈ ಜಮೀನು ಖರೀದಿಗೆ ಕೆಪಿಎಸ್‌ಸಿ ಯಲ್ಲಿ ನಡೆಸಿದ ಅಕ್ರಮ ಹಣ ಬಳಕೆಯಾಗಿದೆ ಎಂದು ಸಿಐಡಿ ತನಿಖೆಯಲ್ಲಿ ಪತ್ತೆ ಮಾಡಿದೆ.

### ಜಮೀನು ಖರೀದಿಸಿದ ಕನ್ನಾಳೆ

ಬಹಿರಂಗವಾಗಿದೆ. ಕನ್ನಾಳೆ ಒಂದು ವರ್ಷದ ಹಿಂದೆಯೇ ಸುಮಾರು 5 ಕೋಟಿ ಮೌಲ್ಯದ 20 ಎಕರೆ ಕೃಷಿ ಭೂಮಿ ಖರೀದಿ ಮಾಡಿದ್ದ ಎಂದು ಸಿಐಡಿ ತನಿಖಾ ತಂಡದ ಮೂಲಗಳು ಬಹಿರಂಗಪಡಿಸಿವೆ.

ಪ್ರತಿ ಎಕರೆಗೆ ಸುಮಾರು 25 ಲಕ್ಷ ರೂಪಾಯಿ ದರದಲ್ಲಿ ಜಮೀನು ಖರೀದಿ ಮಾಡಲಾಗಿದೆ. ಬೀದರ್ ತಾಲೂಕಿನ ಯರನಹಳ್ಳಿ ಗ್ರಾಮದ ಜನವಾಡ ರಸ್ತೆಯಲ್ಲಿರುವ ಸರ್ವೆ ನಂಬರ್ 53, ಹಿಸ್ಸಾ ನಂಬರ್ 1ರ ಜಮೀನು ಖರೀದಿಗೆ ಸಂಬಂಧಿಸಿದ ದಾಖಲೆಗಳು ಬಹಿರಂಗಗೊಂಡಿವೆ. ಈ ಜಮೀನನ್ನು ಶೋಭಾ ಎಂಬುವವರಿಂದ ಬಸವರಾಜ್ ಕನ್ನಾಳೆ ಖರೀದಿಸಿದ್ದ. ಈ ಬಗ್ಗೆಯೂ ಸಿಐಡಿ ತಂಡಗಳು ತನಿಖೆ ನಡೆಸುತ್ತಿವೆ.

### ಕೇಂದ್ರವೇ ಸಾಲ ಮನ್ನಾ ಮಾಡಲಿ

ತಮ್ಮೊಂದಿಗೆ ದೆಹಲಿಗೆ ಬರಬೇಕು ಎಂದು ಆಹ್ವಾನ ನೀಡಿದರು.

ಬರ ನಿರ್ವಹಣೆಗೆ ಕೇಂದ್ರ ಸರ್ಕಾರವೂ ಹಣಕಾಸಿನ ನೆರವು ನೀಡಬೇಕು. ಸರ್ವಪಕ್ಷ ನಿಯೋಗವನ್ನು ದೆಹಲಿಗೆ ಕರೆದೊಯ್ಯುವ ಅಗತ್ಯವಿದೆ ಎಂದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜ ಯೇಂದ್ರ ಅವರು ರೈತರ ಸಾಲ ಮನ್ನಾ ಮಾಡುವಂತೆ ಆಗ್ರಹಿಸಿದ್ದಾರೆ. ಪ್ರಧಾನಿ ಅವರೂ ಇದು ಬರ ಪರಿಸ್ಥಿತಿ ಎಂದು ಹೇಳಿದ್ದಾರೆ. ಹೀಗಾಗಿ ಕೇಂದ್ರ ಸರ್ಕಾರವೇ ಸಾಲ ಮನ್ನಾದ ಹೊಣೆ ಹೊತ್ತುಕೊಳ್ಳಬೇಕು ಎಂದು ಮುಖ್ಯಮಂತ್ರಿ ಹೇಳಿದರು.

### ಕೆಆರ್‌ಎಸ್ 3 ಅಡಿ ಕುಸಿತ

ಬಿಡಲಾಗಿ ರುವ ನೀರಷ್ಟೇ ಕೆಆರ್‌ಎಸ್‌ಗೆ ಆಸರೆಯಾಗಿ ಹರಿದು ಬರುತ್ತಿದೆ. ತಮಿಳುನಾಡಿಗೆ ನಿರಂತರ ನೀರು ಹರಿಸುತ್ತಿರುವುದರಿಂದ ಕೆಆರ್‌ಎಸ್ ಮಾತ್ರವಲ್ಲದೆ ಕಬಿನಿ, ಹೇಮಾವತಿ ಹಾಗೂ ಹಾರಂಗಿ ಜಲಾಶಯಗಳಲ್ಲೂ ನೀರಿನ ಪ್ರಮಾಣ ತೀವ್ರವಾಗಿ ಇಳಿಕೆಯಾಗುತ್ತಿದೆ. ಮಳೆ ಬಾರದಿದ್ದರೆ ಮುಂಬರುವ ದಿನಗಳಲ್ಲಿ ಕೃಷಿ ಚಟುವಟಿಕೆಗಳು ಮಾತ್ರವಲ್ಲದೆ, ಬೆಂಗಳೂರು, ಮೈಸೂರು ಸೇರಿದಂತೆ ಪ್ರಮುಖ ನಗರಗಳಿಗೆ ಕುಡಿಯುವ ನೀರಿಗೂ ಹಾಹಾಕಾರ ಎದುರಾಗುವ ಭೀತಿ ಸೃಷ್ಟಿಯಾಗಿದೆ.

### ‘ಅಂಬಾರಿ ಆನೆ’ ಯಾವುದು?

ಅರಣ್ಯ ಇಲಾಖೆ ಇನ್ನೂ ಅಧಿಕೃತವಾಗಿ ಅಂತಿಮಗೊಳಿಸಿಲ್ಲ. ಇದರ ನಡುವೆ, ಧನಂಜಯ, ಮಹೇಂದ್ರ ಮತ್ತು ಪ್ರಶಾಂತ ಈ ಮೂರು ಆನೆಗಳನ್ನು ತಾಲೀಮಿನ ಅವಧಿಯಲ್ಲಿ ನಡಿಗೆ, ಗಾಂಭೀರ್ಯ, ಸಿಡಿಮದ್ದು ತಾಲೀಮಿಗಳಿಗೆ ಸ್ಪಂದಿಸುವ ರೀತಿ ಹಾಗೂ ಆರೋಗ್ಯವನ್ನು ಸೂಕ್ಷ್ಮವಾಗಿ ಗಮನಿಸಿ, ಜಂಬೂಸವಾರಿಗೆ ಕೆಲವೇ ದಿನಗಳ ಮುನ್ನ ಒಬ್ಬರನ್ನು ಅಂಬಾರಿ ಆನೆಯನ್ನಾಗಿ ಅಧಿಕೃತವಾಗಿ ಘೋಷಿಸಲಿದೆ.

### ದೇಶಕ್ಕೆ ಪ್ರಯೋಜನವೇನು?

ಉಪಗ್ರಹದಿಂದ ಸಿಗುವ ಚಿತ್ರಗಳು ಮತ್ತು ಮಾಹಿತಿ ನೇರವಾಗಿ ಜನರ ಮೊಬೈಲ್‌ಗೆ ಬರುವುದಿಲ್ಲ. ಆದರೆ ಅದರ ಮಾಹಿತಿಯನ್ನು ವಿವಿಧ ಸರ್ಕಾರಿ ವ್ಯವಸ್ಥೆಗಳು ಬಳಸುವುದರಿಂದ ಜನರಿಗೆ ಪರೋಕ್ಷವಾಗಿ ಸಾಕಷ್ಟು ಪ್ರಯೋಜನ ಸಿಗಬಹುದು. ಹವಾಮಾನ ಮುನ್ಸೂಚನೆ, ಕೃಷಿ ಮೇಲ್ವಿಚಾರಣೆ, ಪರಿಸರ ಬದಲಾವಣೆ, ಪ್ರಕೃತಿ ವಿಕೋಪ ನಿರ್ವಹಣೆ ಮತ್ತು ದೇಶದ ಯೋಜನೆ ರೂಪಿಸುವ ಕೆಲಸಗಳಲ್ಲಿ ಉಪಗ್ರಹ ಮಾಹಿತಿ ಬಳಸಬಹುದು. ಭಾರತದಲ್ಲಿ ಈಗಾಗಲೇ ಉಪಗ್ರಹ ತಂತ್ರಜ್ಞಾನವನ್ನು ಕೃಷಿ ಮತ್ತು ವಿಕೋಪ ನಿರ್ವಹಣೆಯಲ್ಲಿ ಬಳಸಲಾಗುತ್ತಿದೆ. ಬರ ಮೇಲ್ವಿಚಾರಣೆ ಮತ್ತು ಬೆಳೆ ವಿಮೆಯಂತಹ ಕೆಲಸಗಳಲ್ಲೂ ಉಪಗ್ರಹ ಮಾಹಿತಿಯನ್ನು ಬಳಸುವ ಸಾಧ್ಯತೆ ಇದೆ. ಒಟ್ಟಿನಲ್ಲಿ, ಸೆಪ್ಟೆಂಬರ್ 4ರ ಉಡಾವಣೆ ಕೇವಲ ಮತ್ತೊಂದು ರಾಕೆಟ್ ಉಡಾವಣೆ ಅಲ್ಲ. ಏಳು ತಿಂಗಳ ವಿರಾಮದ ಬಳಿಕ ಇಸ್ರೋ ಮತ್ತೆ ಉಡಾವಣಾ ಹಾದಿಗೆ ಮರಳುತ್ತಿರುವುದರ ಜೊತೆಗೆ, ಭಾರತದ ಭೂ ವೀಕ್ಷಣಾ ಸಾಮರ್ಥ್ಯಕ್ಕೆ ಹೊಸ ತಂತ್ರಜ್ಞಾನ ಸೇರ್ಪಡೆಯಾಗುತ್ತಿರುವ ಮಿಷನ್ ಇದಾಗಿದೆ.

### ಕರ್ನಾಟಕವೇ ಮೊದಲು

**ಭವಿಷ್ಯದ ಬೇಡಿಕೆ ಲೆಕ್ಕಹಾಕಿ ಸಮತೋಲಿತವಾಗಿ ನೀರು ಪೂರೈಕೆಗೆ ವೈಜ್ಞಾನಿಕ ಹಾಗೂ ವ್ಯವಸ್ಥಿತ ಯೋಜನೆ ರೂಪಿಸಲು ಸಹಕಾರಿಯಾಗಿದೆ ಎಂದು ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.**

### ಕೆರೆ ಒತ್ತುವರಿಗೆ ಕ್ರಿಮಿನಲ್ ಕೇಸ್

ನೀರು ಪೂರೈಕೆ ದೊಡ್ಡ ಸವಾಲಾಗಿದೆ. ರಾಜ್ಯದ ಬಹುತೇಕ ಕಡೆ ಭೂಮಿಯೊಳಗೆ ಹೆಬ್ಬಂಡೆಗಳು ಮತ್ತು ಲ್ಯಾಟರೈಟ್ ಇರುವ ಕಾರಣ ಮಳೆ ನೀರು ಇಂಗದೇ ಅಂತರ್ಜಲ ಕುಸಿಯುತ್ತಿದೆ. ಅತಿಯಾದ ಅಂತರ್ಜಲ ಬಳಕೆಯಿಂದಲೂ ಜಲ ಮಟ್ಟ ಕುಸಿದಿದೆ. ಹೀಗಾಗಿ ನಾವು ಕೆರೆ, ಕಟ್ಟೆ, ಸರೋವರ, ನದಿಗಳನ್ನು ಸಂರಕ್ಷಿಸದಿದ್ದರೆ ಜಲಕ್ಷಾಮ ಎದುರಾಗುತ್ತದೆ. ಜಲ ಮೂಲಗಳನ್ನು ರಕ್ಷಿಸದಿದ್ದರೆ ಮುಂದೆ ನೀರಿಗೆ ಹಾಹಾಕಾರ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿ ದರು.

### ಸಿಎಂ ಡಿಕೆಶಿ ಸಮರ್ಥನೆ

ಕಲ್ಪಿಸಲಾಗುತ್ತದೆ. ಅದರ ಉದ್ದೇಶಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ಸಲುವಾಗಿಯೇ ಅದನ್ನು ಹಿಂಪಡೆಯಲಾಗಿದೆ ಎಂದು ಸ್ಪಷ್ಟಪಡಿಸಿದರು. ಬಿಲ್ ಹಿಂಪಡೆದಿರುವುದನ್ನು ಬಿಜೆಪಿ ತನ್ನ ಗೆಲುವು ಎಂದು ಬಿಂಬಿಸುತ್ತಿರುವುದಕ್ಕೆ ಆಕ್ಷೇಪಿಸಿದ ಅವರು, ಬಿಜೆಪಿಯನ್ನು ಅಭಿವೃದ್ಧಿ ವಿರೋಧಿ ಪಕ್ಷ ಎಂದು ಟೀಕಿಸಿದರು. ಬೆಂಗಳೂರಿಗೆ ಎದುರಾಗಿರುವ ಶಾಪಕ್ಕೂ ಬಿಜೆಪಿಯೇ ಕಾರಣ ಎಂದು ವಾಗ್ದಾಳಿ ನಡೆಸಿದರು.

# ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಣೆ

## ಶ್ರೀ ಕೃಷ್ಣ, ರಾಧೆ/ರುಕ್ಮಿಣಿಯರ ವೇಷ ತೊಟ್ಟು ಸಂಭ್ರಮಿಸಿದ ಪುಟಾಣಿಗಳು



ರಾಮನಗರ: ಸಾಂಸ್ಕೃತಿಕ, ಧಾರ್ಮಿಕ ಕಾರ್ಯಕ್ರಮಗಳು ಮಕ್ಕಳನ್ನು ಸದಾ ಚಟುವಟಿಕೆಯಿಂದ ಇರಲು ಸಹಕಾರಿಯಾಗಿದೆ ಎಂದು ಪಟೇಲ್ ಆಂಗ್ಲ ಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಪಟೇಲ್ ಸಿ ರಾಜು ಹೇಳಿದರು.

ಪಟೇಲ್ ಆಂಗ್ಲ ಶಾಲೆಯ ಆವರಣದಲ್ಲಿ ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಬಾರತ್ ವಿಕಾಸ್ ಪರಿಷದ್ ವಾಲ್ಮೀಕಿ ಶಾಖೆ ಸಹಕಾರದಲ್ಲಿ ಆಯೋಜನೆಯಾಗಿದ್ದ ಶ್ರೀ ಕೃಷ್ಣ ಜನ್ಮಾಷ್ಠಮಿ ಆಚರಣೆಯ ವೇಳೆ ಅವರು ಮಾತನಾಡಿದರು. ಈ ಕಾರ್ಯಕ್ರಮಗಳು ಮಕ್ಕಳಲ್ಲಿನ ಸುಪ್ತ ಪ್ರತಿಭೆಯ ಅನಾವರಣಕ್ಕೂ ಸೂಕ್ತ ವೇದಿಕೆಗಳಾಗಿವೆ ಎಂದರು. ಪೋಕರು ಮತ್ತು ಶಿಕ್ಷಕರು ಮಕ್ಕಳ ಬೆಳವಣಿಗೆಯಲ್ಲಿ ಪರಸ್ಪರ ಸಹಕಾರ ನೀಡಬೇಕಾಗಿದೆ ಎಂದರು. ತಮ್ಮ ಮಕ್ಕಳು ವೇಷಭೂಷಿತರಾಗಿ ವೇದಿಕೆಯ ಮೇಲೆ ಕಾಣಿಸಿಕೊಂಡಾಗ ತಾಯಂದಿರ ಮೊಗದಲ್ಲಿ ಕಾಣುವ ಸಂತಸ ಮಕ್ಕಳು ಮತ್ತು ತಾಯಿಯ ನಡುವಿನ ತಾಯ್ತನದ ಅಂಶ ಮತ್ತಷ್ಟು ಬಲಗೊಳ್ಳುತ್ತದೆ ಎಂದರು.

ಭಾರತ್ ವಿಕಾಸ್ ಪರಿಷದ್ ವಾಲ್ಮೀಕಿ ಶಾಖೆಯ ಅಧ್ಯಕ್ಷ ರಾ.ಶಿ.ಬಸವರಾಜ್ ಶ್ರೀ ಕೃಷ್ಣ ಜನ್ಮಾಷ್ಟಮಿಯ ಮಹತ್ವದ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ತಿಮ್ಮೇಗೌಡ ಟಿ ಮಾತನಾಡಿ, ಸಮಾಜದಲ್ಲಿ ಮಕ್ಕಳು ವೇದಿಕೆಯಲ್ಲಿ ಶ್ರೀಕೃಷ್ಣನ ಹಾಗೂ ರಾಧೆಯ ವೇಷಧಾರಿಗಳಾಗಿ ವಿವಿಧ ಭಂಗಿಗಳಲ್ಲಿ ನೃತ್ಯ ಹಾಗೂ ವಿವಿಧ ಚಟುವಟಿಕೆಗಳನ್ನು ಮಾಡುತ್ತಿರುವುದು ನೋಡುವುದೇ ಸಂತಸ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಸಹ ಕಾರ್ಯದರ್ಶಿ ಕಾರ್ತಿಕ್ ಗೌಡ ಸಿಆರ್ ಜಿಲ್ಲಾ ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ನ ಕಾರ್ಯಕಾರಿ ಸಮಿತಿ ಸದಸ್ಯರಾದ ಸೋಲಾರ್ ಪುಟ್ಟಪ್ಪ, ನಿವೃತ್ತ ಪಸು ವೈದ್ಯ ಡಾ. ಮಲ್ಲೇಶ್, ಕನ್ನಡ ಸಾಹಿತ್ಯ ಪರಿಷತ್ನ ದಿನೇಶ್ ಬಿಟಿ, ನೇಗಿಲ ಯೋಗಿ ತಾಲೂಕು ಘಟಕದ ಅಧ್ಯಕ್ಷ ಮಮತಾ ಹೆಚ್ ಎಸ್, ಭಾರತ್ ವಿಕಾಸ್ ಪರಿಷತ್ನ ರಾಶಿ ಬಸವರಾಜ್ ವೆಂಕಟಪ್ಪ ಬಸವ ಚಾರ್ ಚಂದ್ರಶೇಖರ್ ಮಾಜಿ ವಕೀಲ ಸಂಘದ ಚಂದ್ರಶೇಖರ್ ಹಾಗೂ ಶಾಲೆಯ ಮುಖ್ಯ ಶಿಕ್ಷಕ ವಿನೋದ್ ಭಾಗವಹಿಸಿದ್ದರು ಶಾಲಾ ಮಕ್ಕಳು ರಾಧೆ ಮತ್ತು ಕೃಷ್ಣನ ಅವತಾರಗಳಲ್ಲಿ ಮನಮೋಹಕ ನೃತ್ಯಗಳನ್ನು ಪ್ರದರ್ಶಿಸಿದರು.

### ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಠಮಿ ಆಚರಣೆ

**ರಾಮನಗರ:** ನಗರದ ವಾಸವಿ ವಿದ್ಯಾನಿಕೇತನ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಠಮಿಯ ಅಂಗವಾಗಿ ಮಕ್ಕಳಿಗೆ ಶ್ರೀ ಕೃಷ್ಣ, ರಾಧೆ/ರುಕ್ಮಿಣಿಯರ ವೇಷ ಭೂಷಣ ಚಟುವಟಿಕೆಯನ್ನು ಹಮ್ಮಿಕೊಳ್ಳಲಾಗಿತ್ತು. ಪ್ರೀ ನರ್ಸರಿ, ಎಲ್.ಕೆ.ಜಿ ಮತ್ತು ಯು.ಕೆ.ಜಿಯ ಪುಟಾಣಿಗಳು ಅಲಂಕಾರ ಭೂಷಿತರಾಗಿ ಮಿಂಚಿದರು.

ಪುಟಾಣಿ ಹೆಜ್ಜೆಗಳನ್ನು ಇಡುತ್ತ ಮಕ್ಕಳು ಶಾಲೆಯ ಆವರಣದಲ್ಲಿ ಕಾಣಿಸಿಕೊಂಡಾಗ ಮಕ್ಕಳ ಪೋಷಕರಲ್ಲಿ ಸಂಭ್ರಮ ಮನೆ ಮಾಡಿತ್ತು. ಮೊಬೈಲ್ ಫೋನುಗಳ ಕ್ಯಾಮರಾಗಳಲ್ಲಿ ತಮ್ಮ ಮಕ್ಕಳ ಚಿತ್ರಗಳನ್ನು ದಾಖಲಿಸಿಕೊಂಡರು.

ಶಾಲೆಯ ಆಡಳಿತ ಮಂಡಳಿ ಹಾಗೂ ಶಾಲೆಯ ಮಾಜಿ ಕಾರ್ಯದರ್ಶಿ ಬದರಿನಾಥ್ ನೀಡಿ ಬಹುಮಾನಗಳನ್ನು ಪುಟಾಣಿಗಳು ಸ್ವೀಕರಿಸಿದಾಗ, ಅವರಲ್ಲಿಯೂ ಕಾಣಿಸಿಕೊಂಡ ನಗುಮೊಗ ವರ್ಣಿಸಲು ಅಸಾಧ್ಯ ಎಂದು ಪೋಷಕರು ಮತ್ತು ಶಿಕ್ಷಕರು ಪ್ರತಿಕ್ರಿಯಿಸಿದರು.

ಶಾಲೆಯ ನಿರ್ದೇಶಕ ಎಂ.ಜಿ.ಜನಾರ್ಧನ, ಮುಖ್ಯ ಶಿಕ್ಷಕಿ ವಿಜಯ ಪ್ರಭಾ, ಆಡಳಿತಾಧಿಕಾರಿ ಸೂರ್ಯ ಪ್ರಕಾಶ್ ಮುಂತಾದವರು ಉಪಸ್ಥಿತರಿದ್ದರು.



## ಪತ್ರಕರ್ತನಿಗೆ ಅಭಿನಂದನೆ



ಕೆ.ಆರ್.ನಗರ: ಕರುನಾಡ ದೀಪ ಸೇವಾ ಟ್ರಸ್ಟ್ ಆಯೋಜಿಸಿದ್ದ ವಿವಿಧ ಕ್ಷೇತ್ರಗಳ ಸಾಧಕರುಗಳಿಗೆ ಅಭಿನಂದನಾ ಸಮಾರಂಭದಲ್ಲಿ ಪತ್ರಕರ್ತರಾದ ಕೆ.ಟಿ.ಮೋಹನ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಮಾದಹಳ್ಳಿಯ ಉಕ್ಕಿನ ಕಂತೆ ಮಠದ ಶ್ರೀ ಸಾಂಬ ಸದಾಶಿವ ಸ್ವಾಮೀಜಿ, ಚಲನ ಚಿತ್ರನಟ ಶಂಕರ್ ಅಶ್ವಥ್, ಚಿತ್ರನಟಿ ಕಾವ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಸೋಮಶೇಖರ್, ನಂಜನಗೂಡು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಕರಳಾಪುರ ನಾಗರಾಜು, ಗ್ರಾಮೀಣ ನಿಧಿ ಸೌಹಾರ್ದ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ

ಕೆ.ಆರ್.ಶ್ಯಾಮಸುಂದರ್, ನಿರ್ದೇಶಕ ಎಂ.ಎಸ್.ನರಸಿಂಹ, ನಿವೃತ್ತ ಪ್ರಾಂಶುಪಾಲ ಡಾ. ಎಂ.ಗೋವಿಂದರಾಜು, ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ಪ್ರಧಾನ ಕಾರ್ಯದರ್ಶಿ ಆರ್.ವಿನೋದ್ ಉಪ್ಪಾರ್, ಮುಖ್ಯ ಶಿಕ್ಷಕ ಎಂ.ಪಿ.ಶಿವಶಂಕರ್ ಇದ್ದರು.

## ಕ್ರೀಡಾಕೂಟದಲ್ಲಿ ವಿದ್ಯಾರ್ಥಿಗಳ ಸಾಧನೆ



ಗುಂಡ್ಲುಪೇಟೆ: 2026–27ನೇ ಸಾಲಿನ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಗುಂಡ್ಲುಪೇಟೆಯ ನಿರ್ಮಲ ಕಾನ್ವೆಂಟ್ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ವಿವಿಧ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಿ ಗಮನಾರ್ಹ ಸಾಧನೆ ಮಾಡಿದ್ದಾರೆ.

9ನೇ ತರಗತಿಯ ವಿದ್ಯಾರ್ಥಿ ಫಯಾಜ್ 200 ಮೀ., 800 ಮೀ. ಹಾಗೂ 1500 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿದ್ದಾರೆ.

400x400 ಮೀ. ರಿಲೇ ಓಟದಲ್ಲಿ ವೈಷ್ಣವಿ, ಆಂಡ್ರಿಯ, ಪ್ರಾರ್ಥನಾ ಹಾಗೂ ಐಸಸಿದ್ದೀಕ್ ಅವರ ತಂಡ ದ್ವಿತೀಯ ಸ್ಥಾನ ಗಳಿಸಿದೆ.

ಹುಡುಗರ 400x400 ಮೀ. ರಿಲೇ ಓಟದಲ್ಲಿ ಫಯಾಜ್, ಪೃಥ್ವಿ, ವರುಣ್ ಹಾಗೂ ಅಲ್ಪಸ್ ಅವರ ತಂಡ ಪ್ರಥಮ ಸ್ಥಾನ ಪಡೆದುಕೊಂಡಿದೆ. ಇದೇ ತಂಡ 4x100 ಮೀ. ರಿಲೇ ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದೆ.

ವಿದ್ಯಾರ್ಥಿನಿ ವೈಷ್ಣವಿ 800 ಮೀ. ಹಾಗೂ 1500 ಮೀ. ಓಟದಲ್ಲಿ ಪ್ರಥಮ ಸ್ಥಾನ ಪಡೆದು ಉತ್ತಮ ಪ್ರದರ್ಶನ ನೀಡಿದ್ದಾರೆ. ಆಂಡ್ರಿಯ 800 ಮೀ. ಓಟದಲ್ಲಿ ಹಾಗೂ ಪ್ರಾರ್ಥನಾ 400 ಮೀ. ಓಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ವಿದ್ಯಾರ್ಥಿಗಳ ಈ ಸಾಧನೆಗೆ ಶಾಲೆಯ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಶಿಕ್ಷಕ ವೃಂದ ಹಾಗೂ ಪೋಷಕರು ಅಭಿನಂದನೆ ಸಲ್ಲಿಸಿದ್ದು, ಮುಂದಿನ ಹಂತದ ಕ್ರೀಡಾಕೂಟಗಳಲ್ಲಿಯೂ ಉತ್ತಮ ಸಾಧನೆ ಮಾಡುವಂತೆ ಅಭಿನಂದಿಸಿದ್ದಾರೆ

## ಹನೂರು ಪತ್ರಕರ್ತರ ಭವನಕ್ಕೆ ಮತ್ತೆ 10 ಲಕ್ಷ ರೂ. ಅನುದಾನದ ಭರವಸೆ

# ಪತ್ರಿಕಾ ಭವನದ ಕಾಮಗಾರಿಯನ್ನು ವೀಕ್ಷಣೆ ಮಾಡಿದ ಶಾಸಕ

ಹನೂರು: ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿರುವ ಪತ್ರಕರ್ತರಿಗೆ ತಾಲೂಕು ಕೇಂದ್ರದಲ್ಲಿ ಸ್ವಂತ ಭವನ ಇರಬೇಕು ಎಂಬುದು ನನ್ನ ಬಹುದಿನದ ಕನಸು. ಈ ಭವನ ಕೇವಲ ಕಟ್ಟಡವಾಗಬಾರದು, ಇದು ನಮ್ಮ ತಾಲೂಕಿನ ಹೆಮ್ಮೆಯ ಕಟ್ಟಡವಾಗಬೇಕು ಎಂದು ಶಾಸಕ ಎಂ.ಆರ್. ಮಂಜುನಾಥ್ ಅಭಿಪ್ರಾಯಪಟ್ಟರು.

ತಾಲೂಕು ಕೇಂದ್ರದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಹಂತದಲ್ಲಿರುವ ಕಾರ್ಯನಿರತ ಪತ್ರಕರ್ತರ ಸಂಘದ ಭವನ ಕಾಮಗಾರಿಯನ್ನು ಶುಕ್ರವಾರ ಪರಿಶೀಲಿಸಿದ ನಂತರ ಅವರು ಮಾತನಾಡಿದರು.

“ಪತ್ರಕರ್ತರು ಸಮಾಜದ ಕಣ್ಣು ಮತ್ತು ಕಿವಿ. ನಿಮ್ಮ ನಿಸ್ವಾರ್ಥ ಸೇವೆಗೆ ನನ್ನ ಸಂಪೂರ್ಣ ಬೆಂಬಲವಿದೆ. ಮುಂದಿನ ಪತ್ರಿಕಾ ದಿನಾಚರಣೆಯೊಳಗೆ ಕಾಮಗಾರಿ ಪೂರ್ಣಗೊಳಿಸಿ ಇದೇ ಭವನದಲ್ಲಿ ದಿನಾಚರಣೆ ಆಚರಿಸೋಣ. ಈಗಾಗಲೇ 10 ಲಕ್ಷ ರೂ. ನೀಡಿದ್ದೇನೆ, ಕೂಡಲೇ ಮತ್ತೆ 10 ಲಕ್ಷ ರೂ. ಅನುದಾನ ಬಿಡುಗಡೆ ಮಾಡಿಸಿ, ಸಂಸದರಿಂದಲೂ ಅನುದಾನ ಕೊಡಿಸುತ್ತೇನೆ” ಎಂದರು.



ಸಂಘದ ಅಧ್ಯಕ್ಷ ಜಿ. ದೇವರಾಜ ನಾಯ್ಡು ಮಾತನಾಡಿ, “ಶಾಸಕರ ಮಾರ್ಗದರ್ಶನದಿಂದಾಗಿ ಭವನದ ಕಾಮಗಾರಿ ಈ ಮಟ್ಟಕ್ಕೆ ಬಂದಿದೆ. ಈ ಹಿಂದೆ ಚಿಕ್ಕದಾಗಿ ಕಟ್ಟುವ ಯೋಜನೆ ಇತ್ತು, ನೀವು ಸಲಹೆ ನೀಡಿ ವಿಶಾಲವಾದ ಸಭಾಂಗಣ, ಡಿಜಿಟಲ್ ಗ್ರಂಥಾಲಯ ಮತ್ತು ಅತಿಥಿ ಕೊಠಡಿ ಇರುವಂತೆ ವಿನ್ಯಾಸ ಮಾಡಿಸಿದ್ದೀರಿ. ಇದು ಹನೂರು ತಾಲೂಕಿನ ಎಲ್ಲಾ ಪತ್ರಕರ್ತರಿಗೆ ಶಕ್ತಿ ಕೇಂದ್ರವಾಗಲಿದೆ” ಎಂದರು.

ನಿಕಟಪೂರ್ವ ಅಧ್ಯಕ್ಷ ಮಹಾದೇಶ್ ಮಾತನಾಡಿ, “ಹನೂರು ಪಟ್ಟಣದಲ್ಲಿ ಪತ್ರಕರ್ತರ ಭವನ ನಿರ್ಮಾಣಕ್ಕೆ ಪ್ರತಿಯೊಬ್ಬ ಜನಪ್ರತಿನಿಧಿಗಳು ಸಹಕಾರ ನೀಡಿದ್ದಾರೆ. ಆರಂಭದಲ್ಲಿ ಮಾಜಿ ಶಾಸಕ ಆರ್. ನರೇಂದ್ರ ಅವರು 10 ಸೆಂಟ್ ನಿವೇಶನ ಕೊಡಿಸಿ 5 ಲಕ್ಷ ರೂ. ಅನುದಾನ ನೀಡಿ ಅಡಿಪಾಯ ಹಾಕಿದರು. ನಂತರ ದಿ. ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರು 5 ಲಕ್ಷ ರೂ., ವಿಧಾನ ಪರಿಷತ್ ಸದಸ್ಯ ಮಧು ಜಿ. ಮಾದೇಗೌಡ ಅವರು 2.5 ಲಕ್ಷ ರೂ. ನೀಡಿದ್ದರು. ಈಗ ಹಾಲಿ ಶಾಸಕ ಎಂ.ಆರ್. ಮಂಜುನಾಥ್ ಮತ್ತು ಸಂಸದ ಸುನಿಲ್ ಬೋಸ್ ಅವರು ಹೆಚ್ಚಿನ ಅನುದಾನ ನೀಡಿ ಭವನಕ್ಕೆ ಬಲ ತುಂಬಿದ್ದಾರೆ. ನಿಮ್ಮ ಅಧ್ಯಕ್ಷತೆ ಯಲ್ಲಿಯೇ, ನಿಮ್ಮ ಕೈಯಿಂದಲೇ ಈ ಭವನ ಉದ್ಘಾಟ ನೆಯಾಗಬೇಕು ಎಂಬುದು ನಮ್ಮೆಲ್ಲರ ಆಸೆಯಾಗಿದೆ” ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಸಂಘದ ಖಜಾಂಚಿ ಸೋಮಶೇಖರ್, ಜಿಲ್ಲಾ ಸಂಘದ ಖಜಾಂಚಿ ಪುಟ್ಟರಾಜು ಜಿಲ್ಲಾ ನಿರ್ದೇಶಕರಾದ ನಂದೀಶ್, ವಿಜಯಕುಮಾರ್, ಮಂಜು ಇನ್ನಿತರರು ಉಪಸ್ಥಿತರಿದ್ದರು.

# ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಜನ್ಮ ವರ್ಧಂತೋತ್ಸವ

## ಸರ್ವ ಧರ್ಮಗಳ ಗುರುಗಳ ಸಮ್ಮುಖದಲ್ಲಿ ಆನಾಥಶ್ರಮದಲ್ಲಿ ವಯೋ ವೃದ್ದರಿಗೆ ಸನ್ಮಾನ: ಊಟದ ವ್ಯವಸ್ಥೆ

ಚಾಮರಾಜನಗರ, ಸುತ್ತೂರು ಶ್ರೀ ಕ್ಷೇತ್ರವು ಸರ್ವ ಧರ್ಮ ಮತ್ತು ಜಾತಿಯನ್ನು ಮೀರಿ ಮಾನವ ಕುಲವೇ ಒಂದೇ ಎಂಬಂತೆ ಎಲ್ಲಾ ಪ್ರಗತಿಗೆ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿಜಿಗಳು ಶ್ರಮಿಸುತ್ತಿದ್ದಾರೆ ಎಂದು ಹರವೆ ಮಠದ ಶ್ರೀ ಸರ್ಪಭೂಷಣಸ್ವಾಮೀಜಿ ತಿಳಿಸಿದರು.

ನಗರದ ಹೊರ ವಲಯದ ಉತ್ತುವಳ್ಳಿಯಲ್ಲಿರುವ ಆಶ್ರಯ ಸೇವಾ ಟ್ರಸ್ಟ್‌ನ ಹಿರಿಯ ಮನೆಯಲ್ಲಿ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿಗಳ ಜನ್ಮ ವರ್ಧಂತೋತ್ಸವ ಆಚರಣಾ ಸಮಿತಿಯ ಸಹಯೋಗದಲ್ಲಿ ನಡೆದ ಶ್ರೀಗಳ ಜನ್ಮ ವಧರ್ಂತೋತ್ಸವ ಕಾರ್ಯಕ್ರಮದಲ್ಲಿ ವೃದ್ದರನ್ನು ಸನ್ಮಾನಿಸಿ, ಅವರಿಗೆ ಸಿಹಿ ಊಟವನ್ನು ಬಿಡಿಸಿ ಅವರು ಮಾತನಾಡಿದರು. ಎಲ್ಲಾ ಧರ್ಮಗಳು ಮನುಕುಲ ಉದ್ದಾರಕ್ಕಾಗಿ ಶ್ರಮಿಸು ಎಂದು ಹೇಳುತ್ತಿವೆ. ಈ ನಿಟ್ಟಿನಲ್ಲಿ ಶ್ರೀಗಳು ಸುತ್ತೂರು ಕ್ಷೇತ್ರದ ಬೆಳವಣಿಗೆಯ ಜೊತೆಗೆ ಮಾನವೀಯ ಮೌಲ್ಯಗಳನ್ನು ರೂಡಿಸಿಕೊಂಡು ಯಾರೇ ಮಠಕ್ಕೆ ಬಂದರು ಅವರನ್ನು ಮೊದಲು ಪ್ರಸಾದ ಮಾಡಿ ಎಂದು ಹೇಳುವ ಜೊತೆಗೆ ಅವರ ಸಂಕಷ್ಟಗಳಿಗೆ ಸ್ಪಂದಿಸುವ ಕೆಲಸವನ್ನು ನಿರಂತರವಾಗಿ ಮಾಡುತ್ತಾ




ಬಂದಿದ್ದಾರೆ. ಇತ್ತೀಚೆಗೆ ನಡೆದ ಶ್ರೀ ರಾಜೇಂದ್ರಶೀಗಳ ಜಯಂತಿ ಕಾರ್ಯಕ್ರಮ ಸಾಕ್ಷಿಯಾಗಿದೆ. ಸಾವಿರಾರು ಮಂದಿ ಭಾಗವಹಿಸುವ ಜೊತೆಗೆ ಬಹಳ ಅಚ್ಚುಕಟ್ಟಾಗಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ತಮ್ಮ ಜನ್ಮ ದಿನವನ್ನು ಎಂದು ಆದ್ದೂರಿಯಾಗಿ ಆಚರಣೆ ಮಾಡಿಕೊಂಡವರಲ್ಲ. ಇದಕ್ಕೆ ಅವರು ವಿರೋಧವು ವಿದೆ. ಆದರೂ ರವಿಕುಮಾರ್ ಅವರ ಜನ್ಮ ದಿನದಂದು ಕಳೆದ ವರ್ಷದಿಂದ ಅನಾಥಶ್ರಮದಲ್ಲಿ ಊಟದ ವ್ಯವಸ್ಥೆಯನ್ನು ಮಾಡಿ, ಅನಾಥ ವೃದ್ದರೊಂದಿಗೆ ಅಚರಣೆ ಮಾಡುತ್ತಿದ್ದರುವುದು ಸಂತಸ ತಂದಿದೆ ಎಂದರು.

ಕೋಡಿಉಗನೆ ಚರ್ಚ್‌ನ ಫಾದರ್ ಎಂ.ಪಿ. ಜಯರಾಜ್ ಮಾತನಾಡಿ, ಸುತ್ತೂರು ಶ್ರೀಗಳು ದಾಸೋಹ, ಶಿಕ್ಷಣ, ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಿದ್ದವರು. ಸಕಲರಿಗೂ ಒಳಿತನ್ನು ಬಯಸುವ ಜೊತೆಗೆ ಜಾತಿ, ಧರ್ಮವನ್ನು ಮೀರಿ ಮನಕುಲದ ಉದ್ದಾರಕ್ಕೆ ಶ್ರಮಿಸುತ್ತಿದ್ದಾರೆ ಎಂದು ಬಣ್ಣಿಸಿದರು. ಅರಭೀಕ್ ಕಾಲೇಜಿನ ಪ್ರಾಂಶುಪಾಲರಾದ ಸೈಯದ್ ರೆಹಮಾನ್, ರೆಹಮದ್ ಮಸೀದಿಯ ಧರ್ಮ ಗುರುಗಳಾದ ಸಮೀವುಲ್ಲಾ, ಅಮೀರ್‌ಶ್ರೀಫ್ ಅವರು ಮಾತನಾಡಿ, ಸುತ್ತೂರು ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿಗಳ ಜನ್ಮ ವಧರ್ಂತೋತ್ಸವದಲ್ಲಿ ಭಾಗವಹಿಸಿರುವುದು ನಮ್ಮ ಪುಣ್ಯ. ಇಂಥ ಸಾಧು , ಸಂತರು ನಾಡಿನ ಜನರಿಗೆ ಪ್ರೀತಿ, ವಿಶ್ವಾಸವನ್ನು ತೋರಿಸುವ ಜೊತೆಗೆ ಧರ್ಮ ಮಾರ್ಗದಲ್ಲಿ ನಡೆಯುವಂತೆ ಹೇಳುತ್ತಿದ್ದಾರೆ. ಸುತ್ತೂರು ಮಠ ದೇಶ ಅಲ್ಲ ವಿದೇಶದಲ್ಲಿ ಖ್ಯಾತಿಯನ್ನು ಪಡೆದುಕೊಂಡಿದೆ. ಸುತ್ತೂರಿನಲ್ಲಿ ಶ್ರೀಗಳ ನೇತೃತ್ವದಲ್ಲಿ 7 ದಿನಗಳ ಕಾಲ ನಡೆಯುವ ಜಾತ್ರೆ ಮಹೋತ್ಸವವು ಸರ್ವ ಧರ್ಮ ಹಾಗೂ ಸರ್ವ ಜಾತಿಗಳ ಸಂಗಮವಾಗಿದೆ. ಬಹಳ ಅಚ್ಚುಕಟ್ಟಾಗಿ ಏಳು ದಿನಗಳು ಜಾತ್ರೆಯನ್ನು ಸಮಾನತೆ ಸಂದೇಶವನ್ನು ಸಾರುತ್ತಾರೆ ಎಂದರು.

ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮಿಗಳ ಜನ್ಮ ವರ್ಧಂತೋತ್ಸವ ಆಚರಣಾ ಸಮಿತಿಯ ಅಧ್ಯಕ್ಷ ಬಿ.ಕೆ. ರವಿಕುಮಾರ್ ಮಾತನಾಡಿ, ಶ್ರೀಗಳು ಎಂದು ಜನ್ಮ ದಿನವನ್ನು ಆಚರಣೆ ಮಾಡಿಕೊಂಡವರಲ್ಲ. ಇದಕ್ಕೆ ಅವರು ಒಪ್ಪುವುದಿಲ್ಲ. ಅವರ ಭಕ್ತರಾದ ನಾವುಗಳು ಸೇವಾ ಕಾರ್ಯಗಳ ಮೂಲಕ ಶ್ರೀಗಳ ಜನ್ಮ ದಿನವನ್ನು ಅರ್ಥಪೂರ್ಣವಾಗಿ ಆಚರಣೆ ಮಾಡುತ್ತಾ ಬಂದಿದ್ದೇವೆ. ಶ್ರೀಗಳು ಮನುಕುಲದ ಉದ್ದಾರಕಾಗಿ ತಮ್ಮನ್ನು ಅರ್ಪಣೆ ಮಾಡಿಕೊಂಡಿದ್ದಾರೆ. ಜಾತಿ,ಧರ್ಮವನ್ನು ಮೀರಿ ಮಾನವ ಧರ್ಮ ಒಂದೇ ಎಂಬಂತೆ ಸಂಕಷ್ಟಗಳಿಗೆ ಶ್ರಮಿಸುತ್ತಿದ್ದಾರೆ. ಅವರ ತತ್ವ, ಆದರ್ಶಗಳು, ಶಿಸ್ತು ಮತ್ತು ನೊಂದವರಿಗೆ ಸ್ಪಂದಿಸುವ ಗುಣಗಳು ನಮ್ಮೆಲ್ಲರಿಗೂ ಮಾದರಿಯಾಗಿದೆ. ಶ್ರೀಗಳಿಗೆ ಭಗವಂತ ಇನ್ನು ಹೆಚ್ಚಿನ ಆಯಸ್ಸು ಆರೋಗ್ಯವನ್ನು ಕಲ್ಪಿಸಿ, ಇನ್ನು ಹೆಚ್ಚಿನ ಸೇವಾ ಕಾರ್ಯಗಳು ಅವರ ನೇತೃತ್ವದಲ್ಲಿ ನಡೆಯಲಿ ಎಂದು ಅಶಿಸಿದರು. ಕಾರ್ಯಕ್ರಮದಲ್ಲಿ ಆಶ್ರಮದಲ್ಲಿರುವ ಎಲ್ಲ ವೃದ್ದರನ್ನು ಶಾಲು ಹೊದಿಸಿ, ಹಾರ ಹಾಕಿ ಸನ್ಮಾನಿಸುವ ಜೊತೆಗೆ ಅವರಿಗೆ ಶ್ರೀಗಳ ಹೆಸರಿನಲ್ಲಿ ಒಂದು ಹೊತ್ತು ಸಿಹಿ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಆಶ್ರಯ ಸೇವಾ ಟ್ರಸ್ಟ್ ಗುರುಸ್ವಾಮೀಜಿ, ರಮೇಶ್, ವೀರಶೈವ ಲಿಂಗಾಯತ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ನಿರ್ದೇಶಕ ಮಂಜೇಶ್ ಮೂಡ್ಲುಪುರ, ಎಪಿಎಂಸಿ ಮಾಜಿ ಅಧ್ಯಕ್ಷ ಡಿ. ನಾಗೇಂದ್ರ, ನಿರ್ದೇಶಕ ಅಲೂರು ಪ್ರದೀಪ್, ಮುಖಂಡರಾದ ಉತ್ತುವಳ್ಳಿ ಲಿಂಗರಾಜು, ಮೊದಲಾಧವರು ಇದ್ದರು.

## ಕೃಷ್ಣ ಜನ್ಮಾಷ್ಟಮಿ ಸಂಭ್ರಮ

ಗುಂಡ್ಲುಪೇಟೆ: ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ತಾಲ್ಲೂಕಿನಾದ್ಯಂತ ಭಕ್ತಿಭಾವ ಹಾಗೂ ಸಂಭ್ರಮ ದಿಂದ ಆಚರಿಸಲಾಯಿತು.

ಶಾಲಾ–ಕಾಲೇಜುಗಳು, ದೇವಸ್ಥಾನಗಳು ಸೇರಿದಂತೆ ವಿವಿಧೆಡೆ ಮಕ್ಕಳು ರಾಧಾ?ಕೃಷ್ಣರ ವೇಷ ಧರಿಸಿ ಸಂಭ್ರಮಿಸಿದರು.



ಶ್ರಾವಣ ಮಾಸದ ಕೃಷ್ಣ ಪಕ್ಷದ ಅಷ್ಟಮಿಯಂದು ಶ್ರೀಕೃಷ್ಣ ಜನಿಸಿದನೆಂಬ ನಂಬಿಕೆಯ ಹಿನ್ನೆಲೆಯಲ್ಲಿ ಜನ್ಮಾಷ್ಟಮಿಯನ್ನು ಆಚರಿಸಲಾಗುತ್ತದೆ. ಮಥುರೆಯಲ್ಲಿ ದೇವಕಿ?ವಾಸುದೇವರ ಎಂಟನೇ ಮಗುವಾಗಿ ಶ್ರೀಕೃಷ್ಣ ಜನಿಸಿ, ದುಷ್ಟ ಕಂಸನ ಸಂಹಾರ ಮಾಡಿ ಧರ್ಮವನ್ನು ಸ್ಥಾಪಿಸಿದನೆಂಬುದು ಪುರಾಣದ ನಂಬಿಕೆಯಾಗಿದೆ.

ಜನ್ಮಾಷ್ಟಮಿಯ ಅಂಗವಾಗಿ ಭಕ್ತರು ಉಪವಾಸವಿದ್ದು, ಮಧ್ಯರಾತ್ರಿ ಶ್ರೀಕೃಷ್ಣನಿಗೆ ವಿಶೇಷ ಪೂಜೆ ಸಲ್ಲಿಸಿ, ತೊಟ್ಟಿಲಿನಲ್ಲಿ ತೂಗಿ, ಪ್ರಸಾದ ವಿತರಿಸುವ ಮೂಲಕ ಹಬ್ಬ ಆಚರಿಸಿದರು. ಹಲವು ಕಡೆ ದಹಿ ಹಂಡಿ ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಕೂಡ ನಡೆದವು. ತಾಲ್ಲೂಕಿನ ಹಸಗೂಲಿ ಗ್ರಾಮದ ಪಲ್ಲವಿ?ಮಹೇಂದ್ರ ದಂಪತಿಗಳು ತಮ್ಮ ಮಕ್ಕಳಾದ ಹಿತೀಕ್ಷಾ ಮಹೇಂದ್ರ ಹಾಗೂ ಶಮೀಕ್ಷಾ ಮಹೇಂದ್ರ ಅವರಿಗೆ ರಾಧಾ?ಕೃಷ್ಣನ ವೇಷ ತೊಡಿಸಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಂಭ್ರಮದಿಂದ ಆಚರಿಸಿದರು. ರಾಧಾ?ಕೃಷ್ಣರ ವೇಷದಲ್ಲಿ ಮುದ್ದಾಗಿ ಕಂಗೊಳಿಸಿದ ಮಕ್ಕಳು ಎಲ್ಲರ ಗಮನ ಸೆಳೆದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಪ್ರಸ್ತುತ ಮಹಾಭಾರತದ ಜ್ಞಾನ ಅಗತ್ಯ

## ವಿಧಾನ ಪರಿಷತ್ ಸದಸ್ಯ ಆರ್.ರಘು ಅಭಿಮತ | ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮ

ಮೈಸೂರು: ಧರ್ಮ ಮತ್ತು ಅಧರ್ಮದ ನಡುವಿನ ಸಂಘರ್ಷವನ್ನು ಅರ್ಥೈಸಿಕೊಳ್ಳಲು ಕಲಿಯುಗದಲ್ಲಿರುವ ಪ್ರತಿಯೊಬ್ಬರೂ ಮಹಾಭಾರತವನ್ನು ತಿಳಿಯುವುದು ಅಗತ್ಯವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಆರ್. ರಘು ಹೇಳಿದರು. ನಗರದ ಕರ್ನಾಟಕ ಕಲಾಮಂದಿರದ ಕಿರುರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರಪಾಲಿಕೆ ಹಾಗೂ ಶ್ರೀ ಕೃಷ್ಣ ಜಯಂತ್ಯೋತ್ಸವ ಸಮಿತಿಯ ವತಿಯಿಂದ ಆಯೋಜಿಸಿದ್ದ ಶ್ರೀ ಕೃಷ್ಣ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಭಗವಂತನ ಸ್ವರೂಪಿಯಾಗಿ ಅವತರಿಸಿದ ಶ್ರೀಕೃಷ್ಣನು ತಾಯಿಯ ಗರ್ಭದಲ್ಲಿದ್ದಾಗಲೇ ಜಗತ್ತಿಗೆ ತನ್ನ ಸಂದೇಶ ನೀಡಲು ಪ್ರಾರಂಭಿಸಿದನು. ಬಾಲ್ಯದಲ್ಲಿಯೇ ತನ್ನ ಬಾಯಿ ತೆರೆದು ಇಡೀ ಜಗತ್ತನ್ನೇ ತೋರಿಸುವ ಮೂಲಕ ತನ್ನ ದಿವ್ಯತೆಯನ್ನು ಪ್ರಕಟಿಸಿದನು. ಜೀವನದಲ್ಲಿ ನಮಗೆ ಅಧಿಕಾರ, ಐಶ್ವರ್ಯ ಬಂದಾಗ ಉನ್ಮತ್ತರಾಗಿ ಮೆರೆಯಬಾರದು ಮತ್ತು ತೀವ್ರ ದುಃಖ–ಕಷ್ಟಗಳು ಬಂದಾಗ ಧೃತಿಗೆಡಬಾರದು ಎಂದು ಅವರು ಕಿವಿಮಾತು ಹೇಳಿದರು. ಈ ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಸುದರ್ಶನ್, ಬರಹಗಾರರಾದ ಡಾ. ನಾಗೇಶ್ ಯಾದವ್, ಯಾದವ ಸಂಘದ ಉಪಾಧ್ಯಕ್ಷ ಎಮ್. ವೆಂಕಟಾಚಲ, ಕಾರ್ಯದರ್ಶಿ ಜವರೇಗೌಡ, ರಂಗಸ್ವಾಮಿ, ಪುಷ್ಪವಲ್ಲಿ ಮತ್ತಿತರರು ಉಪಸ್ಥಿತರಿದ್ದರು.



### ಕೃಷ್ಣನ ಯಾದವ ಕುಲದ ಕೊಡುಗೆ

ಭೀಮನು ಕೃಷ್ಣನಲ್ಲಿ ಅತ್ಯಂತ ಸುಖಿ ಹಾಗೂ ಅತ್ಯಂತ ದುಃಖಿಯಲ್ಲಿರುವ ಇಬ್ಬರಿಗೂ ಅನ್ವಯವಾಗುವ ಒಂದು ಸಾಲಿನ ಸಂದೇಶವನ್ನು ಕೇಳಿದಾಗ, ಕೃಷ್ಣನು 'ಈ ಸಮಯವೂ ಸರಿದು ಹೋಗಲಿದೆ' ಎಂದು ಬರೆದು ನೀಡಿದನು. ಸಂಪತ್ತು, ಅಧಿಕಾರ ಶಾಶ್ವತವಲ್ಲ ಎಂಬ ಎಚ್ಚರಿಕೆಯನ್ನು ನೀಡುವ ಜೊತೆಗೆ, ಎಂತಹ ಕಷ್ಟದ ಪರಿಸ್ಥಿತಿಯೂ ಕೊನೆಗೊಳ್ಳುತ್ತದೆ ಎಂಬ ಭರವಸೆಯನ್ನು ಕೃಷ್ಣನ ಈ ಸಂದೇಶ ನಮಗೆ ನೀಡುತ್ತದೆ. ಶ್ರೀ ಕೃಷ್ಣನು ಜಗತ್ತಿಗೆ ನೀಡಿದ ಧರ್ಮಸಾರ ಹಾಗೂ ಪ್ರತಿಯೊಂದು ಹಂತದ ಸಂದೇಶಗಳು ಅಪ್ರತಿಮವಾದವು. ಇವುಗಳನ್ನು ಶಿಕ್ಷಣದ ಭಾಗವಾಗಿಸಿ ಬೆಳೆಸಿದರೆ ಮಕ್ಕಳು ಸನ್ಮಾರ್ಗದಲ್ಲಿ ಸಾಗುತ್ತಾರೆ. ಯಾದವ ಕುಲವು ಭಾರತೀಯ ಸಂಸ್ಕೃತಿಗೆ ತನ್ನದೇ ಆದ ದೊಡ್ಡ ಕೊಡುಗೆ ನೀಡಿದೆ. ಮೈಸೂರು ಸಂಸ್ಥಾನವನ್ನು ಆಳಿದ ರಾಜಮನೆತನವು ಯದುವಂಶಕ್ಕೆ ಸೇರಿದುದಾಗಿದ್ದು, ದ್ವಾರಕೆಯಿಂದ ಬಂದ ಈ ಸಂಸ್ಥಾನಿಕರು ನಾಡಿಗೆ ನೀರು, ಆರೋಗ್ಯ, ಶಿಕ್ಷಣ, ದೇವಾಲಯ ಹಾಗೂ ಆಧ್ಯಾತ್ಮಿಕ ಕೊಡುಗೆಗಳನ್ನು ನೀಡಿದ್ದಾರೆ ಎಂದು ಅವರು ವಿವರಿಸಿದರು.

### ಜಾಗೃತಿ ಮೂಡಿಸುವ ಕರ್ತವ್ಯ

ಯಾದವ ಸಮುದಾಯವು ಸಂಖ್ಯೆಯಲ್ಲಿ ಕಡಿಮೆಯಿದ್ದರೂ ಧರ್ಮ ಮತ್ತು ಸಾಮಾಜಿಕ ವಿಚಾರಗಳಲ್ಲಿ ಸದಾ ಮುಂಚೂಣಿಯಲ್ಲಿದ್ದು, ಸಮಾಜಕ್ಕೆ ದಾರಿದೀಪವಾಗಿ ಕೆಲಸ ಮಾಡುತ್ತಿದೆ. ಮಹಾಭಾರತ ಹಾಗೂ ಭಗವದ್ಗೀತೆಯ ಬಗ್ಗೆ ಜಾಗೃತಿ ಮೂಡಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಅವರು ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಆರ್. ಐಶ್ವರ್ಯ ಅವರು, ಭಗವದ್ಗೀತೆಯ ಅತ್ಯಂತ ಪ್ರಸಿದ್ಧ ಶ್ಲೋಕವಾದ 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ' ಎಂಬುದನ್ನು ಉಲ್ಲೇಖಿಸಿದರು. ಮಾನವಕುಲದಲ್ಲಿ ಅಧರ್ಮವು ಹೆಚ್ಚಾಗಿ, ಧರ್ಮದ ಕ್ಷೀಣತೆ ಉಂಟಾದಾಗಲೆಲ್ಲ ಸಜ್ಜನರ ರಕ್ಷಣೆ ಹಾಗೂ ಧರ್ಮದ ಮರುಸಂಸ್ಥಾಪನೆಗಾಗಿ ಭಗವಂತನು ಯುಗ ಯುಗಗಳಲ್ಲೂ ವಿವಿಧ ರೂಪಗಳಲ್ಲಿ ಅವತರಿಸುತ್ತಾನೆ ಎಂಬುದೇ ಶ್ರೀಕೃಷ್ಣನ ವಾಣಿಯ ಅರ್ಥ ಎಂದು ವಿವರಿಸಿದರು.

ಪ್ರಜಾಸೇವಾ ಇಲಾಖೆ



ಶ್ರೀ ಡಿ.ಕೆ. ಶಿವಕುಮಾರ್
ಸನ್ಮಾನ್ಯ ಮುಖ್ಯಮಂತ್ರಿಗಳು



ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು

ಪ್ರಜಾಸೇವೆ ಉದ್ಘಾಟನೆ

ಅಹವಾಲು ನಿಮ್ಮದು, ಪರಿಹಾರ ನಮ್ಮದು

ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ಕೆ. ಶಿವಕುಮಾರ್ ಅವರಿಂದ ವಿಜಯನಗರ ಜಿಲ್ಲೆ, ಕೂಡ್ಲಿಗಿಯಲ್ಲಿ ರಾಜ್ಯ ಮಟ್ಟದಲ್ಲಿ ಚಾಲನೆ ಹಾಗೂ

ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ

ಡಾ: ಯತೀಂದ್ರ ಸಿದ್ದರಾಮಯ್ಯ ಅವರಿಂದ ಪ್ರಜಾಸೇವಾ ಸಭೆ







ದಿನಾಂಕ:
05.09.2026
ಸಮಯ:
ಬೆಳಿಗ್ಗೆ 10.30 ಗಂಟೆಗೆ
ಸ್ಥಳ:
ಬಿ.ಆರ್. ಅಂಬೇಡ್ಕರ್ ಸಮುದಾಯ ಭವನ ಹುಣಸೂರು,
ಮೈಸೂರು ಜಿಲ್ಲೆ

ಪ್ರತಿ ತಿಂಗಳ ಮೊದಲ ಹಾಗೂ ಮೂರನೇ ಶನಿವಾರ ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಆಯಾ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ಅಧ್ಯಕ್ಷತೆಯಲ್ಲಿ ಪ್ರಜಾಸೇವಾ ಅಭಿಯಾನ ಸಭೆಗಳು ನಡೆಯಲಿದ್ದು , ಜನರಿಂದ ಅಹವಾಲು ಸ್ವೀಕರಿಸಿ ಅರ್ಹ ಅರ್ಜಿಗಳಿಗೆ ಪರಿಹಾರ ಒದಗಿಸಲಾಗುವುದು

ಬಾಗಿಲಿಗೆ ಬಂತು ಸರಕಾರ, ಸೇವೆಗೆ ಇರಲಿ ಸಹಕಾರ

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು ಪ್ರತಿಯೊಬ್ಬ ಭಾರತೀಯರ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಸರ್ವರಿಗೂ ಆದರದ ಸ್ವಾಗತ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಹಿಂದುಳಿದ ವರ್ಗ ಹಾಗೂ ಬ್ರಾಹ್ಮಣ ಸಮುದಾಯದ ಪತ್ರಿಕೆಗಳಿಗೆ ಪ್ರೋತ್ಸಾಹದಾಯಕ ಜಾಹೀರಾತು

# ಸರಳ ವಿವಾಹಗಳು ಪ್ರಸ್ತುತ ಅಗತ್ಯ: ಉದ್ದಾನಸ್ವಾಮೀಜಿ



ಗುಂಡ್ಲುಪೇಟೆ: ಆಡಂಬರ, ದುಂದು ವೆಚ್ಚ ಹಾಗೂ ಅನವಶ್ಯಕ ಆಚರಣೆಗಳಿಗೆ ಕಡಿವಾಣ ಹಾಕಿ ಸರಳವಾಗಿ ವಿವಾಹವಾಗುವುದು ಇಂದಿನ ಅಗತ್ಯವಾಗಿದೆ ಎಂದು ಮೂಡುಗೂರು ಉದ್ದಾನೇಶ್ವರ ವಿರಕ್ತಮಠದ ಇಮ್ಮಡಿ ಉದ್ದಾನೇಶ್ವರ ಸ್ವಾಮೀಜಿ ಹೇಳಿದರು.

ಮೂಡುಗೂರು ಉದ್ದಾನೇಶ್ವರ ವಿರಕ್ತಮಠದಲ್ಲಿ ನಡೆದ ಹತ್ತನೇ ವಚನ ಕಲ್ಯಾಣ ಕಾರ್ಯಕ್ರಮದಲ್ಲಿ ವಧು ಪವಿತ್ರ ಹಾಗೂ ವರ ಶಿವಕುಮಾರ ಅವರು ಶರಣರ ಚಿಂತನೆಗಳಂತೆ ಅಷ್ಟಾವರಣ ಪದ್ಧತಿಯಲ್ಲಿ ವಚನ ಕಲ್ಯಾಣದ ಮೂಲಕ ಸತಿಪತಿಗಳಾಗಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಹೂರದಹಳ್ಳಿ ಗ್ರಾಮದ ಕೃಷಿಕ ಕುಟುಂಬದ ನವದಂಪತಿಗಳನ್ನು ಆಶೀರ್ವದಿಸಲು ಆಗಮಿಸಿದ್ದ ಗ್ರಾಮಸ್ಥರು, ಕುಟುಂಬದ ಹಿರಿಯರು, ಬಂಧುಗಳು ಹಾಗೂ ಸ್ನೇಹಿತರ ಸಮ್ಮುಖದಲ್ಲಿ ಯಾವುದೇ ಆಡಂಬರವಿಲ್ಲದೆ ವಿವಾಹ ನೆರವೇರಿತು. ವಧುವರರಿಗೆ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿದ ಇಮ್ಮಡಿ ಉದ್ದಾನೇಶ್ವರ ಸ್ವಾಮೀಜಿ, ದೊಡ್ಡ ದೊಡ್ಡ ಛತ್ರಗಳಲ್ಲಿ ವಿವಾಹ ನಡೆಸುವುದನ್ನು ಅನುಸರಿಸುವ ಕೆಲವರು ಪಿತ್ರಾರ್ಜಿತವಾಗಿ ಬಂದ ಸಣ್ಣಪುಟ್ಟ ಜಮೀನುಗಳನ್ನು ಮಾರಾಟ ಮಾಡಿ, ಪ್ರೀ-ವೆಡ್ಡಿಂಗ್ ಶೂಟ್, ಜವಳಿ, ಛತ್ರಗಳ ಬಾಡಿಗೆ, ಅಬ್ಬರದ ಆರ್ಕೆಸ್ಟ್ರಾ ಸೇರಿದಂತೆ ಅನಗತ್ಯ ಖರ್ಚುಗಳಿಗೆ ಹಣ ವ್ಯಯಿಸಿ ಬೀದಿಪಾಲಾಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಇಂತಹ ದುಂದು ವೆಚ್ಚದ ಬದಲಾಗಿ ಬಂಧು-ಬಾಂಧವರು ಹಾಗೂ ಗುರು-ಜಂಗಮರ ಸಮ್ಮುಖದಲ್ಲಿ ಬಸವಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಧರ್ಮ ಧ್ವಜಾರೋಹಣ ಮಾಡಿ, ಅಷ್ಟಾವರಣದ ಆಚರಣೆಯೊಂದಿಗೆ ಸತಿಪತಿಗಳಾಗುವ ಮೂಲಕ ಸಮಯ, ಹಣ ಹಾಗೂ ಬಾಂಧವ್ಯವನ್ನು ಉಳಿಸಿ ಬೆಳೆಸಿಕೊಳ್ಳಬಹುದು ಎಂದರು. ಇಂದಿನ ಯುವಜನತೆಯಲ್ಲಿ ಕೆಲವರು ಸರಳ ವಿವಾಹದ ಹಾದಿಯನ್ನು ಆಯ್ಕೆ ಮಾಡು ತ್ತಿರುವುದು ಸಂತೋಷದ ಸಂಗತಿಯಾಗಿದೆ. ಹಣವನ್ನು ಸಂಪಾದಿಸುವುದು ಕಷ್ಟ; ಅದನ್ನು ಅನಗತ್ಯವಾಗಿ ಅಪಮೌಲ್ಯಗೊಳಿಸಬಾರದು ಎಂಬುದು ಶರಣರ ತತ್ವವಾಗಿದೆ. ಅನ್ನ, ನೀರು ಹಾಗೂ ಪರಿಶ್ರಮದ ಹಣವನ್ನು ವ್ಯರ್ಥಗೊಳಿಸಿ ಮಾಡುವ ವಿವಾಹಗಳು ಶರಣ ಸಮ್ಮತವಲ್ಲ. ಆದ್ದರಿಂದ ಇಂತಹ ಸರಳ ವಿವಾಹಗಳು ಸಾವಿರವಾಗಲಿ. ಮಠದಲ್ಲಿ ಸರಳವಾಗಿ ಸತಿಪತಿಗಳಾಗಲು ಮುಂದಾಗುವವರಿಗೆ ಸದಾ ಸಹಕಾರ ನೀಡಲಾಗುವುದು ಎಂದರು.

ವಚನ ಕಲ್ಯಾಣದಲ್ಲಿ ವಚನ ನಿರೂಪಣೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಚಾಮರಾಜನಗರ ಜಿಲ್ಲಾಧ್ಯಕ್ಷ ಶೈಲಕುಮಾರ್ ನೆರವೇರಿಸಿದರು. ಆರ್. ಪ್ರಸಾದ್ ಸ್ವಾಗತಿಸಿದರು. ಕಟ್ನವಾಡಿ ಭಜನಾ ಸಂಘದವರು ಸಾಂದರ್ಭಿಕ ವಚನ ಗಾಯನ ನಡೆಸಿದರು. ಬಲಚವಾಡಿ ಭಿಕ್ಷದ ಮಠದ ಶ್ರೀಗಳು ಸಹಕರಿಸಿದರು. ಕಾರ್ಯಕ್ರಮದ ನಂತರ ಚಿನ್ಮಯಜ್ಞಾನಿ ಚೆನ್ನಬಸವಣ್ಣನವರ ದಾಸೋಹ ಭವನದಲ್ಲಿ ಭಕ್ತರಿಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿತ್ತು.

# ವೀರಪ್ಪನ್ ಊರಲ್ಲಿ ಅರಣ್ಯಾಧಿಕಾರಿಗೆ ಪೂಜೆ

ಚಾಮರಾಜನಗರ: ಕಾಡುಗಳ್ಳ ವೀರಪ್ಪನ್ ಊರಾದ ಹನೂರು ತಾಲೂಕಿನ ಗೋಪಿನಾಥಂ ಗ್ರಾಮದಲ್ಲಿ ಅದ್ಧೂರಿಯಾಗಿ ಗ್ರಾಮ ದೇವತೆ ಹಬ್ಬ ಆಚರಿಸಲಾಯಿತು. ಹಬ್ಬದಲ್ಲಿ ದಿವಂಗತ ಅರಣ್ಯಾಧಿಕಾರಿಯನ್ನು ಸ್ಮರಿಸಿ, ಪೂಜಿಸಿ ನಮಿಸಲಾಯಿತು.

ಗೋಪಿನಾಥಂ ಗ್ರಾಮದಲ್ಲಿ ನಡೆದ ಗ್ರಾಮ ದೇವತೆ ಮಾರಿಯಮ್ಮ ಹಬ್ಬದಲ್ಲಿ ದಿವಂಗತ ಅರಣ್ಯಾಧಿಕಾರಿ ಪಿ.ಶ್ರೀನಿವಾಸ್ ಅವರನ್ನು ಸ್ಮರಣೆ ಮಾಡಲಾಯಿತು. ದೇವರ ಜೊತೆಗೆ ಶ್ರೀನಿವಾಸ್ ಅವರಿಗೂ ಜನರು ಪೂಜೆ ಸಲ್ಲಿಸಿ, ದೀಪ ಬೆಳಗಿ ಪ್ರಾರ್ಥಿಸಿದ್ದರು. ವೀರಪ್ಪನ್?ನನ್ನು ಜೀವಂತವಾಗಿಯೇ ಸೆರೆ ಹಿಡಿಯುತ್ತೇನೆಂದು ಸಾಕಷ್ಟು ಶ್ರಮಿಸಿದ್ದ ಪಿ.ಶ್ರೀನಿವಾಸ್ ಗಾಂಧಿವಾದಿಯಾಗಿದ್ದರು. ಕರ್ತವ್ಯ ನಿರ್ವಹಣೆ ವೇಳೆ ಗ್ರಾಮಸ್ಥರಿಗೆ ಸಾಕಷ್ಟು ನೆರವಾಗಿದ್ದರು. ಜೊತೆಗೆ ಮಾರಿಯಮ್ಮ ದೇವಾಲಯವನ್ನು ಅವರೇ ಕಟ್ಟಿಸಿದ್ದು, ಇಲ್ಲಿ ಪ್ರತಿವರ್ಷ ಹಬ್ಬ ನಡೆಯುತ್ತದೆ. ವೀರಪ್ಪನ್ ಮೋಸಕ್ಕೆ ಶ್ರೀನಿವಾಸ್ ಬಲಿಯಾದ ಬಳಿಕ ಅವರ ಫೋಟೋವನ್ನು ದೇವಾಲಯದಲ್ಲಿ ಇಟ್ಟು ಗ್ರಾಮಸ್ಥರು ಪೂಜೆ ಸಲ್ಲಿಸುತ್ತಿದ್ದರು. 3 ವರ್ಷಗಳ ಹಿಂದೆ ಅವರ ಪುತ್ಥಳಿ ನಿರ್ಮಾಣ ಮಾಡಿ ದೇವಾಲಯದ ಎದುರು ಪ್ರತಿಷ್ಠಾಪಿಸಲಾಗಿದೆ.

ಗೋಪೀನಾಥಂನಲ್ಲಿ ವೀರಪ್ಪನ್ ಹೆಸರು ಮರೆಯಾಗುತ್ತಿದ್ದರೆ, ಅರಣ್ಯಾಧಿಕಾರಿ ಪಿ. ಶ್ರೀನಿವಾಸ್ ಅವರ ಸೇವಾ ಕಾರ್ಯವು ವರ್ಷದಿಂದ ವರ್ಷಕ್ಕೆ ಪ್ರವರ್ಧಮಾನಕ್ಕೆ ಬರುತ್ತಿದೆ. ಮಾರಿಯಮ್ಮ ಹಬ್ಬದ ಆಹ್ವಾನ ಪತ್ರಿಕೆಯಲ್ಲೂ ಶ್ರೀನಿವಾಸ್ ಅವರ ಫೋಟೋ ವನ್ನು ಗ್ರಾಮಸ್ಥರು ಅಚ್ಚು ಹಾಕಿಸುವ ಜೊತೆಗೆ ದೇವಾಲಯದ ಮುಂಭಾಗ ಶ್ರೀನಿವಾಸ್ ಪುತ್ಥಳಿಗೆ ಎಲ್ಲರೂ ಪೂಜಿಸುತ್ತಾರೆ.



**ಭಕ್ತಿ ಪರಾಕಾಷ್ಠೆ:** ಮಾರಿಯಮ್ಮನಿಗೆ ಹರಕೆ ಹೊತ್ತ ಭಕ್ತರು ಪ್ರತಿವರ್ಷ ಭಕ್ತಿ ಪರಾಕಾಷ್ಠೆ ಮೆರೆಯುತ್ತಾರೆ. ಈ ವರ್ಷ ಕೂಡ ಬಾಯಿಗೆ, ಬೆನ್ನಿಗೆ ಕಬ್ಬಿಣದ ಸರಳು ಚುಚ್ಚಿಕೊಂಡು ಭಕ್ತರು ಹರಕೆ ತೀರಿಸಿದರು.

## ಚಾಮರಾಜನಗರ ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರ ರಚನೆಗೆ ಆಗ್ರಹ

ಚಾಮರಾಜನಗರ: ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರ ರಚನೆ ಮಾಡಬೇಕು ಎಂದು ಚಿಲಕವಾಡಿ ಮಲ್ಲೇಶ್ ಆಗ್ರಹಿಸಿದರು.



ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಪ್ರತಿ ಜಿಲ್ಲೆಯಲ್ಲೂ ಪೊಲೀಸ್ ದೂರು ಪ್ರಾಧಿಕಾರ ಇರುತ್ತದೆ. ಆದರೆ ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಪೊಲೀಸ್ ದೂರು ಪ್ರಾಧಿಕಾರ ರಚನೆ ಮಾಡುವಂತೆ ಇಲಾಖೆಯಲ್ಲಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಕೂಡಲೇ ಜಿಲ್ಲಾ ಮಟ್ಟದ ಪೊಲೀಸ್ ದೂರು ಪ್ರಾಧಿಕಾರ ರಚನೆ ಮಾಡಿ ಸಾರ್ವಜನಕರಿಗೆ ಅನುಕೂಲ ಮಾಡಿಕೊಡಬೇಕು ಎಂದರು.

ಪೊಲೀಸ್ ದೂರು ಪ್ರಾಧಿಕಾರವು ಪೊಲೀಸರ ಗಂಭೀರ ದುರ್ನಡತೆ, ದೌರ್ಜನ್ಯ ವಿರುದ್ಧ . ಸಾರ್ವಜನಿಕರಿಂದ ದೂರು ಸ್ವೀಕರಿಸಿ ತನಿಖೆ ನಡೆಸುವ ಸ್ವಾಯತ್ತ, ಉನ್ನತಮಟ್ಟದ ಪಾಧಿಕಾರವಾಗಿದೆ. ಇದನ್ನು . ಜಿಲ್ಲೆಯಲ್ಲಿ ರಚನೆ ಮಾಡಿದರೆ ಸಾರ್ವಜನಿಕರಿಗೆ ಅನುಕೂಲವಾಗುತ್ತದೆ. ನ್ಯಾಯ ಸಿಗುತ್ತದೆ. ತಪ್ಪಿಸ್ಥ ಪೊಲೀಸ ಅಧಿಕಾರಿಗಳಿಗೆ ಸಿಬ್ಬಂದಿ. ವಿರುದ್ಧ ಕ್ರಮಕೈಗೊಳ್ಳಲು ಸಾಧ್ಯವಾಗುತ್ತದೆ. ಅಮಾಯಕರಿಗೆ ನ್ಯಾಯ ದೊರೆಯುತ್ತದೆ ಎಂದರು. 2021 ಸಾಲಿನ ಗ್ರಾ.ಪಂ.ಚುನಾವಣೆಗೆ ಸಂಬಂಧಿಸಿದಂತೆ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಾನು ಒಂದು ಅಟ್ರಾಸಿಟಿ ದೂರು ನೀಡಿದ ಉದ್ದೇಶದಿಂದ ನನ್ನ ವಿರುದ್ಧ ಒಂದು ಸುಳ್ಳು ಪ್ರತಿದೂರು ದಾಖಲಿಸಿ, ಪೊಲೀಸರು ಅಧಿಕಾರ ದುರುಪಯೋಗ ಮಾಡಿರುತ್ತಾರೆ. ಅಲ್ಲಿಂದ ಇಲ್ಲಿಯತನಕ ಮಾನವಹಕ್ಕು ಆಯೋಗ, ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿ ಇತರ ಮೇಲಾಧಿಕಾರಿಗಳಿಗೆ ನಾನು ದೂರು ಸಲ್ಲಿಸಿದರು ಯಾವುದೇ ಪ್ರಯೋಜನವಾಗಿಲ್ಲ. ಜಿಲ್ಲೆಯ ಭ್ರಷ್ಟ ಪೊಲಿಸ್ ಒಂದೇ ಠಾಣೆಯಲ್ಲಿ ಎರಡು, ಮೂರು ವರ್ಷಗಳ ಕಾಲ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಿಕೊಟ್ಟಿರುವುದು ಕಾರ್ಯಾಂಗ, ಶಾಸಕಾಂಗದ ಭ್ರಷ್ಟಾಚಾರವನ್ನು ಎತ್ತಿ ತೋರಿಸುತ್ತದೆ. ನನ್ನ ಮೇಲೆ ಸುಳ್ಳು ಪ್ರಕರಣ ದಾಖಲು... ಮಾಡಿದರು. ಅವೆಲ್ಲವನ್ನು ನ್ಯಾಯಾಲಯದಲ್ಲಿ ಇತ್ಯರ್ಥಪಡಿಸಿಕೊಂಡಿದ್ದೇನೆ. ಆಗಾಗಿ ತಪ್ಪಿಸ್ಥ ಪೊಲೀಸ್. ಅಧಿಕಾರಿಗಳಿಗೆ ವಿರುದ್ಧ ಕ್ರಮ ಆಗಬೇಕು. ಎಂದು ಒತ್ತಾಯಿಸಿದರು.

# ಕಾರ್ಯನಿರತ ಪತ್ರಕರ್ತರ ಪ್ರತಿಭಟನೆ

## ಶಿವಾನಂದ ತಗಡೂರು ವಿರುದ್ಧದ ಸುಳ್ಳು ದೂರು ಖಂಡಿಸಿದ ಕೆಯುಡಬ್ಲ್ಯೂಜೆ

ಚಾಮರಾಜನಗರ: ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ವಿರುದ್ಧ ಸುಳ್ಳು ದೂರು ದಾಖಲಿಸಿರುವುದನ್ನು ಖಂಡಿಸಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗ ಜಮಾಯಿಸಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು, ತಾಲೂಕು ಅಧ್ಯಕ್ಷರು ಹಾಗೂ ಪತ್ರಕರ್ತರು ಹೆಚ್ಚು ವರಿ ಜಿಲ್ಲಾಧಿಕಾರಿ ಜವರೇಗೌಡ ಅವರಿಗೆ ಮನವಿ ಸಲ್ಲಿಸಿದರು.



### ಸುಳ್ಳು ದೂರುಗಳ ವಿರುದ್ಧ ಖಂಡನೆ

ಪ್ರತಿಭಟನೆ ನೇತೃತ್ವ ವಹಿಸಿದ್ದ ಸಂಘದ ಜಿಲ್ಲಾಧ್ಯಕ್ಷ ಆರ್.ಎನ್.ಸಿದ್ದಲಿಂಗಸ್ವಾಮಿ ಅವರು ಮಾತನಾಡಿ, ಖ್ಯಾತ ಸಾಹಿತಿ ಡಿ.ವಿ. ಗುಂಡಪ್ಪ ಅವರು ಸ್ಥಾಪಿಸಿದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಕ್ಕೆ ತೊಂಬತ್ತೈದು ವಸಂತಗಳು ತುಂಬಿವೆ. ಎಲ್ಲಾ ಜಿಲ್ಲೆ ಮತ್ತು ತಾಲೂಕು ಘಟಕಗಳನ್ನು ಹೊಂದಿರುವ, ಹತ್ತು ಸಾವಿರ ಸಕ್ರಿಯ ಪತ್ರಕರ್ತರ ಸದಸ್ಯರಿರುವ ದೇಶದ ಬೃಹತ್ ಸಂಘಟನೆಯಾಗಿದೆ. ಚುನಾವಣಾ ಪ್ರಕ್ರಿಯೆ ಮೂಲಕ ಆಯ್ಕೆಯಾಗಿರುವ ನಮ್ಮ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರ ಬಗ್ಗೆ ಇತ್ತೀಚೆಗೆ ಹುಟ್ಟಿಕೊಂಡ ಬಂಗ್ಲೆ ಮಲ್ಲಿಕಾರ್ಜುನ ನೇತೃತ್ವದ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಹೆಸರಿನಲ್ಲಿ ರಾಜ್ಯದ ವಿವಿಧೆಡೆ ಸುಳ್ಳು ದೂರುಗಳನ್ನು ನೀಡಲಾಗುತ್ತಿದೆ. ಇದು ಅತ್ಯಂತ ಖಂಡನೀಯ ಎಂದರು.

### ಸಂಘದ ಪಾರದರ್ಶಕತೆ ಮತ್ತು ಕ್ಷೇಮಾಭಿವೃದ್ಧಿ ಕಾರ್ಯಗಳು

ನಮ್ಮ ಸಂಘವು ಕಾರ್ಮಿಕ ಕಾಯ್ದೆಯಂತೆ ಸಂಘಟನಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದ್ದು, ಕಾಲ ಕಾಲಕ್ಕೆ ಲೆಕ್ಕಪತ್ರ, ವಹಿವಾಟುಗಳು ಪಾರದರ್ಶಕವಾಗಿವೆ. ಆಗಾಗ್ಗೆ ರಾಜ್ಯ ಸಮಿತಿ ಸಭೆ, ಪ್ರತಿ ವರ್ಷ ಸರ್ವ ಸದಸ್ಯರ ಸಾಮಾನ್ಯ ಸಭೆ ತಪ್ಪದೆ ನಡೆಯುತ್ತವೆ. ಶಿವಾನಂದ ತಗಡೂರು ಅವಧಿಯಲ್ಲಿ ಕ್ಷೇಮಾಭಿವೃದ್ಧಿ ನಿಧಿಗೆ 1.1 ಕೋಟಿ ಡೆಪಾಸಿಟ್ ಮಾಡಲಾಗಿದೆ. ಕೋವಿಡ್ಗೆ ಬಲಿಯಾದ ಪತ್ರಕರ್ತರ ಕುಟುಂಬಗಳಿಗೆ ತಲಾ 5 ಲಕ್ಷ ಪರಿಹಾರ ಕೊಡಿಸಿರುವ ತಗಡೂರು ಅವರ ಕಾರ್ಯವನ್ನು ಯಾರೂ ಮರೆಯುವುದಿಲ್ಲ. ಅವರು ನಿತ್ಯವೂ ಪತ್ರಕರ್ತರ ಕ್ಷೇಮಾಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಕೆಯುಡಬ್ಲ್ಯೂಜೆ, ಸರ್ಕಾರದ ಅನೇಕ ಕಾರ್ಯಕ್ರಮಗಳಲ್ಲಿ ಸಹಯೋಗ ಹೊಂದಿದ್ದು, ಸರ್ಕಾರದ ಮಾನ್ಯತೆ ಹೊಂದಿರುವ ಪತ್ರಕರ್ತರ ಏಕೈಕ ಸಂಘಟನೆಯಾಗಿದೆ ಎಂದು ವಿವರಿಸಿದರು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಸಾದ್ ಎಸ್.ಲಕ್ಕೂರು, ಉಪಾಧ್ಯಕ್ಷ ಡಿ.ಎನ್. ನಟರಾಜು, ಕಾರ್ಯದರ್ಶಿಗಳಾದ ಕೆ.ಎಸ್.ಫಾಲಲೋಚನ ಆರಾಧ್ಯ, ಯರಿಯೂರು ನಾಗೇಂದ್ರ, ಅಮಚವಾಡಿ ಆರ್.ರಾಜೇಂದ್ರ, ರಾಜ್ಯ ಸಮಿತಿ ಸದಸ್ಯ ಸಿ. ಮಹೇಂದ್ರ, ನಿರ್ದೇಶಕರಾದ ಪ್ರಕಾಶ್ ಬೆಲ್ಲದ್, ಶ್ರೀನಿವಾಸ ಬಿಳಿಗಿರಿ, ಮಲ್ಲಪ್ಪ, ಎಂ.ಬಸವರಾಜು, ಮಡಹಳ್ಳಿ ಮಹೇಶ್, ಹೊಮ್ಮ ನಂಜುಂಡನಾಯಕ, ಎಂ. ಮರಿಸ್ವಾಮಿ, ಬದನಗುಪ್ಪೆ ಮಲ್ಲಣ್ಣ, ವೈ.ಎಂ.ಭಾನುಪ್ರಕಾಶ್, ಕೊಳ್ಳೇಗಾಲ ತಾಲೂಕು ಅಧ್ಯಕ್ಷ ಚಿಕ್ಕಮಾಳಿಗೆ, ಯಳಂದೂರು ತಾಲೂಕು ಅಧ್ಯಕ್ಷ ವಿ.ನಾಗರಾಜು, ಹನೂರು ತಾಲೂಕು ಅಧ್ಯಕ್ಷ ದೇವರಾಜ ನಾಯ್ಡು, ನಟರಾಜು, ಗಿರೀಶ್, ಪ್ರಭುಸ್ವಾಮಿ, ಪತ್ರಕರ್ತರು ಇದ್ದರು.

### ಕ್ರಿಮಿನಲ್ ಪ್ರಕರಣ ದಾಖಲಿಸಲು ಆಗ್ರಹ

**ನೈಜ ಪತ್ರಕರ್ತರ ಸಂಘಟನೆಯಾಗಿರುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಚುನಾಯಿತ ಅಧ್ಯಕ್ಷರ ಮೇಲೆ ನೀಡಿರುವ ಸುಳ್ಳು ದೂರುಗಳನ್ನು ಮಾನ್ಯ ಮಾಡಬಾರದು. ದುರುದ್ದೇಶದಿಂದ ತೇಜೋವಧೆ ಮಾಡುತ್ತಿರುವ ಬಂಗ್ಲೆ ಮಲ್ಲಿಕಾರ್ಜುನ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ಅವರು ಒತ್ತಾಯಿಸಿದರು.**

### ಕುತಂತ್ರದ ಹಿನ್ನೆಲೆ ಮತ್ತು ಆರೋಪಗಳು

**ಸುಳ್ಳು ದೂರುಗಳ ರೂವಾರಿ ಬಂಗ್ಲೆ ಮಲ್ಲಿಕಾರ್ಜುನ ಎಂಬಾತ ಸರ್ಕಾರಿ ಅಧಿಕಾರಿಗೆ ಬೆದರಿಕೆ ಹಾಕಿದ ಬಗ್ಗೆ ಬಳ್ಳಾರಿಯ ಬ್ರೂಸ್ ಪೇಟೆ ಪೊಲೀಸ್ ಠಾಣೆಯಲ್ಲಿ ನಂ:581/333/2019 ಪ್ರಕರಣ ದಾಖಲಾಗಿದೆ. ಸಿರಗುಪ್ಪದಲ್ಲೂ ಪೊಲೀಸ್ ಪ್ರಕರಣ ದಾಖಲಾದ ಬಳಿಕ ಅವರು ಊರು ತೊರೆದಿರುತ್ತಾರೆ. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದ ಘಟನೆಯೊಂದರಲ್ಲಿ ಸಾರ್ವಜನಿಕವಾಗಿ ಕ್ಷಮೆ ಕೇಳಿ ಬಚಾವ್ ಆಗಿರುವುದು ಹಸಿಹಸಿಯಾಗಿದೆ ಎಂದರು. ಇಂತಹ ಹಿನ್ನೆಲೆಯ ಬಂಗ್ಲೆ ಮಲ್ಲಿಕಾರ್ಜುನ ಅವರು ಪತ್ರಕರ್ತರ ಸಂಘಟನೆ ಸೋಗಿನಲ್ಲಿ, ನಾವು ಸದಸ್ಯತ್ವ ಕೊಡಲು ನಿರಾಕರಿಸಿದವರ ಕೂಟ ಕಟ್ಟಿಕೊಂಡು ಕುತಂತ್ರ ಮಾಡುತ್ತಲೇ ಇದ್ದಾರೆ. ಆದ್ದರಿಂದ ಇವರು ನೀಡುವ ದೂರುಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡುವ ಅಗತ್ಯವಿಲ್ಲ. ರಂಗಭೂಮಿ ನೆಲೆಯಿಂದ ಬೆಳೆದು ಬಂದಿರುವ ಶಿವಾನಂದ ತಗಡೂರು ಅವರಿಗೆ ನಾಟಕ ಅಕಾಡೆಮಿ ಪ್ರಶಸ್ತಿ ಬಂದಿರುವುದನ್ನು ಸಹಿಸಲಾಗದೆ ಅವರ ವಿರುದ್ಧ ಇಲ್ಲಸಲ್ಲದ ಆಪಾದನೆ ಮಾಡಿ ದೂರು ನೀಡುತ್ತಿದ್ದಾರೆ ಎಂದು ದೂರಿದರು.**

## ನಗರದಾದ್ಯಂತ ಸಂಭ್ರಮದ ಶ್ರೀ ಕೃಷ್ಣ ಜನ್ಮಾಷ್ಟಮಿ



ಮೈಸೂರು: ನಗರದಾದ್ಯಂತ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅತ್ಯಂತ ಸಡಗರ, ಸಂಭ್ರಮ ಮತ್ತು ಭಕ್ತಿಯಿಂದ ಆಚರಿಸಲಾಯಿತು.

ಅರಮನೆಯ ಆವರಣದಲ್ಲಿರುವ ಲಕ್ಷ್ಮೀರಮಣಸ್ವಾಮಿ ದೇವಸ್ಥಾನ ಮತ್ತು ವೇಣುಗೋಪಾಲಸ್ವಾಮಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆ, ಅಲಂಕಾರಗಳು ನಡೆದವು. ಪ್ರಮುಖವಾಗಿ ಜಯನಗರದಲ್ಲಿರುವ ಇಸ್ಕಾನ್ ಸಂಸ್ಥೆಯ ವತಿಯಿಂದ ಭವ್ಯ ಆಚರಣೆ ನಡೆಯಿತು. ಶ್ರೀಕೃಷ್ಣ ಮತ್ತು ಬಲರಾಮರಿಗೆ ವಿಶೇಷ ಅಭಿಷೇಕ, 56 ಭೋಗ್ (ಮಹಾಪ್ರಸಾದ) ಸಮರ್ಪಣೆ, ಮಧ್ಯರಾತ್ರಿ ಮಹಾಮಂಗಳಾರತಿ ಮತ್ತು ಭಕ್ತಿ ಸಂಗೀತ ಕಾರ್ಯಕ್ರಮಗಳು ಜರುಗಿದವು. ಪ್ರತಿಯೊಬ್ಬರ ಮನೆಗಳಲ್ಲೂ ಸಣ್ಣ ಮಕ್ಕಳಿಗೆ ಕೃಷ್ಣ, ರಾಧೆಯರ ವೇಷ ಹಾಕಿ ಸಂಭ್ರಮಿಸಿದರು. ಮನೆ ಬಾಗಿಲಿನಿಂದ ದೇವರ ಮನೆಯವರೆಗೆ ಕೃಷ್ಣನ ಪುಟ್ಟ ಪಾದಗಳ ರಂಗೋಲಿ ಬಿಡಿಸಿ, ಬೆಣ್ಣೆ, ಮೊಸರು, ಅವಲಕ್ಕಿ ಪ್ರಸಾದಗಳನ್ನು ನೈವೇದ್ಯ ಮಾಡಿದ್ದರು. ಇದೇ ವೇಳೆ ಶ್ರೀ ಕಷ್ಣ ಪೂರ್ಣ ಮಾಹಿತಿಯುಳ್ಳ ವಸ್ತು ಪ್ರದರ್ಶನ ಎಲ್ಲರ ಗಮನ ಸೆಳೆಯಿತು.



## ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮಂಡ್ಯ:- ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ 2026-27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿ ಜೂನ್ 22 ರಂದು ಪ್ರವೇಶಾತಿ ಪ್ರಾರಂಭವಾಗಿದ್ದು,ಸ್ನಾತಕ/ಸ್ನಾತಕೋತ್ತರ ಕೋರ್ಸ್ಗಳಾದ ಬಿ.ಎ. / ಬಿ. ಕಾಂ, ಬಿಸಿಎ, ಬಿಬಿಎ,ಬಿ.ಎಸ್ಸಿ, ಬಿ.ಎಸ್. ಡಬ್ಲ್ಯು. ಎಂ.ಎ/ಎಂ.ಕಾಂ, ಎಂ.ಬಿ.ಎ, ಎಂ.ಎಸ್ಸಿ., ಎಂ.ಎಸ್. ಡಬ್ಲ್ಯು ಎಂ.ಸಿ.ಎ ಪಿ.ಜಿ ಡಿಪ್ಲೋಮ, ಡಿಪ್ಲೋಮ ಹಾಗೂ ಸರ್ಟಿಫಿಕೇಟ್, ಜ್ಯೋತಿರ್ ವಿಜ್ಞಾನ ಸರ್ಟಿಫಿಕೇಟ್ ಕೋರ್ಸ್-06 ತಿಂಗಳು, ಫಲ ಜ್ಯೋತಿಷ್ಯದಲ್ಲಿ ಡಿಪ್ಲೋಮಾ-01 ವರ್ಷ, ಮೇದಿನಿ ಜ್ಯೋತಿಷ್ಯದಲ್ಲಿ ಡಿಪ್ಲೋಮಾ-01 ವರ್ಷ, ವಾಸ್ತು ಶಾಸ್ತ್ರದಲ್ಲಿ ಡಿಪ್ಲೋಮಾ-01 ವರ್ಷ, ಕೋರ್ಸ್ಗಳಿಗೆ ಈಗಾಗಲೇ ಪ್ರವೇಶಾತಿ ಪ್ರಕ್ರಿಯೆಗಳು ಪ್ರಾರಂಭವಾಗಿದ್ದು ಎಲ್ಲಾ ಕೋರ್ಸ್ಗಳಿಗೂ ಪ್ರವೇಶಾತಿ ಪಡೆಯಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಪ್ರಥಮ ದ್ವಿತೀಯ ಹಾಗೂ ತೃತೀಯ ವರ್ಷದ ಈ ಕೋರ್ಸ್ಗಳ ಪ್ರವೇಶಾತಿ ಪ್ರಾರಂಭವಾಗಿದ್ದು, ಕರಾಮುವಿಯ ಅಧಿಕೃತ ವೆಬ್ಸೈಟ್ ತಿತಿತಿ.ಇಂಣಟಥಿಂಡಿಜ.ಚಿಛಿ.ಟಿ ಮೂಲಕ ಪ್ರವೇಶಾತಿ ಶುಲ್ಕ, ವಿದ್ಯಾರ್ಹತೆ ಹಾಗೂ ವಿವರಣಾ ಪುಸ್ತಕ ಮತ್ತು ಆನ್‌ಲೈನ್‌ನಲ್ಲಿ ಪ್ರವೇಶಾತಿ ಅರ್ಜಿ ತುಂಬಿದ ನಂತರ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದ್ದು ಅರ್ಜಿ ಸಲ್ಲಿಸಲು ಸೆಪ್ಟೆಂಬರ್ 15 ರಂದು ಪ್ರವೇಶಾತಿ ಪಡೆಯಲು ಅಂತಿಮ ದಿನಾಂಕವಾಗಿರುತ್ತದೆ ಎಂದು ಮಂಡ್ಯ ಜಿಲ್ಲೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೆರೆಗಳಿಗೆ ನೀರು ತುಂಬಿಸುವಲ್ಲಿ ಶಾಸಕರ ವೈಫಲ್ಯ

ಗುಂಡ್ಲುಪೇಟೆ: ತಾಲೂಕಿನ ಕೆರೆಗಳಿಗೆ ಕಳೆದ ಮೂರು ವರ್ಷಗಳಿಂದ ನೀರು ತುಂಬಿಸುವಲ್ಲಿ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ವಿಫಲರಾಗಿರುವುದೇ ಗುಂಡ್ಲುಪೇಟೆ ತಾಲೂಕಿನಲ್ಲಿ ತೀವ್ರ ಬರಗಾಲ ಉಂಟಾಗಲು ಪ್ರಮುಖ ಕಾರಣ ಎಂದು ಮಾಜಿ ಶಾಸಕ ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿ.ಎಸ್. ನಿರಂಜನಕುಮಾರ್ ಆರೋಪಿಸಿದರು.



ಪಟ್ಟಣದ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನ ಬಹುತೇಕ ಕೆರೆಗಳು ಸಂಪೂರ್ಣ ಬತ್ತಿಹೋಗಿದ್ದು, ಪಂಪ್‌ಸೆಟ್‌ಗಳ ಬೋರ್‌ವೆಲ್‌ಗಳಲ್ಲೂ ನೀರು ನಿಂತುಹೋಗಿದೆ. ಇದರಿಂದ ರೈತರು ಬೆಳೆ ಬೆಳೆಯಲು ಸಾಧ್ಯವಾಗದೆ ಲಕ್ಷಾಂತರ ರೂಪಾಯಿ ನಷ್ಟ ಅನುಭವಿಸುತ್ತಿದ್ದಾರೆ. ಉದ್ಯೋಗ ಅರಸಿ ರೈತರು ಹಾಗೂ ಗ್ರಾಮೀಣ ಜನರು ಗುಳೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಚಾಮರಾಜನಗರ ತಾಲೂಕಿನ ಮೂರನೇ ಹಂತದ ಕೆರೆಗಳಿಗೆ ಸತತ ಮೂರು ವರ್ಷಗಳಿಂದ ನೀರು ಹರಿದಿದ್ದರೂ, ಗುಂಡ್ಲುಪೇಟೆ ತಾಲೂಕಿನ ಕೆರೆಗಳಿಗೆ ನೀರು ಹರಿಸುವಲ್ಲಿ ಶಾಸಕರು ವಿಫಲರಾಗಿದ್ದಾರೆ. ಕೆರೆಗಳಿಗೆ ನೀರು ಕೇಳುವ ರೈತರನ್ನು ಬಿಜೆಪಿ, ಕಾಂಗ್ರೆಸ್ ಎಂದು ವಿಂಗಡಿಸುವುದು ಸರಿಯಲ್ಲ. ರೈತರ ಸಮಸ್ಯೆಗೆ ಪಕ್ಷಭೇದವಿಲ್ಲದೆ ಸ್ಪಂದಿಸಬೇಕು ಎಂದು ಹೇಳಿದರು.

ಕೆರೆ ನೀರಿನ ವಿಚಾರದ ಜತೆಗೆ ತಾಲೂಕಿನ ಇತರ ಸಮಸ್ಯೆಗಳತ್ತಲೂ ಶಾಸಕರು ಗಮನಹರಿಸಬೇಕು. ತಾಲೂಕಿನಿಂದ ಕೇರಳಕ್ಕೆ ಪ್ರತಿನಿತ್ಯ 300ಕ್ಕೂ ಅಧಿಕ ಟಿಪ್ಪರ್ ಲಾರಿಗಳು ತೆರಳುತ್ತಿವೆ ಎಂಬ ಆರೋಪಗಳಿದ್ದು, ಇವು ಯಾರ ಕುಮ್ಮಕ್ಕಿನಿಂದ ನಡೆಯುತ್ತಿವೆ ಎಂಬುದನ್ನು ಶಾಸಕರು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು. ತಾಲೂಕು ಆಡಳಿತ ಸಂಪೂರ್ಣ ಹದಗೆಟ್ಟಿದ್ದು, ಹಲವು ಇಲಾಖೆ ಗಳಲ್ಲಿನ ಸಾರ್ವಜನಿಕರ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಬರದಿಂದ ಜನರು ತತ್ತರಿಸಿರುವ ಸಂದರ್ಭದಲ್ಲಿ ಪರಿಹಾರ ವಿತರಣೆಗೆ ಅಗತ್ಯ ಕ್ರಮ ಕೈಗೊಂಡಿಲ್ಲ. ಬರ ಪರಿಸ್ಥಿತಿ ಹಾಗೂ ಬೆಳೆ ನಷ್ಟಕ್ಕೆ ದೊರೆಯುವ ಪರಿಹಾರದ ಬಗ್ಗೆಯೂ ಶಾಸಕರಿಗೆ ಸಮರ್ಪಕ ಮಾಹಿತಿ ಇಲ್ಲ ಎಂದು ಟೀಕಿಸಿದರು.

ಕೆರೆಗಳಿಗೆ ನೀರು ಹರಿಸುವ ವಿಚಾರದಲ್ಲಿ ಬಿಜೆಪಿ ರಾಜಕೀಯ ಮಾಡುತ್ತಿದೆ ಎಂಬ ಶಾಸಕರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, “ನಾವು ರಾಜಕೀಯ ಮಾಡುವುದಕ್ಕಾಗಿಯೇ ಇದ್ದೇವೆ. ಆದರೆ ಕ್ಷೇತ್ರದ ಜನರ ಸಮಸ್ಯೆ ಹಾಗೂ ಶಾಸಕರ ವೈಫಲ್ಯಗಳನ್ನು ಎತ್ತಿಹಿಡಿಯುವುದಕ್ಕಾಗಿ ರಾಜಕೀಯ ಮಾಡುತ್ತಿದ್ದೇವೆ” ಎಂದರು. ಬಾಲಿಶ ಹೇಳಿಕೆಗಳನ್ನು ನೀಡುವುದನ್ನು ಬಿಟ್ಟು ಶಾಸಕರು ತಮ್ಮ ಜವಾಬ್ದಾರಿಯನ್ನು ಅರಿತು ಮಾತನಾಡಬೇಕು. ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಕೆರೆಗಳಿಗೆ ನೀರು ತುಂಬಿಸುವುದು ಹಾಗೂ ಬರಪೀಡಿತ ಜನರಿಗೆ ಅಗತ್ಯ ಪರಿಹಾರ ಕಲ್ಪಿಸುವತ್ತ ಗಮನಹರಿಸಬೇಕು ಎಂದು ಸಿ.ಎಸ್. ನಿರಂಜನಕುಮಾರ್ ಆಗ್ರಹಿಸಿದರು.

**ಪ್ರೊ. ಮೈಸೂರು ಕೃಷ್ಣಮೂರ್ತಿ ಅಭಿಮತ**

# ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಯಿಂದ ವ್ಯಕ್ತಿತ್ವ ವಿಕಸನ

ಚಾಮರಾಜನಗರ: ಶಿಕ್ಷಣವು ಕೇವಲ ಪಠ್ಯ, ಪರೀಕ್ಷೆ ಹಾಗೂ ಅಂಕಗಳಿಗೆ ಸೀಮಿತವಾಗದೆ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿಯೂ ವಿದ್ಯಾರ್ಥಿಗಳು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ವ್ಯಕ್ತಿತ್ವದ ಸರ್ವಾಂಗೀಣ ವಿಕಸನಕ್ಕೆ ಅಗತ್ಯ ಎಂದು ಪ್ರೊ. ಮೈಸೂರು ಕೃಷ್ಣಮೂರ್ತಿ ಅಭಿಪ್ರಾಯಪಟ್ಟರು.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಶಿಕ್ಷಣದಲ್ಲಿ ಪಠ್ಯನಿಷ್ಠ ಹಾಗೂ ಪಠ್ಯೇತರ ಎಂಬ ಎರಡು ಪ್ರಮುಖ ಆಯಾಮಗಳಿವೆ. ಸಿಲಬಸ್ ಹಾಗೂ ಪರೀಕ್ಷಾಧಾರಿತ ಅಧ್ಯಯನದ ಜತೆಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎಂದರು.



ಕೇವಲ ಪರೀಕ್ಷೆ ಬರೆದು ಪದವಿ ಪ್ರಮಾಣಪತ್ರ ಪಡೆಯುವುದಷ್ಟೇ ಶಿಕ್ಷಣದ ಉದ್ದೇಶವಲ್ಲ. ಜೀವನವನ್ನು ಸಮಗ್ರವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಸಲು ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳೆರಡೂ ಅಗತ್ಯ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಿಗೆ ಶೈಕ್ಷಣಿಕ ಕ್ಷೇತ್ರದಲ್ಲಿ ಸೂಕ್ತ ಮಹತ್ವ ದೊರೆಯದಿರುವುದು, ಅವುಗಳು ವಾಣಿಜ್ಯೀಕರಣಗೊಳ್ಳುತ್ತಿರುವುದು ಕಳವಳಕಾರಿ ಬೆಳವಣಿಗೆ. ಇಡೀ ಬದುಕನ್ನು ವಾಣಿಜ್ಯೀಕರಣಗೊಳಿಸುವುದರಿಂದ ಸಮಾಜದಲ್ಲಿ ದ್ರೋಹ ಮತ್ತು ಅಪನಂಬಿಕೆಯ ವಾತಾವರಣ ನಿರ್ಮಾಣವಾಗಿ, ಮಾನವ ಸಮಾಜ ಹಾಗೂ ಪ್ರಕೃತಿಯ ಅಸ್ತಿತ್ವಕ್ಕೂ ಧಕ್ಕೆಯಾಗಬಹುದು ಎಂದು ಎಚ್ಚರಿಸಿದರು.

ಮಹಾಭಾರತದ ವೀರ ಅಭಿಮನ್ಯುವಿನ ಸಾಹಸ ಮತ್ತು ಛಲವನ್ನು ಉದಾಹರಿಸಿದ ಅವರು, ಯುವಜನತೆ ಸವಾಲುಗಳನ್ನು ಧೈರ್ಯದಿಂದ ಎದುರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಠ್ಯದ ಜತೆಗೆ ಸಾಂಸ್ಕೃತಿಕ ಹಾಗೂ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ತಮ್ಮ ಬದುಕು, ಸಮಾಜ ಮತ್ತು ದೇಶದ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಎಂ.ಎನ್. ಜಯಶೀಲ, ಮೈಸೂರಿನ ಅಂತಾರಾಷ್ಟ್ರೀಯ ಕೋಕೋ ಆಟಗಾರ್ತಿ ಮೋನಿಕಾ, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ದೇವರಾಜ್ ಮೂರ್ತಿ, ಸಾಂಸ್ಕೃತಿಕ ಸಮಿತಿ ಸಂಚಾಲಕಿ ಜಮುನಾ, ದೈಹಿಕ ಶಿಕ್ಷಣ ನಿರ್ದೇಶಕ ಉಮೇಶ್ ಎಸ್. ಹಾಗೂ ಪ್ರಾಂಶುಪಾಲ ಡಾ. ಎಂ. ಪ್ರಭು ಪ್ರಾಧ್ಯಾಪಕಿ ಡಾಕ್ಟರ್ ಸುಷ್ಮಾ, ಪ್ರಾಧ್ಯಾಪಕಿ ಅರುಣ, ಪ್ರಾಧ್ಯಾಪಕಿ ಸೌಮ್ಯ ಉಪಸ್ಥಿತರಿದ್ದರು.

## ಸೆ.05 ರಂದು ಶಿಕ್ಷಕರ ದಿನಾಚರಣೆ

**ಮಡಿಕೇರಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ ಇವರ ಸಂಯುಕ್ತಾಶ್ರಯದಲ್ಲಿ ಸೆಪ್ಟೆಂಬರ್, 5 ರಂದು ಬೆಳಗ್ಗೆ 10 ಗಂಟೆಗೆ ನಗರದ ಸಂತ ಜೋಸೆಫರ ಪ್ರೌಢಶಾಲೆಯಲ್ಲಿ" ಶಿಕ್ಷಕರ ದಿನಾಚರಣೆ ಮತ್ತು ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರಸ್ವಾಮಿ, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ.ಮಂತರ್ ಗೌಡ, ಮುಖ್ಯಮಂತ್ರಿ ಅವರ ರಾಜಕೀಯ ಕಾರ್ಯದರ್ಶಿ ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ರಾಜ್ಯಸಭಾ ಸದಸ್ಯರಾದ ಅಜಯ್ ಮಾಕನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರಾದ ಎಸ್.ಆರ್.ಮೆಹರೋಜ್ ಖಾನ್, ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಎಂ.ಪಿ.ಸುಜಾ ಕುಶಾಲಪ್ಪ, ಎಸ್.ಎಲ್.ಭೋಜೇಗೌಡ, ಡಾ.ಧನಂಜಯ ಸರ್ಜಿ, ಕರ್ನಾಟಕ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷರಾದ ಸಿ.ಎಸ್.ಅರುಣ್ ಮಾಚಯ್ಯ, ಮಡಿಕೇರಿ ನಗರಸಭೆ ಅಧ್ಯಕ್ಷರಾದ ಕಲಾವತಿ ಪಿ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾ ಅಧ್ಯಕ್ಷರಾದ ಟಿ.ಎಂ.ಧರ್ಮಜ ಉತ್ತಪ್ಪ, ಕೊಡಗು ಜಿಲ್ಲಾ ಪಂಚಾಯತ್ ಆಡಳಿತಾಧಿಕಾರಿ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಸ್.ವಿ.ಪ್ರಸಾದ್, ಶಕ್ತಿ ದಿನಪತ್ರಿಕೆಯ ಸಲಹಾ ಸಂಪಾದಕರಾದ ಬಿ.ಜಿ.ಅನಂತಶಯನ, ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ಇತರರು ಪಾಲ್ಗೊಳ್ಳಲಿದ್ದಾರೆ.

## ಸೆ.05 ರಂದು 20ನೇ ಕೊಡವ ಪುಸ್ತಕ ಪತ್ತಾಯ

**ಮಡಿಕೇರಿ:** ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ವತಿಯಿಂದ 20ನೇ ?ಕೊಡವ ಪುಸ್ತಕ ಪತ್ತಾಯ?ವನ್ನು ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದಲ್ಲಿ ಸೆಪ್ಟೆಂಬರ್ 5 ರಂದು ಬೆಳಗ್ಗೆ 11 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ.

ಅಕಾಡೆಮಿ ಅಧ್ಯಕ್ಷರಾದ ಅಜ್ಜಿನಿಕಂಡ ಸಿ.ಮಹೇಶ್ ನಾಚಯ್ಯ ಅವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದ ಪ್ರಧಾನ ಅರ್ಚಕರಾಗಿರುವ ಕುಶಭಟ್‌ರವರು ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಲಿರುವರು. ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷರಾಗಿರುವ ಬಾಚಮಂಡ ರಾಜ ಪೂವಣ್ಣನವರು ಪುಸ್ತಕ ಪತ್ತಾಯವನ್ನು ತೆರೆಯಲಿದ್ದಾರೆ. ಈ ಕಾರ್ಯಕ್ರಮಕ್ಕೆ ಅಕಾಡೆಮಿಯ ಸದಸ್ಯರು, ವ್ಯವಸ್ಥಾಪನಾ ಸಮಿತಿ ಸದಸ್ಯರು ಹಾಗೂ ಭಕ್ತವೃಂದದವರು ಪಾಲ್ಗೊಳ್ಳಲಿರುವರು ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಅವರು ತಿಳಿಸಿದ್ದಾರೆ.

## ಸೆ.06 ರಂದು ಸಚಿವರ ಕೊಡಗು ಜಿಲ್ಲಾ ಪ್ರವಾಸ

**ಮಡಿಕೇರಿ:** ಇಂಧನ ಹಾಗೂ ಪ್ರವಾಸೋದ್ಯಮ ಸಚಿವರಾದ ಕೆ.ಜೆ. ಜಾರ್ಜ್ ಅವರು ಸೆಪ್ಟೆಂಬರ್, 06 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಮಾನ್ಯ ಸಚಿವರು ಸೆಪ್ಟೆಂಬರ್, 06 ರಂದು ಬೆಳಗ್ಗೆ 6 ಗಂಟೆಗೆ ಗೋಣಿಕೊಪ್ಪದಲ್ಲಿ ನಡೆಯುವ ಕೊಡಗು ಮಾನ್ಸೂನ್ ಹಾಫ್ ಮ್ಯಾರಥಾನ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಸತೀಶ್ ಕುಮಾರ ಡಿ.ಎಂ. ಅವರು ತಿಳಿಸಿದ್ದಾರೆ.

## ಸೆ.08 ರಂದು ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ

**ಮಡಿಕೇರಿ:** ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(ಲೋಕ ಶಿಕ್ಷಣ), ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಅಂತರರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಮತ್ತು ಸಾಕ್ಷರತಾ ಪಾಕ್ಷಿಕ ಕಾರ್ಯಕ್ರಮವು ಸೆಪ್ಟೆಂಬರ್, 08 ರಂದು ಬೆಳಗ್ಗೆ 10 ಗಂಟೆಗೆ ಕುಶಾಲನಗರ ಪಿಎಂಶ್ರೀ ಶಾಲೆಯಲ್ಲಿ ನಡೆಯಲಿದೆ.

ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್, ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ, ಜಿ.ಪಂ. ಉಪಕಾರ್ಯದರ್ಶಿ ಅಬ್ದುಲ್ ನಬಿ, ಸಹಾಯಕ ಯೋಜನಾಧಿಕಾರಿ ಜೀವನ್ ಕುಮಾರ್, ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಉಪ ನಿರ್ದೇಶಕರು(ಆಡಳಿತ) ಆರ್.ಪಿ.,ಮಹೇಶ್, ಕೊಡಿಗೆ ಡಯಟ್ ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರಾದ ರಾಮಚಂದ್ರರಾಜೇ ಅರಸ್ ಇತರರು ಪಾಲ್ಗೊಳ್ಳಲಿದ್ದಾರೆ.

## ಕೊಡಗು ಜಿಲ್ಲೆಯ ಮಳೆ ವಿವರ(ಮಿಲಿ ಮೀಟರ್‌ಗಳಲ್ಲಿ)

**ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಶುಕ್ರವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 1.92 ಮಿ.ಮೀ. ಮಳೆಯಾಗಿದೆ. ಕಳೆದ ವ?ರ್ ಇದೇ ದಿನ 24.70 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 1423.39 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 2656.81 ಮಿ.ಮೀ ಮಳೆಯಾಗಿತ್ತು.

ಮಡಿಕೇರಿ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 1.90 ಮಿ.ಮೀ. ಕಳೆದ ವರ್ಷ ಇದೇ ದಿನ 38.95 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 2348.62 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 4006.73 ಮಿ.ಮೀ. ಮಳೆಯಾಗಿತ್ತು.

ವಿರಾಜಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 1.05 ಮಿ.ಮೀ. ಮಳೆಯಾಗಿದೆ. ಕಳೆದ ವ?ರ್ ಇದೇ ದಿನ 18.75 ಮಿ.ಮೀ, ಜನವರಿಯಿಂದ ಇಲ್ಲಿಯವರೆಗಿನ ಮಳೆ 1259.42 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2384.80 ಮಿ.ಮೀ. ಮಳೆಯಾಗಿತ್ತು.

ಪೊನ್ನಂಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 3.52 ಮಿ.ಮೀ. ಮಳೆಯಾಗಿದೆ. ಕಳೆದ ವ?ರ್ ಇದೇ ದಿನ 26.10 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1291.01 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 2454.09 ಮಿ.ಮೀ. ಮಳೆಯಾಗಿತ್ತು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 1.75 ಮಿ.ಮೀ. ಮಳೆಯಾಗಿದೆ. ಕಳೆದ ವ?ರ್ ಇದೇ ದಿನ 30.90 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 1576.90 ಮಿ.ಮೀ. ಕಳೆದ ವ?ರ್ ಇದೇ ಅವಧಿಯಲ್ಲಿ 3056.72 ಮಿ.ಮೀ. ಮಳೆಯಾಗಿತ್ತು.

ಕುಶಾಲನಗರ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 1.40 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 8.80 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 640.79 ಮಿ.ಮೀ. ಕಳೆದ ವ?ರ್ ಇದೇ ಅವಧಿಯಲ್ಲಿ 1381.69 ಮಿ.ಮೀ. ಮಳೆಯಾಗಿತ್ತು.

ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರ:- ಮಡಿಕೇರಿ 3.60, ನಾಪೋಕ್ಲು 1.30, ಸಂಪಾಜೆ 1.70, ಭಾಗಮಂಡಲ 1, ವಿರಾಜಪೇಟೆ 0.70, ಅಮ್ಮತ್ತಿ 1.40, ಹುದಿಕೇರಿ 5.70, ಶ್ರೀಮಂಗಲ 1.70, ಪೊನ್ನಂಪೇಟೆ 2.20, ಬಾಳೆಲೆ 4.50, ಸೋಮವಾರಪೇಟೆ 0.40, ಶನಿವಾರಸಂತೆ 0.10, ಶಾಂತಳ್ಳಿ 5.40, ಕೊಡ್ಲಿಪೇಟೆ 1.10, ಕುಶಾಲನಗರ

**ಹಾರಂಗಿ ಜಲಾಶಯದ ನೀರಿನ ಮಟ್ಟ (04-09-2026) ವರದಿ**

ಹಾರಂಗಿ ಜಲಾಶಯದ ಗರಿಷ್ಟ ಮಟ್ಟ 2,859 ಅಡಿಗಳು, ಇಂದಿನ ನೀರಿನ ಮಟ್ಟ 2858.43 ಅಡಿಗಳು. ಕಳೆದ ವರ್ಷ ಇದೇ ದಿನ 2858.47 ಅಡಿಗಳು. ಇಂದಿನ ನೀರಿನ ಒಳಹರಿವು 1303 ಕ್ಯುಸೆಕ್, ಕಳೆದ ವರ್ಷ ಇದೇ ದಿನ 5672 ಕ್ಯುಸೆಕ್., ಇಂದಿನ ನೀರಿನ ಹೊರ ಹರಿವು ನದಿಗೆ 900 ಕ್ಯುಸೆಕ್. ನಾಲೆಗೆ 800 ಕ್ಯುಸೆಕ್, ಕಳೆದ ವರ್ಷ ಇದೇ ದಿನ ನೀರಿನ ಹೊರ ಹರಿವು ನದಿಗೆ 5500 ಕ್ಯುಸೆಕ್. ನಾಲೆಗೆ 500 ಕ್ಯುಸೆಕ್.

# ರಸ್ತೆ ಅಪಘಾತ ತಡೆಗೆ ಅಗತ್ಯ ಕ್ರಮ ವಹಿಸಿ: ಡಿಸಿ ಡಾ. ಕುಮಾರ್




**ಮಂಡ್ಯ:** ಜಿಲ್ಲೆಯಲ್ಲಿ ರಸ್ತೆ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸೇವ್ ಲೈಫ್ ಫೌಂಡೇಶನ್ ಸಂಸ್ಥೆಯ ಸಮನ್ವಯದೊಂದಿಗೆ ಅಪಘಾತಗಳನ್ನು ನಿಯಂತ್ರಿಸಿ, ರಸ್ತೆ ಅಪಘಾತಗಳಿಂದ ಸಂಭವಿಸುವ ಮರಣ ಪ್ರಮಾಣವನ್ನು ಶೂನ್ಯಕ್ಕೆ ತರುವ ನಿಟ್ಟಿನಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಶುಕ್ರವಾರ ನಡೆದ ಜಿಲ್ಲಾಮಟ್ಟದ ರಸ್ತೆ ಸುರಕ್ಷತಾ ಸಭೆಯಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ನಾಲ್ಕು ರಾಷ್ಟ್ರೀಯ ಹೆದ್ದಾರಿಗಳು ಹಾದುಹೋಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಸಂಗತಿಯಾಗಿದೆ. ಅಪಘಾತಗಳಿಗೆ ಪ್ರಮುಖ ಕಾರಣಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ, ಪರಿಣಾಮಕಾರಿ ಪರಿಹಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ಸಾರಿಗೆ, ಪೊಲೀಸ್, ಲೋಕೋಪಯೋಗಿ, ಆರೋಗ್ಯ ಸೇರಿದಂತೆ ಸಂಬಂಧಿಸಿದ ಎಲ್ಲ ಇಲಾಖೆಗಳು ಸೇವ್ ಲೈಫ್ ಫೌಂಡೇಶನ್ ಸಂಸ್ಥೆಯೊಂದಿಗೆ ಸಮನ್ವಯ ಸಾಧಿಸಿ ರಸ್ತೆ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅಪಘಾತಗಳು ಹೆಚ್ಚಾಗಿ ಸಂಭವಿಸುವ ಸ್ಥಳಗಳನ್ನು ಗುರುತಿಸಿ ಬ್ಲ್ಯಾಕ್ ಸ್ಪಾಟ್‌ಗಳ ಸಮಗ್ರ ಪರಿಶೀಲನೆ ನಡೆಸಿ, ಅಗತ್ಯವಿರುವ ಕಡೆ ರಸ್ತೆ ಸೂಚನಾ ಫಲಕ, ಬೆಳಕಿನ ವ್ಯವಸ್ಥೆ, ವೇಗ ನಿಯಂತ್ರಣ ಸೇರಿದಂತೆ ಸುರಕ್ಷತಾ ಕ್ರಮಗಳನ್ನು ಅಳವಡಿಸಬೇಕು ಎಂದು ಸೂಚಿಸಿದರು.

ರಾತ್ರಿ ಸಮಯದಲ್ಲಿ ಹೆಚ್ಚಿನ ಅಪಘಾತಗಳು ಸಂಭವಿಸುತ್ತಿರುವುದರಿಂದ, ಈ ಅವಧಿಯಲ್ಲಿ ಅಪಘಾತಗಳಿಗೆ ಕಾರಣವಾಗುತ್ತಿರುವ ಅಂಶಗಳನ್ನು ಗುರುತಿಸಿ ಸೂಕ್ತ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ಅಪಘಾತ ಸಂಭವಿಸಿದ ಸಂದರ್ಭದಲ್ಲಿ ಗಾಯಾಳುಗಳಿಗೆ ತ್ವರಿತವಾಗಿ ಹಾಗೂ ಸಕಾಲದಲ್ಲಿ ಚಿಕಿತ್ಸೆ ದೊರೆಯುವಂತೆ ಅಗತ್ಯ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು.

ಅಪಘಾತ ತಡೆಗೆ ಮುನ್ನೆಚ್ಚರಿಕಾ ಕ್ರಮಗಳ ಜೊತೆಗೆ ಸಾರ್ವಜನಿಕರು ಹಾಗೂ ವಾಹನ ಚಾಲಕರಲ್ಲಿ ಸಂಚಾರ ನಿಯಮಗಳ ಪಾಲನೆ ಕುರಿತು ನಿರಂತರ ಜಾಗೃತಿ ಮೂಡಿಸಬೇಕು. ಅಪಘಾತಗಳ ಸಂಖ್ಯೆ ಮತ್ತು ಮರಣ ಪ್ರಮಾಣವನ್ನು ಕಡಿಮೆ ಮಾಡುವುದರೊಂದಿಗೆ, ರಸ್ತೆ ಅಪಘಾತಗಳಿಂದ ಯಾವುದೇ ಸಾವು ಸಂಭವಿಸದಂತೆ ?ಶೂನ್ಯ ಮರಣ?ದಗುರಿಯೊಂದಿಗೆಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಜಿಲ್ಲಾ ಪ್ರಾದೇಶಿಕ ಸಾರಿಕೆ ಅಧಿಕಾರಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದು, ನಾಳೆ 'ಸಂತ್ಯಾಗ ನಿಂತಾನ ಕಬೀರ' ನಾಟಕ ಪ್ರದರ್ಶನ




**ಮೈಸೂರು:** ಜಿಪಿಐಆರ್ ತಂಡದ ವತಿಯಿಂದ ಸೆಪ್ಟೆಂಬರ್ 5 ಹಾಗೂ 6ರಂದು ಸಂಜೆ 6.30 ಗಂಟೆಗೆ ಕಲಾಮಂದಿರ ಪಕ್ಕದ ಕಿರು ರಂಗಮಂದಿರದಲ್ಲಿ 'ಸಂತ್ಯಾಗ ನಿಂತಾನ ಕಬೀರ' ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ಭೀಷ್ಮ ಸಹಾನಿ ಅವರ ಮೂಲ ಹಿಂದಿ ನಾಟಕವನ್ನು ಗೋಪಾಲ ವಾಜಪೇಯಿ ಕನ್ನಡಕ್ಕೆ ತಂದಿದ್ದಾರೆ. ಎಂ.ಪಿ.ಹರಿದತ್ತ ನಿರ್ದೇಶನವಿದೆ.

## ಪ್ರಜಾಸೇವಾ ಆಂದೋಲನಾ ಸಭೆ

**ಮಡಿಕೇರಿ;** ತಾಲ್ಲೂಕು ಮಟ್ಟದ ಪ್ರಜಾಸೇವಾ ಆಂದೋಲನಾ ಸಭೆಯು ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್, 05 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ನಡೆಯಲಿದೆ.

ಸಾರ್ವಜನಿಕರು ಪ್ರಜಾಸೇವಾ ಅಭಿಯಾನದ ಪ್ರಯೋಜನವನ್ನು ಪಡೆಯುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಸಹನಾ ಎಸ್.ಹಾದಿಮನಿ ಅವರು ತಿಳಿಸಿದ್ದಾರೆ. ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ, ಅವುಗಳಿಗೆ ಸಕಾಲದಲ್ಲಿ ಸೂಕ್ತ ಪರಿಹಾರ ನೀಡುವುದು ಸರ್ಕಾರದ ಆದ್ಯತೆ ಆಗಿದೆ. ಅದರಂತೆ, ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಹಾಗೂ ಶಾಸಕರ ಉಪಸ್ಥಿತಿಯಲ್ಲಿ ಪ್ರಜಾಸೇವೆ ಆಂದೋಲನ ಸಭೆ ನಡೆಯಲಿದೆ.

## ಯುವ ಮತದಾರರ ನೋಂದಣಿಗೆ ವಿಶೇಷ ಆದ್ಯತೆ: ಸಿಇಓ ನಂದಿನಿ

- ಸೆ.19 ಮತ್ತು 20ರಂದು ತೀವ್ರ ಜಾಗೃತಿ ಅಭಿಯಾನ
- ಮಂಡ್ಯ ಜಿಲ್ಲೆಯ ಯುವಜನರಿಂದ ಮತದಾರರ ಜಾಗೃತಿ ಸಂಗೀತ ಸ್ಪರ್ಧೆ



**ಮಂಡ್ಯ:** ಜಿಲ್ಲೆಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲ ಯುವಜನರನ್ನು ಮತದಾರರ ಪಟ್ಟಿಗೆ ಸೇರ್ಪಡೆಗೊಳಿಸಲು ವಿಶೇಷ ಆದ್ಯತೆ ನೀಡಿ, ಮತದಾನದ ಜವಾಬ್ದಾರಿ ಹಾಗೂ ಖಏಖ ಪ್ರಕ್ರಿಯೆ ಕುರಿತು ಪರಿಣಾಮಕಾರಿ ಅರಿವು ಮೂಡಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಂದಿನಿ ಕೆ.ಆರ್. ರವರು ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯ ಮಟ್ಟದಲ್ಲಿ ನೀಡಿರುವ ನಿರ್ದೇಶನಗಳ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಚುರುಕುಗೊಳಿಸುವುದರ ಜೊತೆಗೆ, ಹೊಸದಾಗಿ ಮತದಾರರ ಪಟ್ಟಿಗೆ ಸೇರ್ಪಡೆಯಾಗಬೇಕಿರುವ ಯುವಜನರನ್ನು ಗುರುತಿಸಿ ನೋಂದಣಿ ಪ್ರಕ್ರಿಯೆಯನ್ನು ಪರಿಣಾಮಕಾರಿಯಾಗಿ ಪೂರ್ಣಗೊಳಿಸಬೇಕು. 18 ವರ್ಷ ಮೇಲ್ಪಟ್ಟ ಯಾವುದೇ ಅರ್ಹ ಯುವ ಮತದಾರರು ನೋಂದಣಿಯಿಂದ ಹೊರಗುಳಿಯದಂತೆ ಸಂಬಂಧಿಸಿದ ಅಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು.

**ಸೆ.19, 20ರಂದು ತೀವ್ರ ಮತದಾರರ ಜಾಗೃತಿ ಅಭಿಯಾನ :** ಮತದಾನದ ಜವಾಬ್ದಾರಿ, ಖಏಖ ಪ್ರಕ್ರಿಯೆ, ಮತದಾರರ ಪಟ್ಟಿಗೆ ಹೊಸದಾಗಿ ಸೇರ್ಪಡೆಗೊಳ್ಳುವ ವಿಧಾನ ಹಾಗೂ ಯುವ ಮತದಾರರ ಮಹತ್ವದ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಸೆಪ್ಟೆಂಬರ್ 19 ಮತ್ತು 20ರಂದು ಜಿಲ್ಲೆಯಾದ್ಯಂತ ತೀವ್ರ ಮತದಾರರ ಜಾಗೃತಿ ಅಭಿಯಾನ ಹಮ್ಮಿಕೊಳ್ಳಬೇಕು ಎಂದು ಸಿಇಒ ಸೂಚಿಸಿದರು. ಅಭಿಯಾನದ ಸಂದರ್ಭದಲ್ಲಿ ಶಾಲಾ-ಕಾಲೇಜುಗಳು, ಯುವ ಸಂಘಟನೆಗಳು, Electoral Literacy Clubs (ELCs) ಸೇರಿದಂತೆ ವಿವಿಧ ವೇದಿಕೆಗಳನ್ನು ಬಳಸಿಕೊಂಡು ಯುವಜನರನ್ನು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಸಿಕೊಳ್ಳಬೇಕು. ಖಗಿಇಇಕ ಚಟುವಟಿಕೆಗಳಡಿ ಮತದಾರರ ಜಾಗೃತಿ ಕಾರ್ಯಕ್ರಮಗಳಿಗೆ ಸೂಕ್ತ ಕ್ರಿಯಾ ಯೋಜನೆ ರೂಪಿಸಿ ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿದರು.

ಮತದಾರರ ಜಾಗೃತಿ ಸಂದೇಶಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ತಲುಪಿಸುವ ನಿಟ್ಟಿನಲ್ಲಿ ಐಇಆ ಡಿಸ್ಪ್ಲೇ, ಜಿಂಗಲ್ಸ್, ಸ್ಟಿಕ್ಕರ್‌ಗಳು ಹಾಗೂ ಸಾಮಾಜಿಕ ಮಾಧ್ಯಮ ಸೇರಿದಂತೆ ವಿವಿಧ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಮತದಾರರ ನೋಂದಣಿ ಮತ್ತು ಚುನಾವಣಾ ಸಂಬಂಧಿತ ಮಾಹಿತಿಗಾಗಿ ಹೆಲ್ಪ್‌ಡೆಸ್ಕ್ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸಿಕೊಳ್ಳುವಂತೆಯೂ ಸೂಚಿಸಿದರು.

**ಯುವಜನರಿಂದ ಮತದಾರರ ಜಾಗೃತಿ ಸಂಗೀತ ಸ್ಪರ್ಧೆ:** ಯುವಜನರನ್ನು ಮತದಾರರ ಜಾಗೃತಿ ಕಾರ್ಯಕ್ರಮಗಳಲ್ಲಿ ಸೃಜನಾತ್ಮಕವಾಗಿ ತೊಡಗಿಸಿಕೊಳ್ಳುವ ಉದ್ದೇಶದಿಂದ ಮಂಡ್ಯ ಜಿಲ್ಲೆಯ ಯುವಜನರಿಗೆ ಮತದಾರರ ಜಾಗೃತಿ ಸಂಗೀತ ಸ್ಪರ್ಧೆ ಆಯೋಜಿಸಲಾಗುತ್ತಿದೆ ಎಂದು ಸಿಇಒ ತಿಳಿಸಿದರು.

## ಬಿಲ್ ಕಲೆಕ್ಟರ್ - ಡಿಇಒ ಹುದ್ದೆಗಳ ಪ್ರಸ್ತಾವನೆಗಳ ದಾಖಲೆ ಪರಿಶೀಲನೆ ತ್ವರಿತಗೊಳಿಸಲು ಸಿಇಒ ಸೂಚನೆ



**ಮಂಡ್ಯ:** ಬಿಲ್ ಕಲೆಕ್ಟರ್ ಹಾಗೂ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್‌ಗಳ ಅನುಮೋದನೆಗೆ ಸಂಬಂಧಿಸಿದಂತೆ ಸ್ವೀಕೃತವಾಗಿರುವ ಪ್ರಸ್ತಾವನೆಗಳ ದಾಖಲಾತಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಅರ್ಹ ಪ್ರಕರಣಗಳನ್ನು ತ್ವರಿತವಾಗಿ ಅಂತಿಮಗೊಳಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ನಂದಿನಿ ಕೆ.ಆರ್. ರವರು ಅಧಿಕಾರಿಗಳಿಗೆ ಸೂಚಿಸಿದರು.

ಸರ್ಕಾರದ ಆದೇಶ ಹಾಗೂ ನಿರ್ದೇಶನಗಳನ್ವಯ ಜಿಲ್ಲಾ ಪಂಚಾಯತ್‌ಗೆ ಸ್ವೀಕೃತವಾಗಿರುವ 23 ಪ್ರಸ್ತಾವನೆಗಳ ದಾಖಲಾತಿ ಪರಿಶೀಲನೆ ಹಿನ್ನೆಲೆಯಲ್ಲಿ ಕಾವೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ತಾಲ್ಲೂಕು ಮಟ್ಟದಲ್ಲಿ ಸಂಬಂಧಿಸಿದ ಪ್ರಸ್ತಾವನೆಗಳನ್ನು ಪರಿಶೀಲಿಸಿ, ಅಗತ್ಯ ದಾಖಲೆಗಳೊಂದಿಗೆ ಸ್ಪಷ್ಟ ಅಭಿಪ್ರಾಯವನ್ನು ನೀಡಬೇಕು. ಕೇವಲ ದಾಖಲೆಗಳನ್ನು ಸಲ್ಲಿಸುವ ಬದಲು, ತಾಲ್ಲೂಕು ಮಟ್ಟದ ಸಮಿತಿಯಲ್ಲಿ ಪ್ರಕರಣವನ್ನು ಚರ್ಚಿಸಿ, ಸಭಾ ನಡಾವಳಿಯೊಂದಿಗೆ ಜಿಲ್ಲಾ ಮಟ್ಟಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸೂಚಿಸಿದರು.

ಅಪೂರ್ಣ ದಾಖಲೆಗಳಿರುವ ಪ್ರಕರಣಗಳಿಗೆ ಅಗತ್ಯ ಮೂಲ ದಾಖಲೆಗಳನ್ನು ಸಲ್ಲಿಸಲು ಮತ್ತೊಂದು ಅವಕಾಶ ನೀಡಲಾಗಿದ್ದು, ಸೆಪ್ಟೆಂಬರ್ 16ರೊಳಗೆ ಜಿಲ್ಲಾ ಪಂಚಾಯತ್‌ಗೆ ಸಲ್ಲಿಸುವಂತೆ ತಿಳಿಸಿದರು. ಈ ಅವಧಿಯೊಳಗೆ ಎಲ್ಲಾ ಪ್ರಕರಣಗಳ ಅಂತಿಮ ಪರಿಶೀಲನೆ ಹಾಗೂ ಪ್ರಸ್ತಾವನೆಗಳ ಸಲ್ಲಿಕೆ ಪೂರ್ಣಗೊಳ್ಳಬೇಕು ಎಂದು ನಿರ್ದೇಶಿಸಿದರು.

ಜೇಷ್ಠತಾ ಪಟ್ಟಿ ಅಂತಿಮಗೊಳಿಸಿ

ಬಿಲ್ ಕಲೆಕ್ಟರ್ ಹಾಗೂ ಡಿಇಒಗಳಿಗೆ ಸಂಬಂಧಿಸಿದ ಜೇಷ್ಠತಾ ಪಟ್ಟಿಯನ್ನು ಎಲ್ಲಾ ಗ್ರಾಮ ಪಂಚಾಯಿತಿಗಳು ಹಾಗೂ ತಾಲ್ಲೂಕು ಪಂಚಾಯಿತಿಗಳಲ್ಲಿ ಪ್ರಕಟಿಸಿ, ಆಕ್ಷೇಪಣೆಗಳಿಗೆ ಅವಕಾಶ ನೀಡಬೇಕು. ಆಕ್ಷೇಪಣೆಗಳು ಬಂದಲ್ಲಿ ನಿಯಮಾನುಸಾರ ವಿಚಾರಣೆ ನಡೆಸಿ, ಕೈಗೊಂಡ ಕ್ರಮ ಹಾಗೂ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಬೇಕು. ಯಾವುದೇ ಆಕ್ಷೇಪಣೆಗಳು ಬಂದಿಲ್ಲದಿದ್ದರೂ, ಪ್ರಕಟಣೆ ಹಾಗೂ ನಿಗದಿತ ಕಾಲಾವಕಾಶ ನೀಡಿರುವ ಕುರಿತು ಲಿಖಿತ ವರದಿ ಸಲ್ಲಿಸುವಂತೆ ಸೂಚಿಸಿದರು.

ಗ್ರಂಥ ಪಾಲಕರ ನೇಮಕಾತಿ ರೋಸ್ಟರ್ ಪ್ರಕಟಣೆ ಆಕ್ಷೇಪಣೆ ಸಲ್ಲಿಸಲು ಕಾಲವಕಾಶ

ಗ್ರಂಥಪಾಲಕರ ರೋಸ್ಟರ್‌ಗೆ ಸಂಬಂಧಿಸಿದ ಆಕ್ಷೇಪಣೆಗಳನ್ನೂ ಪರಿಶೀಲಿಸಿ, ರೋಸ್ಟರ್ ಬಿಂದು ಹಾಗೂ ಸಂಬಂಧಿತ ನಿಯಮಾವಳಿಗಳನ್ವಯ ಕೈಗೊಂಡ ಕ್ರಮದ ಕುರಿತು ಸ್ಪಷ್ಟ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಸಾರ್ವಜನಿಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಿ:** ಸಾರ್ವಜನಿಕರಿಂದ ವಾಟ್ಸ್‌ಆ?ಯಪ್ ಹಾಗೂ ಇತರೆ ಮಾಧ್ಯಮಗಳ ಮೂಲಕ ಸ್ವೀಕರಿಸಲಾಗುವ ದೂರುಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಬೇಕು ಎಂದು ಸಿಇಒ ಸೂಚಿಸಿದರು.

ಜಿಲ್ಲಾ ಪಂಚಾಯತ್ ಹಂತದಲ್ಲಿ ಸ್ವೀಕೃತವಾಗುವ ದುರುಗಳನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ವಾಟ್ಸಪ್ಪ್ ಮೂಲಕ ಕಳುಹಿಸಲಾಗುತ್ತಿದ್ದು, ಸದರಿ ದೂರುಗಳ ಬಗ್ಗೆ ನಿಯಮನುಸಾರ ಕ್ರಮವಹಿಸಿ ವರದಿ ಸಲ್ಲಿಸಲು ಸೂಚಿಸಿದರು. ಸ್ಥಳೀಯವಾಗಿ ಪರಿಹರಿಸಬಹುದಾದ ಸಮಸ್ಯೆಗಳ ಕುರಿತು ಸಂಬಂಧಿಸಿದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಿ, ಕೈಗೊಂಡ ಕ್ರಮ ಹಾಗೂ ಸಮಸ್ಯೆಯ ಪ್ರಸ್ತುತ ಸ್ಥಿತಿಗತಿಯ ಕುರಿತು ತಕ್ಷಣ ಮಾಹಿತಿ ನೀಡಬೇಕು. ಸಮಸ್ಯೆಯನ್ನು ಕೂಡಲೇ ಪರಿಹರಿಸಲು ಸಾಧ್ಯವಾಗದಿದ್ದರೂ, ಕಾರಣ ಹಾಗೂ ಕೈಗೊಳ್ಳಬೇಕಾದ ಕ್ರಮದ ಕುರಿತು ಸ್ಪಷ್ಟವಾಗಿ ತಿಳಿಸಬೇಕು ಎಂದರು. ಬಾಕಿ ಇರುವ ಪ್ರಕರಣಗಳು ಹಾಗೂ ಸಾರ್ವಜನಿಕ ದೂರುಗಳ ಕುರಿತು ತಾಲ್ಲೂಕು ಮಟ್ಟದಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸಿ, ನಿಗದಿತ ಕಾಲಮಿತಿಯೊಳಗೆ ಲಿಖಿತ ವರದಿಗಳನ್ನು ಸಲ್ಲಿಸುವಂತೆ ಎಲ್ಲಾ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಶಿವಲಿಂಗಯ್ಯ ಉಪ ಕಾರ್ಯದರ್ಶಿ (ಆಡಳಿತ), ಪಿ. ಲಕ್ಷ್ಮಿ ಉಪಕಾರ್ಯದರ್ಶಿ(ಅಭಿವೃದ್ಧಿ), ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಸಹಾಯಕ ನಿರ್ದೇಶಕರು (ಪಂಚಾಯತ್ ರಾಜ್) ಹಾಗೂ ಇತರೆ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಗೌರಿ-ಗಣೇಶ ಹಬ್ಬ: ಶಾಂತಿ, ಸೌಹಾರ್ದತೆ - ಪರಿಸರ ಸಂರಕ್ಷಣೆಗೆ ಆದ್ಯತೆ ನೀಡಿ: ಡಿಸಿ



**ಮಂಡ್ಯ:** ಜಿಲ್ಲೆಯಲ್ಲಿ ಶಾಂತಿ, ಸೌಹಾರ್ದತೆ, ಸಹಬಾಳ್ವೆ ಹಾಗೂ ಪರಸ್ಪರ ಗೌರವಕ್ಕೆ ಹೆಸರುವಾಸಿಯಾಗಿದೆ. ಗೌರಿ?ಗಣೇಶ ಹಬ್ಬವನ್ನು ಎಲ್ಲ ಧರ್ಮಗಳ ಭಾವನೆಗಳಿಗೆ ಗೌರವ ನೀಡುವ ಜೊತೆಗೆ ಶಾಂತಿ, ಸಾಮರಸ್ಯ ಹಾಗೂ ಸಂಭ್ರಮದಿಂದ ಆಚರಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಕರೆ ನೀಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಮಂಡ್ಯ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ಗೌರಿ?ಗಣೇಶ ಹಬ್ಬದ ಸೌಹಾರ್ದತಾ ಸಭೆಯಲ್ಲಿ ಮಾತನಾಡಿದ ಅವರು, ಹಬ್ಬದ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆಗೆ ಯಾವುದೇ ರೀತಿಯ ಧಕ್ಕೆಯಾಗದಂತೆ ಪ್ರತಿಯೊಬ್ಬರೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು ಎಂದರು.

ಮಂಡ್ಯ ಜಿಲ್ಲೆಯಲ್ಲಿ ಎಲ್ಲ ಧರ್ಮದವರು ಪರಸ್ಪರ ಗೌರವ ಹಾಗೂ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ. ಹಲವು ವರ್ಷಗಳಿಂದ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಈ ಉತ್ತಮ ವಾತಾವರಣವನ್ನು ಮತ್ತಷ್ಟು ಬಲಪಡಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಹಬ್ಬದ ಆಚರಣೆಯ ಸಂದರ್ಭದಲ್ಲಿ ಯಾವುದೇ ವ್ಯಕ್ತಿ ಅಥವಾ ಸಮುದಾಯದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗದಂತೆ ಎಚ್ಚರ ವಹಿಸಬೇಕು ಎಂದು ಹೇಳಿದರು.

ವಿಶೇಷವಾಗಿ ಯುವಕರು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಪ್ರಚೋದನಕಾರಿ ಸಂದೇಶಗಳು, ವದಂತಿಗಳು ಹಾಗೂ ಪರಿಶೀಲಿಸದ ಮಾಹಿತಿಗಳಿಗೆ ಒಳಗಾಗಬಾರದು. ಯಾವುದೇ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು. ಯುವಕರಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವಲ್ಲಿ ಧಾರ್ಮಿಕ ಮುಖಂಡರು, ಸಂಘಟನೆಗಳ ಪದಾಧಿಕಾರಿಗಳು ಹಾಗೂ ಸಮಾಜದ ಹಿರಿಯರು ಪ್ರಮುಖ ಪಾತ್ರ ವಹಿಸಬೇಕು ಎಂದರು.

ಹಬ್ಬವನ್ನು ಸಂಭ್ರಮದಿಂದ ಆಚರಿಸುವುದರ ಜೊತೆಗೆ, ಇತರರ ಭಾವನೆಗಳನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳೋಣ. ಮಂಡ್ಯ ಜಿಲ್ಲೆಯ ಸೌಹಾರ್ದತೆಯ ಪರಂಪರೆಯನ್ನು ಮುಂದುವರಿಸಿ, ಎಲ್ಲರೂ ಶಾಂತಿಯುತವಾಗಿ ಗೌರಿ?ಗಣೇಶ ಹಬ್ಬ ಆಚರಿಸೋಣ? ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ಮನವಿ ಮಾಡಿದರು.

**ಬೀಜ ಗಣಪತಿ ಬಳಕೆಗೆ ಕರೆ:** ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ ಅವರು, ಗಣೇಶೋತ್ಸವವನ್ನು ಪರಿಸರ ಸ್ನೇಹಿಯಾಗಿ ಆಚರಿಸುವ ಮೂಲಕ ಹಬ್ಬದ ಸಂಭ್ರಮದೊಂದಿಗೆ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನೂ ನಿಭಾಯಿಸೋಣ ಎಂದು ಹೇಳಿದರು.

ಮನೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮೂರ್ತಿ ಪ್ರತಿಷ್ಠಾಪಿಸುವಾಗ ಸಾಧ್ಯವಾದಷ್ಟು ಮಣ್ಣಿನಿಂದ ತಯಾರಿಸಿದ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನೇ ಬಳಸಬೇಕು. ವಿಶೇಷವಾಗಿ ಮಹಿಳಾ ಸ್ವಸಹಾಯ ಸಂಘಗಳು ತಯಾರಿಸುವ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿಗಳಿಗೆ ಆದ್ಯತೆ ನೀಡುವಂತೆ ಅವರು ಸಲಹೆ ನೀಡಿದರು.

ಮಣ್ಣಿನ ಗಣೇಶ ಮೂರ್ತಿಗಳ ತಯಾರಿಕೆಯಲ್ಲೇ ತುಳಸಿ ಸೇರಿದಂತೆ ವಿವಿಧ ಸಸಿಗಳ ಹಾಗೂ ನವಧಾನ್ಯಗಳ ಬೀಜಗಳನ್ನು ಅಳವಡಿಸಿಬೀಜ ಗಣಪತಿ ಯಾಗಿ ರೂಪಿಸಬಹುದು. ಹಬ್ಬದ ನಂತರ ಈ ಮೂರ್ತಿಯನ್ನು ಮನೆಯಲ್ಲಿಯೇ ಬಕೆಟ್ ಅಥವಾ ಕುಂಡದ ನೀರಿನಲ್ಲಿ ವಿಸರ್ಜಿಸಿದರೆ, ಮೂರ್ತಿಯಲ್ಲಿರುವ ಬೀಜಗಳು ಮೊಳಕೆಯೊಡೆದು ಸಸಿಗಳಾಗಿ ಬೆಳೆಯಲಿವೆ. ಇದರಿಂದ ಹಬ್ಬದ ಆಚರಣೆಯ ಜೊತೆಗೆ ಪರಿಸರ ಸಂರಕ್ಷಣೆ ಹಾಗೂ ಹಸಿರು ಪರಿಸರ ನಿರ್ಮಾಣಕ್ಕೂ ಕೊಡುಗೆ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಒಬ್ಬರು ಮಾಡಿದರೆ ಸಣ್ಣ ಪ್ರಯತ್ನವಾಗಬಹುದು; ಎಲ್ಲರೂ ಸೇರಿ ಮಾಡಿದರೆ ಅದು ದೊಡ್ಡ ಬದಲಾವಣೆಯಾಗುತ್ತದೆ. ಈ ಬಾರಿ ಪರಿಸರ ಸ್ನೇಹಿ ಗಣೇಶೋತ್ಸವ ಆಚರಣೆಗೆ ನಾವೆಲ್ಲರೂ ಕೈಜೋಡಿಸೋಣ? ಎಂದು ಅವರು ಕರೆ ನೀಡಿದರು.

**ಸಾರ್ವಜನಿಕ ಸ್ಥಳಗಳಲ್ಲಿ ಗಣೇಶೋತ್ಸವಕ್ಕೆ ಅನುಮತಿ ಕಡ್ಡಾಯ:** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ಅವರು ಮಾತನಾಡಿ, ಗಣೇಶೋತ್ಸವ ಸೇರಿದಂತೆ ಯಾವುದೇ ಧಾರ್ಮಿಕ ಹಾಗೂ ಸಾರ್ವಜನಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಸಂದರ್ಭದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಾರ್ವಜನಿಕರ ಸುರಕ್ಷತೆಗೆ ಮೊದಲ ಆದ್ಯತೆ ನೀಡಬೇಕು ಎಂದು ಹೇಳಿದರು.

ಸಾರ್ವಜನಿಕ ಸ್ಥಳಗಳಲ್ಲಿ ಗಣೇಶ ಮಂಟಪ ಸ್ಥಾಪಿಸುವವರು ಸಂಬಂಧಪಟ್ಟ ಇಲಾಖೆಗಳ ಅಗತ್ಯ ಅನುಮತಿ ಹಾಗೂ ಎನ್‌ಒಸಿಗಳನ್ನು ಪಡೆದುಕೊಳ್ಳಬೇಕು. ಮಂಟಪ ಸ್ಥಾಪಿಸುವ ಸ್ಥಳದ ಮಾಲೀಕರ ಅನುಮತಿ ಪಡೆಯುವುದರ ಜೊತೆಗೆ ಪೊಲೀಸ್ ಇಲಾಖೆಯಿಂದಲೂ ಅಗತ್ಯ ಅನುಮತಿ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಮನೆಗಳಲ್ಲಿ ಸಣ್ಣ ಪ್ರಮಾಣದಲ್ಲಿ ಗಣೇಶೋತ್ಸವ ಆಚರಿಸುವುದಕ್ಕೆ ಸಾಮಾನ್ಯವಾಗಿ ಅನುಮತಿಯ ಅಗತ್ಯವಿರುವುದಿಲ್ಲ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಮಂಟಪ ನಿರ್ಮಿಸಿ ಕಾರ್ಯಕ್ರಮ ಆಯೋಜಿಸುವ ಸಂದರ್ಭದಲ್ಲಿ ನಿಯಮಾನುಸಾರ ಅಗತ್ಯ ಅನುಮತಿಗಳನ್ನು ಕಡ್ಡಾಯವಾಗಿ ಪಡೆಯಬೇಕು ಎಂದು ಸ್ಪಷ್ಟಪಡಿಸಿದರು.

**ಮೆರವಣಿಗೆಗೆ ನಿಗದಿತ ಮಾರ್ಗ, ಸಮಯ ಪಾಲಿಸಿ:** ಗಣೇಶ ಮೆರವಣಿಗೆ ಆಯೋಜಿಸುವವರು ಮುಂಚಿತವಾಗಿ ಸ್ಥಳೀಯ ಪೊಲೀಸ್ ಠಾಣೆಯಿಂದ ಅನುಮತಿ ಪಡೆದು, ಮೆರವಣಿಗೆ ಸಾಗುವ ಮಾರ್ಗ ಹಾಗೂ ಕಾರ್ಯಕ್ರಮದ ವಿವರಗಳನ್ನು ನೀಡಬೇಕು. ಪೊಲೀಸ್ ಇಲಾಖೆ ನಿಗದಿಪಡಿಸುವ ಮಾರ್ಗ ಹಾಗೂ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಹೇಳಿದರು.

ಮೆರವಣಿಗೆ ಸಂದರ್ಭದಲ್ಲಿ ಸ್ವಯಂಸೇವಕರನ್ನು ನಿಯೋಜಿಸಿ, ಜನಸಂದಣಿ ನಿಯಂತ್ರಣ, ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆ ಹಾಗೂ ತುರ್ತು ಪರಿಸ್ಥಿತಿಯಲ್ಲಿ ತಕ್ಷಣ ಸ್ಪಂದಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

**ಧ್ವನಿವರ್ಧಕ ಬಳಕೆಯಲ್ಲಿ ನಿಯಮ ಪಾಲಿಸಿ:** ಗಣೇಶೋತ್ಸವ ಸಂದರ್ಭದಲ್ಲಿ ಧ್ವನಿವರ್ಧಕ ಹಾಗೂ ಡಿಜೆ ಬಳಕೆಯಲ್ಲಿಯೂ ಸರ್ಕಾರ ನಿಗದಿಪಡಿಸಿರುವ ಶಬ್ದಮಿತಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಅತಿಯಾದ ಶಬ್ದದಿಂದ ಮಕ್ಕಳು, ಮಹಿಳೆಯರು, ವೃದ್ಧರು ಹಾಗೂ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಆದ್ದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಧ್ವನಿವರ್ಧಕಗಳನ್ನು ಬಳಸಬೇಕು ಎಂದರು.

ಹಬ್ಬದ ಸಂಭ್ರಮ ಎಲ್ಲರಿಗೂ ಸಂತೋಷ ನೀಡುವಂತಿರಬೇಕು; ಯಾರಿಗೂ ತೊಂದರೆ ಉಂಟುಮಾಡುವಂತಿರಬಾರದು. ಪೊಲೀಸರೊಂದಿಗೆ ಆಯೋಜಕರು ಹಾಗೂ ಸಾರ್ವಜನಿಕರು ಸಹಕರಿಸುವ ಮೂಲಕ ಗಣೇಶೋತ್ಸವವನ್ನು ಶಾಂತಿಯುತವಾಗಿ ಹಾಗೂ ಸೌಹಾರ್ದಯುತವಾಗಿ ಆಚರಿಸಬೇಕು ಎಂದು ಡಾ. ಶೋಭಾರಾಣಿ ಅವರು ಮನವಿ ಮಾಡಿದರು.

ಸಭೆಯಲ್ಲಿ ಡಿವೈಎಸ್‌ಪಿ, ಮಂಡ್ಯ ಉಪವಿಭಾಗದ ಲಕ್ಷ್ಮಿನಾರಾಯಣ ಪ್ರಸಾದ್, ಶ್ರೀರಂಗಪಟ್ಟಣ ಉಪವಿಭಾಗದ ಕೃಷ್ಣಕುಮಾರ್ ಯು.ಡಿ. ಸೇರಿದಂತೆ ಪೊಲೀಸ್ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

# ಇಂತಹ ಶಿಕ್ಷಕರು ನಮ್ಮ ಸಮಾಜದಲ್ಲಿ ಸಾವಿರಾರು ಮಂದಿ ಬೆಳೆಯಲಿ



ಇದು 1974ರ ಮಾತು. ನಾನು ಮೈಸೂರಿನ ರಾಜರಾಜೇಶ್ವರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರನೇ ತರಗತಿಯಲ್ಲಿ ಓದುತ್ತಿದ್ದೆ. ರಾಮಾನುಜ ರಸ್ತೆ, ಬಸವೇಶ್ವರ ರಸ್ತೆ, ಚಾಮುಂಡಿಪುರಂ, ವಿದ್ಯಾರಣ್ಯಪುರಂ, ಬಂಡಿಕೇರಿ, ಮೇದರಕೇರಿ ಹಾಗೂ ನಂಜುಮಳಿಗೆಯ ಬಹುತೇಕ ಕುಟುಂಬಗಳ ಮಕ್ಕಳು ಇದೇ ಶಾಲೆಯಲ್ಲಿ ಓದುತ್ತಿದ್ದರು.

ರುಕ್ಮಿಣಿ ಮೇಡಂ, ಜಯಾ ಮೇಡಂ, ನೇತ್ರಾ ಮೇಡಂ, ಲಕ್ಷ್ಮಿ ಮೇಡಂ ಮತ್ತು ಗಾಯತ್ರಿ ಮೇಡಂ ಅವರಂತಹ ಆತ್ಮೀಯ ಶಿಕ್ಷಕರ ಬಳಗ ನಮಗಿತ್ತು. ಶಾಲೆಯ ಸ್ಥಾಪಕರೂ, ಹೆಡ್ ಮಾಸ್ಟರ್ ಆಗಿದ್ದ ಚಿನ್ನಪ್ಪನವರನ್ನು ಎಲ್ಲರೂ ಪ್ರೀತಿಯಿಂದ ?ತಾತಪ್ಪ ಮೇಷ್ಟ್ರು? ಎಂದು ಕರೆಯುತ್ತಿದ್ದರು. ಅವರ ಧರ್ಮಪತ್ನಿಯನ್ನು ನಾವು ?ಹೆಡ್ ಮೇಡಂ? ಎಂದೇ ಕರೆಯುತ್ತಿದ್ದೆವು. ಅವರ ನಿಜವಾದ ಹೆಸರು ನಮಗೆ ಗೊತ್ತಿರಲಿಲ್ಲ. ನಮಗೆ ಅವರು ಹೆಡ್ ಮೇಡಂ ಅಷ್ಟೇ.

ಆ ದಿನಗಳಲ್ಲಿ ಶಾಲೆಯ ತಿಂಗಳ ಫೀಸು ಕೇವಲ ಎರಡು ರೂಪಾಯಿ. ಆದರೆ ನಮ್ಮಂತಹ ಬಡ ಕುಟುಂಬಗಳಿಗೆ ಆ ಎರಡು ರೂಪಾಯಿಯೂ ಕೆಲವೊಮ್ಮೆ ದೊಡ್ಡ ಮೊತ್ತವಾಗಿತ್ತು. ನನ್ನ ತಂದೆಗೂ ನನ್ನ ಶಾಲಾ ಫೀಸು ಪಾವತಿಸುವುದು ಸುಲಭವಾಗಿರಲಿಲ್ಲ. ಒಮ್ಮೆ ಕುಟುಂಬದ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದೆ, ಸತತ ಮೂರು-ನಾಲ್ಕು ತಿಂಗಳು ನನ್ನ ಫೀಸು ಪಾವತಿಸಲು ಸಾಧ್ಯವಾಗಲಿಲ್ಲ.

ಪ್ರತಿ ಶನಿವಾರ ತಾತಪ್ಪ ಮೇಷ್ಟ್ರು ಕೈಯಲ್ಲಿ ಫೀಸಿನ ರಿಜಿಸ್ಟರ್ ಹಿಡಿದು ತರಗತಿಗಳಿಗೆ ಬರುತ್ತಿದ್ದರು. ಫೀಸು ಬಾಕಿ ಉಳಿಸಿಕೊಂಡ ವಿದ್ಯಾರ್ಥಿಗಳ ಹೆಸರುಗಳನ್ನು ಕರೆಯುತ್ತಿದ್ದರು. ಹಣ ಪಾವತಿಸುವವರೆಗೆ ಮನೆಗೆ ಹೋಗುವಂತೆ ಹೇಳುತ್ತಿದ್ದರು.

ಅಂದೂ ಒಂದು ಶನಿವಾರ ಅವರು ನಮ್ಮ ತರಗತಿಗೆ ಬಂದರು. ಒಂದೊಂದೇ ಹೆಸರನ್ನು ಓದುತ್ತಾ ಬಂದರು. ನನ್ನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು. ಕೊನೆಗೆ ನನ್ನ ಹೆಸರನ್ನೂ ಕರೆದರು.

ಪುಸ್ತಕಗಳನ್ನು ಚೀಲದಲ್ಲಿಟ್ಟುಕೊಂಡು ಮನೆಗೆ ಹೋಗು. ಫೀಸು ಪಾವತಿಸುವವರೆಗೆ ಶಾಲೆಗೆ ಬರಬೇಡ,? ಎಂದು ಖಡಕ್ಕಾಗಿ ಹೇಳಿದರು.

ಆ ಸಣ್ಣ ವಯಸ್ಸಿನಲ್ಲಿ ನನಗೆ ವಿಪರೀತ ನಾಚಿಕೆ ಮತ್ತು ದುಃಖವಾಯಿತು. ಕಣ್ಣಿನಲ್ಲಿ ನೀರು ತುಂಬಿಬಂತು. ನಿಧಾನವಾಗಿ ಪುಸ್ತಕಗಳನ್ನು ಚೀಲಕ್ಕೆ ತುಂಬಿಕೊಂಡು, ಕಣ್ಣೀರು ಒರೆಸಿಕೊಳ್ಳುತ್ತಾ ಶಾಲೆಯ ಗೇಟಿನ ಕಡೆಗೆ ನಡೆದೆ.

ಗೇಟಿನ ಬಳಿ ಹೆಡ್ ಮೇಡಂ ನಿಂತಿದ್ದರು.

ನಾನು ಚೆನ್ನಾಗಿ ಓದುತ್ತಿದ್ದ ಕಾರಣ ಅವರಿಗೆ ನನ್ನ ಮೇಲೆ ವಿಶೇಷ ಪ್ರೀತಿ ಇತ್ತು. ಅವರು ನನ್ನನ್ನು ?ಚಾಮಿ? ಎಂದೇ ಕರೆಯುತ್ತಿದ್ದರು. ಅಳುತ್ತಾ ಬರುತ್ತಿದ್ದ ನನ್ನನ್ನು ಕಂಡ ಅವರು ನನ್ನ ಕೈ ಹಿಡಿದು, ತಲೆಯ ಮೇಲೆ ಕೈಯಾಡಿಸುತ್ತಾ,

ಏನಾಯಿತು ಚಾಮಿ, ಯಾಕೆ ಅಳುತ್ತಿದ್ದೀಯಾ??

ಎಂದು ವಾತ್ಸಲ್ಯದಿಂದ ಕೇಳಿದರು. ನಾನು ಅಳುತ್ತಿದ್ದ ಧ್ವನಿಯಲ್ಲೇ ನಡೆದದ್ದನ್ನೆಲ್ಲ ಹೇಳಿದೆ.

ತಕ್ಷಣವೇ ಅವರು ನನ್ನನ್ನು ತಬ್ಬಿಕೊಂಡರು. ತಮ್ಮ ಸೀರೆಯ ಸೆರಗಿನಿಂದ ನನ್ನ ಕಣ್ಣೀರನ್ನು ಒರೆಸಿದರು. ತಲೆಯನ್ನು ಸವರುತ್ತಾ,

ಏನೂ ಪರವಾಗಿಲ್ಲ ಚಾಮಿ. ಬಾ, ತರಗತಿಗೆ ಹೋಗೋಣ. ತಾತಪ್ಪ ಮೇಷ್ಟ್ರಿಗೂ ನಿನ್ನ ಕ್ಲಾಸ್ ಟೀಚರ್‌ಗೂ ನಾನು ಹೇಳುತ್ತೇನೆ. ಇನ್ನು ಮುಂದೆ ನಿನ್ನನ್ನು ಯಾರೂ ಫೀಸು ಕೇಳುವುದಿಲ್ಲ. ಮನೆಗೆ ಹೋಗಿ ನಿನ್ನ ತಂದೆಯವರನ್ನು ಒಮ್ಮೆ ತಾತಪ್ಪ ಮೇಷ್ಟ್ರನ್ನು ಭೇಟಿಯಾಗಲು ಹೇಳು,? ಎಂದರು.

ಆ ಮಾತುಗಳು ನನಗೆ ಆ ಕ್ಷಣದಲ್ಲಿ ದೊಡ್ಡ ಧೈರ್ಯ ನೀಡಿದವು. ಕೆಲವೇ ಕ್ಷಣಗಳ ಹಿಂದೆ ಅವಮಾನ ಮತ್ತು ದುಃಖದಿಂದ ಕುಗ್ಗಿಹೋಗಿದ್ದ ನನ್ನ ಮನಸ್ಸಿಗೆ ಮತ್ತೆ ನೆಮ್ಮದಿ ದೊರೆಯಿತು. ಮನಸ್ಸಿನಲ್ಲಿದ್ದ ಭಾರವೆಲ್ಲ ಇಳಿದಂತಾಯಿತು. ಸಂತೋಷದಿಂದ ಮತ್ತೆ ತರಗತಿಗೆ ಹೋದೆ.

ನಂತರ ನನ್ನ ತಂದೆಯವರು ತಾತಪ್ಪ ಮೇಷ್ಟ್ರನ್ನು ಭೇಟಿಯಾದರೋ ಇಲ್ಲವೋ ನನಗೆ ಗೊತ್ತಿಲ್ಲ. ಬಾಕಿ ಉಳಿದ ಫೀಸು ಪಾವತಿಸಿದರೋ ಇಲ್ಲವೋ ಎಂಬುದೂ ನೆನಪಿಲ್ಲ. ಆದರೆ ಒಂದು ಸಂಗತಿ ಮಾತ್ರ ಸ್ಪಷ್ಟವಾಗಿ ನೆನಪಿದೆ?ಆ ದಿನದ ನಂತರ ನನ್ನನ್ನು ಯಾರೂ ಫೀಸು ಬಾಕಿದಾರ ಎಂದು ಕರೆದು ತರಗತಿಯಿಂದ ಹೊರಗೆ ಕಳುಹಿಸಲಿಲ್ಲ.

ನನಗೆ ಹೆಡ್ ಮೇಡಂ ನೀಡಿದ ಆ ಕರುಣೆ ಅಂತಹದ್ದೇ. ಅವರು ನನಗೆ ಹಣ ನೀಡಲಿಲ್ಲ; ಆದರೆ ಅದಕ್ಕಿಂತ ಅಮೂಲ್ಯವಾದ ಆತ್ಮವಿಶ್ವಾಸವನ್ನು ನೀಡಿದರು. ?ನೀನು ಮತ್ತೆ ತರಗತಿಗೆ ಹೋಗು? ಎಂಬ ಅವರ ಸರಳ ಮಾತು ಆ ದಿನ ನನ್ನ ಪಾಲಿಗೆ ದೊಡ್ಡ ಆಶ್ವಾಸನೆಯಾಗಿತ್ತು.

ಅವರ ಹೆಸರು ನನಗೆ ಇಂದಿಗೂ ಗೊತ್ತಿಲ್ಲ. ಆದರೆ ಐವತ್ತು ವರ್ಷಗಳ ನಂತರವೂ ಅವರ ಮುಖ, ಅವರ ಮಮತೆ, ಅವರು ಸೀರೆಯ ಸೆರಗಿನಿಂದ ಒರೆಸಿದ ನನ್ನ ಕಣ್ಣೀರು?ಎಲ್ಲವೂ ನನ್ನ ನೆನಪಿನಲ್ಲಿ ಹಾಗೆಯೇ ಉಳಿದಿವೆ.

ಇಂದು ಆ ಘಟನೆಯನ್ನು ನೆನಪಿಸಿಕೊಂಡಾಗ ಕಾಲ ಎಷ್ಟು ಬದಲಾಗಿದೆ ಎಂದು ಅನಿಸುತ್ತದೆ. ಅಂದು ಎರಡು ರೂಪಾಯಿ ಫೀಸು ಕಟ್ಟಲು ಸಾಧ್ಯವಾಗದೆ ನಾನು ಕಣ್ಣೀರು ಹಾಕಿದ್ದೆ. ಇಂದು ಶಿಕ್ಷಣಕ್ಕಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಕಾಲ ಬಂದಿದೆ. ಶಾಲೆಗಳ ಶುಲ್ಕ, ಸೌಲಭ್ಯಗಳು, ಸ್ಪರ್ಧೆ ಮತ್ತು ಶಿಕ್ಷಣದ ವ್ಯಾಪಾರೀಕರಣ ಎಲ್ಲವೂ ಬದಲಾಗಿವೆ. ಆದರೆ ಒಂದು ಮಗುವಿನ ಮನಸ್ಸಿಗೆ ಬೇಕಾಗಿರುವ ಕಾಳಜಿ ಮತ್ತು ಪ್ರೀತಿ ಮಾತ್ರ ಎಂದಿಗೂ ಬದಲಾಗಬಾರದು.

ಶಿಕ್ಷಕರು ಕೇವಲ ಪಾಠ ಹೇಳುವವರಲ್ಲ. ಒಂದು ಮಗು ನಾಚಿಕೆ, ಭಯ ಅಥವಾ ನಿರಾಶೆಯಿಂದ ಕುಗ್ಗಿದಾಗ ಅದರ ಪಕ್ಕದಲ್ಲಿ ನಿಂತು ಧೈರ್ಯ ತುಂಬುವವರೂ ಹೌದು. ಕೆಲವೊಮ್ಮೆ ಒಂದು ಮಾತು, ಒಂದು ಸಾಂತ್ವನದ ಸ್ಪರ್ಶ, ಒಂದು ಅಪ್ಪುಗೆ?ಮಗುವಿನ ಮನಸ್ಸಿನಲ್ಲಿ ಜೀವಮಾನವಿಡೀ ಉಳಿಯುವ ನೆನಪಾಗಬಹುದು.

ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ನನ್ನ ಬಾಲ್ಯಕ್ಕೆ ದಾರಿದೀಪವಾದ ರಾಜರಾಜೇಶ್ವರಿ ಶಾಲೆಯ ಎಲ್ಲಾ ಗುರುವೃಂದಕ್ಕೂ, ಹಾಗೆಯೇ ನನ್ನ ಜೀವನದಲ್ಲಿ ಗುರುಗಳಾಗಿ ಬಂದ ಪ್ರತಿಯೊಬ್ಬರಿಗೂ ನನ್ನ ಅನಂತ ಪ್ರಣಾಮಗಳು.

ಶಿಕ್ಷಣವನ್ನು ಕೇವಲ ಶುಲ್ಕ ಮತ್ತು ಫಲಿತಾಂಶಗಳ ಅಳತೆಯಲ್ಲಿ ನೋಡದೆ, ಮಗುವಿನ ಭವಿಷ್ಯವನ್ನೂ ಅದರ ಭಾವನೆಗಳನ್ನೂ ಸಮಾನವಾಗಿ ಕಾಳಜಿಯಿಂದ ನೋಡುವ ಇಂತಹ ಶಿಕ್ಷಕರು ನಮ್ಮ ಸಮಾಜದಲ್ಲಿ ಸಾವಿರಾರು ಮಂದಿ ಬೆಳೆಯಲಿ.



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email:Swamynathann@gmail.com

# ಗುರು ಎಂಬ ಬೆಳಕು; ವಿದ್ಯಾರ್ಥಿ ಎಂಬ ಭವಿಷ್ಯ!



| ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ



ಮನುಷ್ಯನ ಬದುಕಿನಲ್ಲಿ ಕೆಲವು ಸಂಬಂಧಗಳಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ತಾಯಿ-ತಂದೆಯ ಸಂಬಂಧ, ಸ್ನೇಹದ ಬಂಧ, ಸಹೋದರತ್ವದ ಆತ್ಮೀಯತೆಯಂತೆ ಗುರು-ಶಿಷ್ಯ ಸಂಬಂಧವೂ ಬದುಕಿನ ಅತ್ಯಂತ ಪವಿತ್ರ ಬಂಧಗಳಲ್ಲಿ ಒಂದು. ತಾಯಿ ಮಗುವಿಗೆ ಜೀವ ನೀಡಿದರೆ, ಗುರು ಆ ಜೀವಕ್ಕೆ ಜ್ಞಾನದ ದಿಕ್ಕು ನೀಡುತ್ತಾರೆ. ತಂದೆ ಕೈಹಿಡಿದು ನಡೆಯಲು ಕಲಿಸಿದರೆ, ಗುರು ಬದುಕಿನ ದಾರಿಯಲ್ಲಿ ಯಾವ ಹೆಜ್ಜೆ ಇಡಬೇಕು, ಯಾವ ದಾರಿಯನ್ನು ಆಯ್ಕೆ ಮಾಡಬೇಕು ಎಂಬುದನ್ನು ತಿಳಿಸುತ್ತಾರೆ. ಅದಕ್ಕಾಗಿಯೇ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ವಿಶಿಷ್ಟವಾದ ಸ್ಥಾನವಿದೆ. ಗುರು ಎಂದರೆ ಕೇವಲ ಪಾಠ ಹೇಳುವ ವ್ಯಕ್ತಿಯಲ್ಲ; ಅಜ್ಞಾನದಿಂದ ಜ್ಞಾನದ ಕಡೆಗೆ, ಗೊಂದಲದಿಂದ ಗುರಿಯ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ ಕರೆದೊಯ್ಯುವ ಮಾರ್ಗದರ್ಶಿ.

ಒಬ್ಬ ವಿದ್ಯಾರ್ಥಿ ಶಾಲೆಯ ಬಾಗಿಲು ದಾಟಿ ತರಗತಿಗೆ ಪ್ರವೇಶಿಸುವಾಗ ಅವನ ಕೈಯಲ್ಲಿ ಪುಸ್ತಕವಿರಬಹುದು, ಕಣ್ಣಿನಲ್ಲಿ ಕನಸಿರಬಹುದು, ಮನಸ್ಸಿನಲ್ಲಿ ಸಾವಿರ ಪ್ರಶ್ನೆಗಳಿರಬಹುದು. ಆದರೆ ಆ ಕನಸುಗಳಿಗೆ ರೂಪ ನೀಡುವ ಶಕ್ತಿ ಶಿಕ್ಷಕರಲ್ಲಿದೆ. ಕೆಲವೊಮ್ಮೆ ವಿದ್ಯಾರ್ಥಿಗೆ ತನ್ನಲ್ಲಿರುವ ಸಾಮರ್ಥ್ಯವೇ ತಿಳಿದಿರುವುದಿಲ್ಲ. ಆಗ ಒಬ್ಬ ಉತ್ತಮ ಶಿಕ್ಷಕ ?ನೀನು ಮಾಡಬಲ್ಲೆ? ಎಂದು ಹೇಳುವ ಮೂಲಕ ಆತ್ಮವಿಶ್ವಾಸದ ಬೀಜ ಬಿತ್ತುತ್ತಾನೆ. ಆ ಒಂದು ಮಾತು ಕೆಲವೊಮ್ಮೆ ವಿದ್ಯಾರ್ಥಿಯ ಇಡೀ ಬದುಕಿನ ದಿಕ್ಕನ್ನೇ ಬದಲಿಸಬಲ್ಲದು.

ಗುರು ಎಂಬುದು ಒಂದು ಹುದ್ದೆಯಲ್ಲ; ಅದು ಒಂದು ಮಹತ್ತರ ಹೊಣೆಗಾರಿಕೆ. ಇಂದಿನ ಶಿಕ್ಷಣ ವ್ಯವಸ್ಥೆ ತಂತ್ರಜ್ಞಾನದಿಂದ ವೇಗವಾಗಿ ಬದಲಾಗುತ್ತಿದೆ. ಸ್ಮಾರ್ಟ್‌ಬೋರ್ಡ್, ಇಂಟರ್ನೆಟ್, ಆನ್‌ಲೈನ್ ತರಗತಿಗಳು, ಕೃತಕ ಬುದ್ಧಿಮತ್ತೆ ಹೀಗೆ ಜ್ಞಾನದ ಮೂಲಗಳು ಅನೇಕವಾಗಿವೆ. ವಿದ್ಯಾರ್ಥಿಯ ಬೆರಳ ತುದಿಯಲ್ಲೇ ಅಪಾರ ಮಾಹಿತಿ ಲಭ್ಯವಿದೆ. ಆದರೂ ಶಿಕ್ಷಕರ ಅಗತ್ಯ ಕಡಿಮೆಯಾಗಿಲ್ಲ. ಏಕೆಂದರೆ ಮಾಹಿತಿ ಎಲ್ಲೆಡೆ ಸಿಗಬಹುದು; ಆದರೆ ಮಾಹಿತಿಯನ್ನು ಜ್ಞಾನವಾಗಿ, ಜ್ಞಾನವನ್ನು ವಿವೇಕವಾಗಿ, ವಿವೇಕವನ್ನು ಜೀವನದ ಮೌಲ್ಯವಾಗಿ ಪರಿವರ್ತಿಸುವ ಕೆಲಸವನ್ನು ಶಿಕ್ಷಕರೇ ಮಾಡಬೇಕು.

ಇಂಟರ್ನೆಟ್ ಒಂದು ಪ್ರಶ್ನೆಗೆ ಸಾವಿರ ಉತ್ತರಗಳನ್ನು ನೀಡಬಹುದು. ಆದರೆ ಆ ಉತ್ತರಗಳಲ್ಲಿ ಯಾವುದು ಸತ್ಯ, ಯಾವುದು ತಪ್ಪು, ಯಾವುದು ಉಪಯುಕ್ತ ಎಂಬುದನ್ನು ಗುರುತಿಸಲು ವಿವೇಕ ಬೇಕು. ಪ್ರಶ್ನಿಸುವುದು, ವಿಚಾರಿಸುವುದು, ವಿಶ್ಲೇಷಿಸುವುದು ಮತ್ತು ಸರಿಯಾದ ನಿರ್ಧಾರ ಕೈಗೊಳ್ಳುವುದನ್ನು ಕಲಿಸುವುದು ಇಂದಿನ ಶಿಕ್ಷಕರ ಪ್ರಮುಖ ಕರ್ತವ್ಯವಾಗಿದೆ. ತಂತ್ರಜ್ಞಾನವನ್ನು ವಿರೋಧಿಸುವುದಕ್ಕಿಂತ ಅದರ ಜವಾಬ್ದಾರಿಯುತ ಬಳಕೆಯನ್ನು ವಿದ್ಯಾರ್ಥಿಗಳಿಗೆ ತಿಳಿಸುವುದು ಅಗತ್ಯ.

ಶಿಕ್ಷಕನು ವಿದ್ಯಾರ್ಥಿಯ ಅಂಕಗಳನ್ನು ಮಾತ್ರ ನೋಡಬಾರದು; ಅವನ ವ್ಯಕ್ತಿತ್ವವನ್ನೂ ಗಮನಿಸಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯ ಸಾಮರ್ಥ್ಯ ಒಂದೇ ರೀತಿಯಲ್ಲ. ಒಬ್ಬನು ಗಣಿತದಲ್ಲಿ ಪ್ರತಿಭಾವಂತನಾಗಿರಬಹುದು; ಮತ್ತೊಬ್ಬನು ಭಾಷೆಯಲ್ಲಿ, ಕ್ರೀಡೆಯಲ್ಲಿ, ಸಂಗೀತದಲ್ಲಿ, ಕಲೆಯಲ್ಲಿ ಅಥವಾ ತಂತ್ರಜ್ಞಾನದಲ್ಲಿ ತನ್ನದೇ ಆದ ಸಾಮರ್ಥ್ಯ ಹೊಂದಿರಬಹುದು. ಎಲ್ಲರನ್ನೂ ಒಂದೇ ಅಳತೆಯಿಂದ ಅಳೆಯುವುದು ಶಿಕ್ಷಣದ ಉದ್ದೇಶವಲ್ಲ. ಪ್ರತಿಯೊಬ್ಬರೊಳಗಿನ ವಿಭಿನ್ನ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ಸೂಕ್ತವಾದ ದಾರಿಯನ್ನು ತೋರಿಸುವುದೇ ನಿಜವಾದ ಶಿಕ್ಷಣ.

ಕೆಲವೊಮ್ಮೆ ತರಗತಿಯಲ್ಲಿ ಮೌನವಾಗಿ ಕುಳಿತಿರುವ ವಿದ್ಯಾರ್ಥಿಯ ಹಿಂದೆ ಹೇಳಲಾಗದ ನೋವಿರಬಹುದು. ಮನೆಯ ಸಮಸ್ಯೆ, ಆರ್ಥಿಕ ಸಂಕಷ್ಟ, ಆತ್ಮವಿಶ್ವಾಸದ ಕೊರತೆ, ಸ್ನೇಹಿತರ ಒತ್ತಡ ಅಥವಾ ಭವಿಷ್ಯದ ಆತಂಕ ಅವನ ಮನಸ್ಸನ್ನು ಕಾಡುತ್ತಿರಬಹುದು. ಅಂತಹ ಸಂದರ್ಭದಲ್ಲಿ ಶಿಕ್ಷಕರ ಒಂದು ಆತ್ಮೀಯ ಮಾತು ಔಷಧಿಯಂತೆ ಕೆಲಸ ಮಾಡಬಹುದು. ?ಏನಾಯಿತು?? ಎಂದು ಕೇಳುವ ಒಬ್ಬ ಗುರು, ವಿದ್ಯಾರ್ಥಿಯ ಮನಸ್ಸಿನಲ್ಲಿ ?ನನ್ನನ್ನು ಅರ್ಥಮಾಡಿಕೊಳ್ಳುವವರು ಇದ್ದಾರೆ? ಎಂಬ ಭರವಸೆ ಮೂಡಿಸಬಹುದು. ಆದ್ದರಿಂದ ಗುರು ಪಾಠವನ್ನು ಮಾತ್ರ ಕಲಿಸುವುದಲ್ಲ; ವಿದ್ಯಾರ್ಥಿಯ ಮೌನವನ್ನೂ ಓದಲು ಕಲಿಯಬೇಕು.

ಇಂದು ಮಕ್ಕಳ ಮೇಲೆ ಅಂಕಗಳ ಒತ್ತಡವೂ ಹೆಚ್ಚಾಗಿದೆ. ಪರೀಕ್ಷೆ, ಸ್ಪರ್ಧೆ ಮತ್ತು ಭವಿಷ್ಯದ ಆತಂಕದಿಂದ ಬಾಲ್ಯವೇ ಒತ್ತಡಕ್ಕೆ ಒಳಗಾಗಬಾರದು. ವಿದ್ಯಾರ್ಥಿಯ ಅಂಕ ಕಡಿಮೆಯಾಗಬಹುದು; ಆದರೆ ಅವನ ಆತ್ಮವಿಶ್ವಾಸ ಕಡಿಮೆಯಾಗಬಾರದು. ಒಂದು ಪರೀಕ್ಷೆಯಲ್ಲಿ ಸೋತರೆ ಜೀವನವೇ ಸೋತಂತಲ್ಲ ಎಂಬುದನ್ನು ಶಿಕ್ಷಕರು ತಿಳಿಸಬೇಕು. ?ಈ ಬಾರಿ ಆಗಲಿಲ್ಲ, ಮುಂದಿನ ಬಾರಿ ಇನ್ನಷ್ಟು ಪ್ರಯತ್ನಿಸೋಣ? ಎಂದು ಕೈಹಿಡಿಯುವ ಶಿಕ್ಷಕನೇ ನಿಜವಾದ ಗುರು.

ಶಿಕ್ಷಣವೆಂದರೆ ಕೇವಲ ಉದ್ಯೋಗ ಪಡೆಯುವ ಸಾಧನವಲ್ಲ; ಅದು ಒಬ್ಬ ವ್ಯಕ್ತಿಯನ್ನು ಉತ್ತಮ ಮನುಷ್ಯನನ್ನಾಗಿ ರೂಪಿಸುವ ಪ್ರಕ್ರಿಯೆ. ಜ್ಞಾನಕ್ಕೆ ಮಾನವೀಯತೆ ಸೇರಿದಾಗ ಮಾತ್ರ ಅದರ ಸಾರ್ಥಕತೆ ಹೆಚ್ಚುತ್ತದೆ. ಪ್ರಾಮಾಣಿಕತೆ, ಶಿಸ್ತು, ಕರುಣೆ, ಸಹನೆ, ಪರಿಸರ ಪ್ರೀತಿ, ಹೊಣೆಗಾರಿಕೆ ಮತ್ತು ಸಮಾಜದ ಬಗ್ಗೆ ಕಾಳಜಿಯಂತಹ ಮೌಲ್ಯಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದು ಶಿಕ್ಷಕರ ಮಹತ್ತರ ಜವಾಬ್ದಾರಿ. ?ಯಶಸ್ವಿಯಾಗು? ಎನ್ನುವುದರ ಜೊತೆಗೆ ?ಒಳ್ಳೆಯ ಮನುಷ್ಯನಾಗು? ಎಂದು ಹೇಳುವ ಗುರುಗಳು ಇಂದು ಹೆಚ್ಚು ಅಗತ್ಯ.

ವಿದ್ಯಾರ್ಥಿ ಜೀವನದಲ್ಲಿ ಶಿಕ್ಷಕರ ಗದರಿಕೆಯೂ ಕೆಲವೊಮ್ಮೆ ಆಶೀರ್ವಾದವಾಗುತ್ತದೆ. ತಪ್ಪು ದಾರಿಯಲ್ಲಿ ಹೋಗದಂತೆ ತಡೆಯುವ ಒಂದು ಕಠಿಣ ಮಾತಿನ ಹಿಂದೆ ಅಪಾರ ಕಾಳಜಿ ಅಡಗಿರಬಹುದು. ವರ್ಷಗಳು ಕಳೆದ ನಂತರ ಆ ಮಾತಿನ ಅರ್ಥ ತಿಳಿಯುತ್ತದೆ. ಅದಕ್ಕಾಗಿಯೇ ಶಿಕ್ಷಕರಿಂದ ಕಲಿತ ಪಾಠಗಳು ತರಗತಿಯ ಗೋಡೆಗಳನ್ನು ದಾಟಿ ಬದುಕಿನುದ್ದಕ್ಕೂ ನಮ್ಮೊಂದಿಗೆ ಸಾಗುತ್ತವೆ.

ಶಿಕ್ಷಕರ ದಿನಾಚರಣೆ ಎಂದರೆ ಕೇವಲ ಹೂವು ನೀಡಿ, ಶುಭಾಶಯ ಹೇಳುವ ದಿನವಲ್ಲ. ಗುರುಗಳು ಕಲಿಸಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವ ದಿನವಾಗಬೇಕು. ವಿದ್ಯಾರ್ಥಿ ಸತ್ಯವನ್ನು ಮಾತನಾಡಿದರೆ, ಪ್ರಾಮಾಣಿಕವಾಗಿ ನಡೆದುಕೊಂಡರೆ, ಮತ್ತೊಬ್ಬರಿಗೆ ನೆರವಾದರೆ, ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಿದರೆ?ಅದೇ ಶಿಕ್ಷಕರಿಗೆ ಸಲ್ಲಿಸುವ ನಿಜವಾದ ಗೌರವ. ವಿದ್ಯಾರ್ಥಿಯ ಯಶಸ್ಸು ಶಿಕ್ಷಕರಿಗೆ ದೊರೆಯುವ ಅತ್ಯಂತ ದೊಡ್ಡ ಪ್ರಶಸ್ತಿ.

ಒಬ್ಬ ವೈದ್ಯ, ಇಂಜಿನಿಯರ್, ವಿಜ್ಞಾನಿ, ಅಧಿಕಾರಿ, ಕಲಾವಿದ, ಕ್ರೀಡಾಪಟು ಅಥವಾ ಸಮಾಜಸೇವಕನ ಯಶಸ್ಸಿನ ಹಿಂದೆ ಅನೇಕ ಕೈಗಳಿರುತ್ತವೆ. ಆದರೆ ಆ ಪ್ರಯಾಣದ ಮೊದಲ ಅಕ್ಷರ ಕಲಿಸಿದ, ಮೊದಲ ಕನಸಿಗೆ ದಿಕ್ಕು ತೋರಿಸಿದ ಗುರುವನ್ನು ಮರೆಯಲು ಸಾಧ್ಯವಿಲ್ಲ. ಒಂದು ಪುಸ್ತಕ ಮರೆತುಹೋಗಬಹುದು, ಒಂದು ಪಾಠ ಮರೆತುಹೋಗಬಹುದು, ಒಂದು ಪರೀಕ್ಷೆಯ ಅಂಕವೂ ಮರೆಯಾಗಬಹುದು; ಆದರೆ ಬದುಕನ್ನು ಬದಲಿಸಿದ ಗುರುವಿನ ಒಂದು ಮಾತು ಎಂದಿಗೂ ಮರೆಯಲಾಗುವುದಿಲ್ಲ.

ಗುರು ದೀಪದಂತೆ. ದೀಪ ತನ್ನ ಬೆಳಕನ್ನು ಹಂಚಿಕೊಂಡಷ್ಟೂ ತನ್ನ ಪ್ರಕಾಶವನ್ನು ಕಳೆದುಕೊಳ್ಳುವುದಿಲ್ಲ. ಹಾಗೆಯೇ ಶಿಕ್ಷಕರು ಜ್ಞಾನವನ್ನು ಹಂಚಿದಷ್ಟೂ ಜ್ಞಾನ ಮತ್ತಷ್ಟು ವಿಸ್ತರಿಸುತ್ತದೆ. ಅವರ ಕೈಯಲ್ಲಿ ಕೇವಲ ಪೆನ್ ಅಥವಾ ಪಾಠಪುಸ್ತಕ ಇರುವುದಿಲ್ಲ; ಒಂದು ಪೀಳಿಗೆಯ ಭವಿಷ್ಯವಿರುತ್ತದೆ. ವಿದ್ಯಾರ್ಥಿಯ ಕಣ್ಣಿನಲ್ಲಿರುವ ಕನಸಿಗೆ ದಿಕ್ಕು ನೀಡುವ ಶಕ್ತಿ ಅವರಲ್ಲಿರುತ್ತದೆ. ಹೀಗಾಗಿ ಗುರು-ಶಿಷ್ಯ ಸಂಬಂಧ ಕೇವಲ ಒಂದು ಸಂಬಂಧವಲ್ಲ; ಅದು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಸಾಗುವ ಜ್ಞಾನದ ಜ್ಯೋತಿ. ಗುರು ಬೆಳಕು ನೀಡಿದರೆ, ವಿದ್ಯಾರ್ಥಿ ಆ ಬೆಳಕಿನಲ್ಲಿ ತನ್ನದೇ ದಾರಿಯನ್ನು ನಿರ್ಮಿಸಿಕೊಳ್ಳುತ್ತಾನೆ. ಗುರು ಎಂಬ ಬೆಳಕು ಎಂದಿಗೂ ಆರಬಾರದು; ವಿದ್ಯಾರ್ಥಿ ಎಂಬ ಭವಿಷ್ಯ ಎಂದಿಗೂ ಕತ್ತಲೆಯಾಗಬಾರದು.

**ಜ್ಞಾನವೆಂಬ ಬೆಳಕನ್ನು ಹಚ್ಚಿ,**
**ಕನಸುಗಳಿಗೆ ರೆಕ್ಕೆ ನೀಡಿ,**
**ಯಶಸ್ಸಿನ ದಾರಿಗೆ ದಾರಿ ತೋರಿಸುವ**
**ಎಲ್ಲಾ ಗೌರವಾನ್ವಿತ ಶಿಕ್ಷಕರಿಗೆ**
**ಶಿಕ್ಷಕರ ದಿನಾಚರಣೆಯ ಹೃತ್ಪೂರ್ವಕ ಶುಭಾಶಯಗಳು.**

# ಬೆಳಕು, ನಡಿಗೆ, ಬದುಕು



ಆರೋಗ್ಯ ಪಥವು ಕೋಶದೊಳಗಿನ ಮೈಟೋಕಾಂಡ್ರಿಯಾ ಎಂಬ ಶಕ್ತಿಕೇಂದ್ರದ ಪುನರುಜ್ಜೀವನ ಯಾತ್ರೆ. ಹೊಸ ಸಂಶೋಧನೆ ಹೇಳುವಂತೆ ಹೃದಯ ಬಡಿತ 180-ವಯಸ್ಸು ಸೂತ್ರದ ಝೋನ್-2 ವ್ಯಾಯಾಮವು ಪಿಜಿಸಿ-1ಆಲ್ಫಾ ಜೊತೆಗೆ ಪಿಂಕ್1-ಪಾರ್ಕಿನ್ ಮಾರ್ಗವನ್ನು ಎಚ್ಚರಿಸಿ ಹಳೆಯ ಮೈಟೋಕಾಂಡ್ರಿಯಾ ಕಿತ್ತುಹಾಕುವ ಮೈಟೊಫಜಿಯನ್ನು ಪ್ರಚೋದಿಸುತ್ತದೆ. ಇದರಿಂದ ಲ್ಯಾಕ್ಟೇಟ್ ತೆರವು ವೇಗವಾಗಿ ಆಯಾಸದ ಮಂಜು ಕರಗಿ ಸಹಿಷ್ಣುತೆ ಹೆಚ್ಚುತ್ತದೆ, ಶಕ್ತಿಯ ತೊರೆ ಹರಿಯುತ್ತದೆ.

ಬೆಳಗಿನ ಬೆಳಕಿನ ರಹಸ್ಯ ಇನ್ನಷ್ಟು ಆಳವಾಗಿದೆ. ಕಣ್ಣಿನ ಐಪಿಆರ್‌ಜಿಸಿ ಕೋಶಗಳ ಮೆಲನಾಪ್ಸಿನ್ ವರ್ಣದ್ರವ್ಯವು ಮುಂಜಾನೆಯ ಮೊದಲ ಎರಡು ಗಂಟೆಯ ನೀಲಿ-ಹಸಿರು ಕಿರಣಕ್ಕೆ ಅತ್ಯಂತ ಸಂವೇದಿ. ಈ ಬೆಳಕು ಮೆದುಳಿನ ಸುಪ್ರಾಕಯಾಸ್ಮಾಟಿಕ್ ಗಡಿಯಾರವನ್ನು ಮುಂದಕ್ಕೆ ತಳ್ಳಿ ಸಿರೊಟೋನಿನ್ ಹೆಚ್ಚಿಸಿ ಖಿನ್ನತೆಯ ಮಂಜು ಕಳೆಯುತ್ತದೆ, ನಿದ್ರೆಯ ಆಳ ತಿದ್ದುತ್ತದೆ ಎಂಬುದು ನೇಚರ್ ಪತ್ರಿಕೆಯ ನೂತನ ಸಂಶೋಧನೆ. ಕೇವಲ ವಿಟಮಿನ್ ಡಿ ಅಲ್ಲ, ಬೆಳಕೇ ಮನಸ್ಸಿನ ನೈಸರ್ಗಿಕ ಔಷಧ, ರೋಗನಿರೋಧಕದ ಕವಚ.

ಈ ಪಯಣ ವೈಯಕ್ತಿಕದಿಂದ ಸಾಮುದಾಯಿಕವಾಗಿ ವಿಸ್ತರಿಸಬೇಕು. ವಾರ್ಡ್ ಮಟ್ಟದಲ್ಲಿ ಆರೋಗ್ಯ ಮಿತ್ರ ತಂಡಗಳು ದಾಳಿಂಬೆಯಿಂದ ದೊರೆಯುವ ಯುರೊಲಿಥಿನ್-ಎ ನಂತಹ ಮೈಟೊಫಜಿ ಪೋಷಕಾಂಶ, ಕರುಳು-ಸ್ನಾಯು ಅಕ್ಷ, ಮಣ್ಣಿನ ಸೂಕ್ಷ್ಮಜೀವಿ ಸಂಪರ್ಕದ ಬಗ್ಗೆ ಜಾಗೃತಿ ಮೂಡಿಸಿದರೆ ಆಸ್ಪತ್ರೆಯ ಸುದೀರ್ಘ ಸಾಲು ತಾನಾಗಿಯೇ ಕಡಿಮೆಯಾಗುತ್ತದೆ. ಶಾಲೆಯಲ್ಲಿ ಮಣ್ಣಿನಾಟ, ಕಚೇರಿಯಲ್ಲಿ ಮೆಟ್ಟಿಲು ಸ್ಪರ್ಧೆ, ಪಾರ್ಕ್‌ನಲ್ಲಿ ನಗು-ವ್ಯಾಯಾಮ ಸಮಾಜದ ಚಯಾಪಚಯವನ್ನು ಚುರುಕುಗೊಳಿಸುತ್ತದೆ.

ಪಥದ ಗುರುತುಗಳು ವೈಜ್ಞಾನಿಕ ಮತ್ತು ಸರಳ: ಏಳುತ್ತಲೇ ಸಬ್ಬಕ್ಕಿ ತಿಳಿನೀರು, ಮಧ್ಯಾಹ್ನ ಮೊಳಕೆಕಾಳು ಸಲಾಡ್, ಸಂಜೆ ನೆಲ್ಲಿಕಾಯಿ ಜೇನಿನ ರಸ, ದಿನಕ್ಕೆ ಹತ್ತು ನಿಮಿಷ ಬರಿಗಾಲ ಹುಲ್ಲಿನ ನಡಿಗೆ. ವಾರಕ್ಕೊಮ್ಮೆ ಡಿಜಿಟಲ್ ಉಪವಾಸ, ತಿಂಗಳಿಗೊಮ್ಮೆ ತೂಕ, ಸೊಂಟ, ನಾಡಿ, ನಿದ್ರೆ ದಾಖಲಿಸುವ ಲೆಕ್ಕಪರಿಶೋಧನೆ. ಅಂಗಳದಲ್ಲಿ ತುಳಸಿ-ಒಂದೆಲಗ ಬೆಳೆಸಿ ಗಾಳಿಯನ್ನೇ ಔಷಧವಾಗಿಸಿದರೆ ಮೃತ್ಯುವಿನ ದಾರಿ ನಿರ್ಗಮಿಸಿ ಆರೋಗ್ಯ ಪಥವೇ ಜೀವದ ಸ್ವಾಗತ ದ್ವಾರವಾಗುತ್ತದೆ.

ಅಂಕಣ-13
ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಭಾರತದ ಅಪ್ರತಿಮ ಸಾಧಕರ ಜೀವನದಲ್ಲಿ ಗುರು-ಶಿಷ್ಯ ಬಾಂಧವ್ಯ



| ಡಾ. ಪ್ರಸನ್ನ ದೇವರ ಮಠ
ಅನಿಲಕುಮಾರ್, ಮಾಗಳ




"ಗುರುಬ್ರಹ್ಮ ಗುರುರ್ವಿಷ್ಣು ಗುರುರ್ದೇವೋ ಮಹೇಶ್ವರಃ" ಎನ್ನುವ ಶ್ಲೋಕ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗಿರುವ ಉನ್ನತ ಸ್ಥಾನವನ್ನು ಸಾರುತ್ತದೆ. ಒಬ್ಬ ವ್ಯಕ್ತಿಯನ್ನು ಆಕಾರಗೊಳಿಸಿ, ಅವರಲ್ಲಿರುವ ಸುಪ್ತ ಪ್ರತಿಭೆಯನ್ನು ಹೊರತಂದು, ಸಮಾಜಕ್ಕೆ ಶ್ರೇಷ್ಠ ಕೊಡುಗೆ ನೀಡುವಂತೆ ಮಾಡುವ ಶಕ್ತಿ ಗುರುವಿಗಿದೆ.

ನಮ್ಮ ಭಾರತದ ಇತಿಹಾಸವನ್ನು ತಿರುಗಿಸಿ ನೋಡಿದರೆ, ಜಗತ್ತೇ ಬೆರಗಾಗುವಂತಹ ಸಾಧನೆ ಮಾಡಿದ ಅಪ್ರತಿಮ ಸಾಧಕರ ಯಶಸ್ಸಿನ ಹಿಂದೆ ಅವರ ಗುರುಗಳ ಮಾರ್ಗದರ್ಶನ ಮತ್ತು ಅಪಾರ ಪ್ರಭಾವವಿರುವುದು ಕಂಡುಬರುತ್ತದೆ.

**ಚಾಣಕ್ಯ ಮತ್ತು ಚಂದ್ರಗುಪ್ತ ಮೌರ್ಯ:** ಸಾಮ್ರಾಜ್ಯ ಕಟ್ಟಿದ ಮಾರ್ಗದರ್ಶನ ಸಾಮಾನ್ಯ ಬಾಲಕನಾಗಿದ್ದ ಚಂದ್ರಗುಪ್ತನನ್ನು ಭಾರತದ ಬೃಹತ್ ಮೌರ್ಯ ಸಾಮ್ರಾಜ್ಯದ ಚಕ್ರವರ್ತಿಯನ್ನಾಗಿ ರೂಪುಗೊಳಿಸಿದ ಕೀರ್ತಿ ಆಚಾರ್ಯ ಚಾಣಕ್ಯರಿಗೆ ಸಲ್ಲುತ್ತದೆ. ಚಾಣಕ್ಯರ ಬುದ್ಧಿವಂತಿಕೆ, ರಾಜನೀತಿ ಮತ್ತು ದೂರದೃಷ್ಟಿ ಚಂದ್ರಗುಪ್ತನಿಗೆ ಅಖಂಡ ಭಾರತವನ್ನು ಕಟ್ಟಲು ದಾರಿದೀಪವಾಯಿತು. ಇಲ್ಲಿ ಗುರು-ಶಿಷ್ಯರ ಸಂಬಂಧವು ಕೇವಲ ವಿದ್ಯಾದಾನಕ್ಕೆ ಸೀಮಿತವಾಗಿರದೆ, ರಾಷ್ಟ್ರ ನಿರ್ಮಾಣದ ಉನ್ನತ ಧ್ಯೇಯವನ್ನು ಹೊಂದಿತ್ತು.

**ರಾಮಕೃಷ್ಣ ಪರಮಹಂಸ ಮತ್ತು ಸ್ವಾಮಿ ವಿವೇಕಾನಂದ:**

ಆಧ್ಯಾತ್ಮಿಕ ಜಾಗೃತಿ ನರೇಂದ್ರನಾಥನೆಂಬ ತರ್ಕಮನೋಭಾವದ ಯುವಕ ಜಗದ್ವಿಖ್ಯಾತ 'ಸ್ವಾಮಿ ವಿವೇಕಾನಂದ'ರಾಗಿ ಬೆಳೆಯಲು ರಾಮಕೃಷ್ಣ ಪರಮಹಂಸರ ಭೇಟಿ ಪ್ರಮುಖ ತಿರುವು. ನರೇಂದ್ರನ ಸತ್ಯದ ಹುಡುಕಾಟಕ್ಕೆ, ಗೊಂದಲಗಳಿಗೆ ಸೂಕ್ತ ಉತ್ತರ ನೀಡಿ, ಅವನಲ್ಲಿದ್ದ ಆಧ್ಯಾತ್ಮಿಕ ಶಕ್ತಿಯನ್ನು ಜಾಗೃತಗೊಳಿಸಿದವರು ರಾಮಕೃಷ್ಣರು. ಗುರುವಿನ ಮೇಲಿದ್ದ ಅಪಾರ ಶ್ರದ್ಧೆ ಮತ್ತು ಗುರುವಿನ ಸಿದ್ಧಾಂತಗಳನ್ನು ಜಗತ್ತಿನಾದ್ಯಂತ ಪಸರಿಸಿದ ಶಿಷ್ಯನ ಭಕ್ತಿ, ಆಧ್ಯಾತ್ಮಿಕ ಪರಂಪರೆಯಲ್ಲಿ ಗುರು-ಶಿಷ್ಯ ಬಾಂಧವ್ಯಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ.

**ಸಮರ್ಥ ರಾಮದಾಸರು ಮತ್ತು ಛತ್ರಪತಿ ಶಿವಾಜಿ ಮಹಾರಾಜ್:** ಧರ್ಮ ಮತ್ತು ಶೌರ್ಯದ ಸಮ್ಮಿಲನ

ಛತ್ರಪತಿ ಶಿವಾಜಿ ಮಹಾರಾಜರ ಶೌರ್ಯ, ಆಡಳಿತ ಕೌಶಲ ಮತ್ತು ಧರ್ಮರಕ್ಷಣೆಯ ಹಿಂದಿನ ಪ್ರೇರಕ ಶಕ್ತಿ ಸಮರ್ಥ ರಾಮದಾಸರು. ಶಿವಾಜಿಗೆ ಕೇವಲ ಯುದ್ಧ ಕಲೆಯಷ್ಟೇ ಅಲ್ಲದೆ, ಪ್ರಜಾಪಾಲನೆ ಮತ್ತು ನೈತಿಕ ಮೌಲ್ಯಗಳನ್ನು ಬೋಧಿಸಿದವರು ರಾಮದಾಸರು. ಶಿವಾಜಿ ಮಹಾರಾಜರು ತಮ್ಮ ರಾಜ್ಯವನ್ನೇ ಗುರುವಿನ ಚರಣಗಳಿಗೆ ಅರ್ಪಿಸಲು ಮುಂದಾಗಿದ್ದ ಘಟನೆ, ಅವರಲ್ಲಿದ್ದ ಗುರುಭಕ್ತಿಗೆ ಸಾಕ್ಷಿ.

**ರಮೇಶ್ ಆಚ್ರೇಕರ್ ಮತ್ತು ಸಚಿನ್ ತೆಂಡೂಲ್ಕರ್:**

ಶಿಸ್ತು ಮತ್ತು ಕಠಿಣ ಪರಿಶ್ರಮ ಆಧುನಿಕ ಭಾರತದಲ್ಲೂ ಈ ಪರಂಪರೆ ಮುಂದುವರಿದಿದೆ. ಕ್ರಿಕೆಟ್ ಜಗತ್ತಿನ ದೇವರೆಂದೇ ಕರೆಯಲ್ಪಡುವ ಸಚಿನ್ ತೆಂಡೂಲ್ಕರ್ ಅವರ ಯಶಸ್ಸಿನ ಹಿಂದೆ ಕೋಚ್ ರಮೇಶ್ ಆಚ್ರೇಕರ್ ಅವರ ಕಠಿಣ ತರಬೇತಿ ಮತ್ತು ಶಿಸ್ತಿದೆ. ಸಚಿನ್ ಅವರಲ್ಲಿದ್ದ ಕೌಶಲವನ್ನು ಗುರುತಿಸಿ, ಪ್ರತಿದಿನ ಗಂಟೆಗಟ್ಟಲೆ ಅಭ್ಯಾಸ ಮಾಡಿಸಿ, ವಿನಮ್ರತೆಯನ್ನು ಕಲಿಸಿದ ಆಚ್ರೇಕರ್ ಅವರ ಕೊಡುಗೆಯನ್ನು ಸಚಿನ್ ಇಂದು ಕೂಡ ಪ್ರತಿಯೊಂದು ವೇದಿಕೆಯಲ್ಲೂ ಸ್ಮರಿಸುತ್ತಾರೆ.

**ಸಂದೀಪನಿ ಮುನಿ ಮತ್ತು ಶ್ರೀಕೃಷ್ಣ-ಬಲರಾಮರು:** ನಮ್ರತೆ ಮತ್ತು ಸಮಾನತೆಯ ಪಾಠ ತ್ರಿಜಗತ್ತಿನ ಒಡೆಯನಾದ ಶ್ರೀಕೃಷ್ಣ ಮತ್ತು ಆತನ ಸಹೋದರ ಬಲರಾಮ ತಮ್ಮ ವಿದ್ಯಾಭ್ಯಾಸಕ್ಕಾಗಿ ಆಯ್ದುಕೊಂಡದ್ದು ಸಂದೀಪನಿ ಮುನಿಗಳ ಆಶ್ರಮವನ್ನು. ರಾಜಕುಮಾರರಾಗಿದ್ದರೂ ಸಾಮಾನ್ಯರಂತೆ ಆಶ್ರಮದ ಪ್ರತಿಯೊಂದು ಕೆಲಸವನ್ನು ನಿರ್ವಹಿಸಿ, ಸೌದೆ ತರಲು ಕಾಡಿಗೆ ಹೋಗುತ್ತಿದ್ದರು. ಅಲ್ಲಿ ಶ್ರೀಕೃಷ್ಣನಿಗೆ ಸುಧಾಮನಂತ ಬಡ ಬ್ರಾಹ್ಮಣ ಬಾಲಕನ ಗೆಳೆತನ ಸಿಕ್ಕಿತು. ಎಷ್ಟೇ ದೊಡ್ಡ ಅಧಿಕಾರ ಅಥವಾ ಸಾಮರ್ಥ್ಯವಿದ್ದರೂ ಗುರುವಿನ ಮುಂದೆ ಎಲ್ಲರೂ ಒಂದೇ, ಜ್ಞಾನದ ಎದುರು ವಿನಯವೇ ದೊಡ್ಡದು ಎನ್ನುವ ಶ್ರೇಷ್ಠ ಪಾಠವನ್ನು ಈ ಗುರು-ಶಿಷ್ಯರ ಬಾಂಧವ್ಯ ಲೋಕಕ್ಕೆ ಸಾರುತ್ತದೆ.

**ದ್ರೋಣಾಚಾರ್ಯ ಮತ್ತು ಅರ್ಜುನ: ಏಕಾಗ್ರತೆ ಮತ್ತು ಪರಮ ನಿಷ್ಠೆ:** ಮಹಾಭಾರತದಲ್ಲಿ ದ್ರೋಣಾಚಾರ್ಯ ಮತ್ತು ಅರ್ಜುನನ ಸಂಬಂಧವು ಏಕಾಗ್ರತೆಗೆ ಹೆಸರುವಾಸಿ. ಮರದ ಮೇಲಿದ್ದ ಹಕ್ಕಿಯ ಕಣ್ಣು ಮಾತ್ರ ಅರ್ಜುನನಿಗೆ ಕಾಣಿಸುತ್ತಿತ್ತು ಎನ್ನುವುದು ಕೇವಲ ಬಾಣಪ್ರಯೋಗದ ಕಥೆಯಲ್ಲ; ಅದು ಗುರುವಿನ ಪ್ರತಿಯೊಂದು ಮಾತನ್ನು ಅಕ್ಷರಶಃ ಪಾಲಿಸುವ ಶಿಷ್ಯನ ಕಠಿಣ ಏಕಾಗ್ರತೆಗೆ ಸಾಕ್ಷಿ. ದ್ರೋಣಾಚಾರ್ಯರ ಮಾರ್ಗದರ್ಶನ ಅರ್ಜುನನನ್ನು ಜಗತ್ತಿನ ಅಪ್ರತಿಮ ಧನುರ್ಧರನನ್ನಾಗಿ ಮಾಡಿತು.

**ವಿಶ್ವೇಶ್ವರಯ್ಯ ಮತ್ತು ಅವರ ಪ್ರಾಥಮಿಕ ಶಾಲಾ ಶಿಕ್ಷಕ ತಿಪ್ಪಯ್ಯನವರು:** ಸಣ್ಣ ನೆರವಿನಿಂದ ಬೆಳೆದ ರತ್ನ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಬಾಲ್ಯ ಅತ್ಯಂತ ಬಡತನದಿಂದ ಕೂಡಿತ್ತು. ಮುದ್ದೇನಹಳ್ಳಿಯಲ್ಲಿ ಅವರಲ್ಲಿದ್ದ ಕಲಿಯುವ ಹಂಬಲವನ್ನು ಗುರುತಿಸಿದ ಪ್ರಾಥಮಿಕ ಶಾಲಾ ಶಿಕ್ಷಕರಾದ ತಿಪ್ಪಯ್ಯನವರು, ಅವರಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಲಿಲ್ಲ; ತಮ್ಮ ಸ್ವಂತ ವೆಚ್ಚದಲ್ಲಿ ಪುಸ್ತಕಗಳನ್ನು ಕೊಡಿಸಿ, ಮೇಣದಬತ್ತಿಯ ಬೆಳಕಿನಲ್ಲಿ ಓದಲು ಪ್ರೋತ್ಸಾಹಿಸಿದರು. ಆ ಸಣ್ಣ ವಯಸ್ಸಿನಲ್ಲಿ ಗುರುಗಳು ನೀಡಿದ ಬೆಂಬಲವೇ ಮುಂದೆ ಭಾರತದ ಶ್ರೇಷ್ಠ ಎಂಜಿನಿಯರ್ ಹಾಗೂ ನವಮೈಸೂರಿನ ಶಿಲ್ಪಿ ರೂಪುಗೊಳ್ಳಲು ಬಲವಾದ ಅಡಿಪಾಯವಾಯಿತು.

**ವಿ.ಕೆ. ರಾಜವಾಡೆ ಮತ್ತು ಸಾರ್ವಪಲ್ಲಿ ರಾಧಾಕೃಷ್ಣನ್:** ಚಿಂತನೆಗೆ ಹಾದಿ ತೋರಿದ ದಾರಿದೀಪ ಭಾರತದ ಎರಡನೇ ರಾಷ್ಟ್ರಪತಿ ಹಾಗೂ ಶ್ರೇಷ್ಠ ತತ್ವಜ್ಞಾನಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಚಿಂತನಾ ಶಕ್ತಿಗೆ ನೀರೆರೆದವರು ಅವರ ಮದ್ರಾಸ್ ಕ್ರಿಶ್ಚಿಯನ್ ಕಾಲೇಜಿನ ತತ್ವಶಾಸ್ತ್ರದ ಗುರುಗಳು. ಭಾರತೀಯ ತತ್ವಶಾಸ್ತ್ರವನ್ನು ಪಾಶ್ಚಿಮಾತ್ಯ ಪ್ರಪಂಚಕ್ಕೆ ಪರಿಚಯಿಸುವ ಹುಮ್ಮಸ್ಸು ರಾಧಾಕೃಷ್ಣನ್ ಅವರಲ್ಲಿ ಮೂಡಿದ್ದು ತಮ್ಮ ಗುರುಗಳ ಜೊತೆಗಿನ ಆಳವಾದ ಸಂವಾದಗಳಿಂದ. ಶಿಷ್ಯನ ಶೈಕ್ಷಣಿಕ ಎತ್ತರವನ್ನು ಕಂಡು ಹೆಮ್ಮೆಪಟ್ಟ ಗುರುಗಳು, ಕೊನೆಗೆ ತಮ್ಮ ಶಿಷ್ಯನ ಹೆಸರಿನಲ್ಲೇ ಶಿಕ್ಷಕರ ದಿನಾಚರಣೆ ಆಚರಿಸಲ್ಪಡುವಂತಾದುದಕ್ಕೆ ಪ್ರತ್ಯಕ್ಷ ಸಾಕ್ಷಿಯಾದರು.

ಗುರು ಎಂದರೆ ಕೇವಲ ತರಗತಿಯಲ್ಲಿ ಪಾಠ ಮಾಡುವವರಲ್ಲ; ಶಿಷ್ಯನಲ್ಲಿರುವ ಪ್ರತಿಭೆಯ ಕಿಡಿಯನ್ನು ಗುರುತಿಸಿ, ಅದಕ್ಕೊಂದು ಜ್ವಾಲೆಯ ರೂಪ ನೀಡಿ ಸಮಾಜಕ್ಕೆ ಬೆಳಕಾಗುವಂತೆ ಮಾಡುವ ಮಹಾನ್ ಮಾರ್ಗದರ್ಶಕ.

ಗುರು ಮತ್ತು ಶಿಷ್ಯನ ನಡುವಿನ ಸಂಬಂಧವು ಕೇವಲ ಪುಸ್ತಕದ ಜ್ಞಾನವನ್ನು ಹಂಚಿಕೊಳ್ಳುವುದಲ್ಲ; ಅದು ನಂಬಿಕೆ, ಗೌರವ, ಶಿಸ್ತು ಮತ್ತು ಮಮತೆಯಿಂದ ಬೆಸೆದ ಪವಿತ್ರ ಬಂಧ. ಶಿಕ್ಷಕರ ದಿನಾಚರಣೆಯ ಈ ಶುಭ ಸಂದರ್ಭದಲ್ಲಿ, ನಮ್ಮ ಬದುಕಿಗೆ ಹಾದಿ ತೋರಿಸಿದ, ನಮ್ಮಲ್ಲಿದ್ದ ಅಜ್ಞಾನದ ಕತ್ತಲೆಯನ್ನು ಓಡಿಸಿ ಜ್ಞಾನದ ಬೆಳಕು ನೀಡಿದ ಪ್ರತಿಯೊಬ್ಬ ಗುರುಗಳಿಗೂ ಶಿರಸಾ ಸಾಷ್ಟಾಂಗ ಪ್ರಣಾಮಗಳು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,